ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮೇ–ಜೂನ್ 2021
ಬೆಲೆ ರೂ. 1



## ಬಿಸಿಲ ಬೇಗೆಯ ರಾಜಧಾನಿಗೆ ಮಳೆಯ ಸಿಂಚನ



ದೆಹಲಿಯ ಹಿರಿಯ ಕನ್ನಡತಿ ಶ್ರೀಮತಿ ಸಾವಿತ್ರಿ ಶಾಸ್ತ್ರಿ ಈಚೆಗೆ ನಮ್ಮನ್ನಗಲಿದ್ದಾರೆ. ಸಂಘದ ಕಾರ್ಯಕ್ರಮವೊಂದರಲ್ಲಿ ಸಾವಿತ್ರಿ ಶಾಸ್ತ್ರಿ ಅವರು ಮಾತನಾಡುವ ಚಿತ್ರ ಇಲ್ಲಿದೆ. ಶ್ರೀ ಆರ್. ಭರತಾದ್ರಿ, ಮಾಜಿ ಉಪಾಧ್ಯಕ್ಷೆ ಶ್ರೀಮತಿ ಪ್ರಭಾಮೂರ್ತಿ ಹಾಗೂ ಕಾರ್ಯಕಾರಿ ಸಮಿತಿಯ ಮಾಜಿ ಸದಸ್ಯೆ ಶ್ರೀಮತಿ ಸ್ವರ್ಣಲತಾ ಮೃತ್ಯುಂಜಯ ಅವರನ್ನು ಚಿತ್ರದಲ್ಲಿ ಕಾಣಬಹುದು. (ವರ್ಷ 2008)



ಸಂಘದ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಸಾಹಿತಿ ಕೃಷ್ಣಮೂರ್ತಿ ಕಲುಮಂಗಿ, ಸುಂದರ್ ಸಿಂಗ್ ಮತ್ತು ಶ್ರೀಮತಿ ಪಿ.ಆರ್. ಅರುಣಾ ಅವರು ಈಚೆಗೆ ನಮ್ಮನ್ನು ಅಗಲಿದ್ದಾರೆ. ಚಿತ್ರದಲ್ಲಿ ಕೃಷ್ಣಮೂರ್ತಿ ಕಲುಮಂಗಿ (ಮೊದಲ ಸಾಲಿನ ಬಲ ಬದಿ), ಹರಿಶ್ಚಂದ್ರ ಬಂಟ್ವಾಳ್, ಸುಂದರ್ ಸಿಂಗ್ (ಮಧ್ಯದ ಸಾಲಿನಲ್ಲಿ) ಮತ್ತು ಪಿ.ಆರ್. ಅರುಣಾ, ಹಾಲಿ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ (ಕೊನೆಯ ಸಾಲಿನಲ್ಲಿ) ಅವರನ್ನು ಕಾಣಬಹುದು. (ವರ್ಷ 2008)

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳ ಸದಸ್ಯರು
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಅನಂತರಾಮು ಅರಳ
ಡಿ.ವಿ.ಎಸ್. ಮೂರ್ತಿ
ಈಶ್ವರ ಮಡಿವಾಳ

ಸಂಪುಟ 31 । ಸಂಚಿಕೆ 8–9
ಮೇ–ಜೂನ್ 2021

# ಸಂಪಾದಕೀಯ

## ಸಿಂಹಾಸನ ಏರದೇ ದೊರೆಯಾದವರು

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರಲ್ಲಿ ದೇಶಾಭಿಮಾನದ ಜೊತೆಗೆ ಸ್ವಾಭಿಮಾನವೂ ಇತ್ತು. ಆತ್ಮಾಭಿಮಾನ ಇಲ್ಲದವರು ಇನ್ನೊಬ್ಬರ ಅಣತಿಯಂತೆ ಬದುಕುತ್ತಾರೆ. ಸ್ವಾತಂತ್ರ್ಯಕ್ಕಾಗಿ ಜೈಲು ಸೇರಿದ್ದ ಕರ್ನಾಟಕ ಕಂಡ ಮಹಾನ್ ಹೋರಾಟಗಾರರಲ್ಲಿ ಒಬ್ಬರಾದ ರಾಮನಗರ ಜಿಲ್ಲೆಯ ಹಾರೋಹಳ್ಳಿಯ ಎಚ್.ಎಸ್. ದೊರೆಸ್ವಾಮಿ ಅವರು ಸ್ವಾಭಿಮಾನಕ್ಕೆ ಹೆಸರಾಗಿದ್ದರು. ಪತ್ರಕರ್ತರಾಗಿ, ಹೋರಾಟಗಾರರಾಗಿ ದೇಶ ಮತ್ತು ನಾಡು ನುಡಿಯ ಕುರಿತು ಅಪಾರ ಕಳಕಳಿ ಹೊಂದಿದ್ದ ಶತಾಯುಷಿ ದೊರೆಸ್ವಾಮಿ ಅವರು ಈಚೆಗೆ ನಮ್ಮನ್ನು ಅಗಲಿದ್ದು ಬೇಸರದ ಸಂಗತಿ.

ಕರ್ನಾಟಕದ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ದೊರೆಸ್ವಾಮಿ ಅವರನ್ನು ಎಂ.ಎಲ್.ಸಿ. ಮಾಡುವುದಾಗಿ ಹೇಳಿದ್ದರಂತೆ. ಆದರೆ ಒಂದು ಷರತ್ತಿನ ಮೇರೆಗೆ. ದೊರೆಸ್ವಾಮಿಯವರು ಹನುಮಂತಯ್ಯನವರಿಗೆ ನಿಷ್ಠರಾಗಿ ಇರಬೇಕು ಎಂಬುದೇ ಆ ಷರತ್ತು ಆಗಿತ್ತು. ದೊರೆಸ್ವಾಮಿ ಅವರು ಅದಕ್ಕೆ ಒಪ್ಪಲಿಲ್ಲ. ಒಪ್ಪುತ್ತಿದ್ದರೆ ಅವರು ಶಾಸಕರಾಗಿ, ಮಂತ್ರಿಯಾಗಿ ನಂತರ ಮುಖ್ಯಮಂತ್ರಿಯೂ ಆಗಿರುತ್ತಿದ್ದರು ಎನ್ನುವುದರಲ್ಲಿ ಅತಿಶಯೋಕ್ತಿ ಇಲ್ಲ. ಆದರೆ ಅವರು ಸಿಂಹಾಸನ ಏರದೇ ನಾಡಿನ ಹಿತ ಕಾಯುವ ದೊರೆ ಎನಿಸಿಕೊಂಡರು.

ಹಲವಾರು ಕೃತಿಗಳನ್ನು ಬರೆದಿದ್ದ ದೊರೆಸ್ವಾಮಿಯವರು ಸಾಹಿತ್ಯ ಮಂದಿರದ ಮೂಲಕ ಕೃತಿಗಳನ್ನು ಪ್ರಕಟಿಸಿದ್ದರು. ಭೂಹಗರಣ, ಗಣಿ ಹಗರಣ ಸೇರಿದಂತೆ ಎಲ್ಲ ಬಗೆಯ ಅನ್ಯಾಯಗಳ ಎದುರು ಧ್ವನಿ ಎತ್ತಿ ಹೋರಾಟ ಮಾಡಿದ್ದ ದೊರೆಸ್ವಾಮಿಯವರು ತುರ್ತು ಪರಿಸ್ಥಿತಿಯಲ್ಲಿ ಜೈಲು ಸೇರಿದ್ದರು. ಕರ್ನಾಟಕ ಸರಕಾರ ನೀಡುವ ಅತ್ಯುನ್ನತ ಪ್ರಶಸ್ತಿಯಾದ 'ಬಸವ ಪುರಸ್ಕಾರ' ಗೌರವ ಪಡೆದಿದ್ದ ಅಗಲಿದ ಹಿರಿಯ ಚೇತನ ಎಚ್. ಎಸ್. ದೊರೆಸ್ವಾಮಿ ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ.


ಎಚ್.ಎಸ್. ದೊರೆಸ್ವಾಮಿ

ಈ ಕೋವಿಡ್ ಅಲೆಯ ಆತಂಕದ ದಿನಗಳಲ್ಲಿ ಇನ್ನೋರ್ವ ಶತಾಯುಷಿ ಮತ್ತು ಭಾಷಾತಜ್ಞ ಜಿ. ವೆಂಕಟಸುಬ್ಬಯ್ಯನವರನ್ನು ನಾಡು ಕಳೆದುಕೊಂಡಿದೆ. ಹಿರಿಯ ವಿದ್ವಾಂಸ ವೆಂಕಟಸುಬ್ಬಯ್ಯನವರ ಅಗಲಿಕೆ ಸಾರಸ್ವತಲೋಕದಲ್ಲಿ ಶೂನ್ಯ ಸೃಷ್ಟಿಸಿದೆ. ಭಾಷಾ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದ ವೆಂಕಟಸುಬ್ಬಯ್ಯನವರಿಗೆ ನಮ್ಮ ಅಂತಿಮ ನಮನಗಳು.

ದೆಹಲಿಯ ಕನ್ನಡ ವಲಯದಲ್ಲಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ನಿರಂತರ ತೊಡಗಿಸಿಕೊಂಡಿದ್ದ ಹಿರಿಯ ಕನ್ನಡತಿ ಶ್ರೀಮತಿ ಸಾವಿತ್ರಿ ಶಾಸ್ತ್ರಿ ಅವರು ನಮ್ಮನ್ನು ಅಗಲಿದ್ದಾರೆ. ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ದಿ. ಗೋಪಾಲ ಶಾಸ್ತ್ರಿ ಅವರ ಧರ್ಮಪತ್ನಿಯಾಗಿದ್ದ ಸಾವಿತ್ರಿ ಶಾಸ್ತ್ರಿ ಅವರು ಮಾತೃ ಹೃದಯಿಯಾಗಿ ಎಲ್ಲರ ಪ್ರೀತಿ ಪಾತ್ರರಾಗಿದ್ದರು. ಅವರ ಅಗಲಿಕೆ ದುಃಖದಾಯಕ. ಅವರಂತೆ ಸಂಘದಲ್ಲಿ ಸಕ್ರಿಯರಾಗಿದ್ದ ಶ್ರೀಮತಿ ಅರುಣಾ ಪಿ.ಆರ್. ಮತ್ತು ಅವರ ಪತಿ ಸುಂದರ್ ಸಿಂಗ್, ಅತ್ಯುತ್ತಮ ಗಾಯಕರಾಗಿ ಹೆಸರಾಗಿದ್ದ ಅಶೋಕ ಕುಂಬಾರ್, ಸಾಹಿತಿ ಕೃಷ್ಣಮೂರ್ತಿ ಕಲುಮಂಗಿ ಸೇರಿದಂತೆ ಸಂಘದ ಹತ್ತು ಹಲವು ಸದಸ್ಯರ ಅಕಾಲಿಕ ಅಗಲಿಕೆ ನೋವನ್ನು ತಂದಿದೆ. ಇವರೆಲ್ಲರಿಗೂ ನಮ್ಮ ಶ್ರದ್ಧಾ ನಮನಗಳು.

ದೆಹಲಿಯ ಹಲವು ಕನ್ನಡಿಗರು ಕೊರೊನಾ ಎರಡನೇ ಅಲೆಯಿಂದ ಸಂಕಷ್ಟಕ್ಕೀಡಾಗಿದ್ದಾರೆ. ಇವರೆಲ್ಲರ ನೆರವಿಗೆ ಸ್ವಯಂ ಸ್ಫೂರ್ತಿಯಿಂದ ಕೆಲವು ರಾಜಧಾನಿಯ ಕನ್ನಡಿಗರು ನೆರವಾಗಿದ್ದಾರೆ. ಔಷಧಿಗಳನ್ನು ಒದಗಿಸುವುದು, ಆಕ್ಸಿಜನ್ ಕೊರತೆಯಾದಾಗ ಧಾವಿಸುವುದು, ಆಹಾರದ ವಿತರಣೆ, ಸದಸ್ಯರು ತೀರಿಕೊಂಡಾಗ ಅಂತ್ಯ ಸಂಸ್ಕಾರಕ್ಕೆ ನೆರವಾಗುವುದು ಹೀಗೆ ವಿವಿಧ ರೀತಿಯಲ್ಲಿ ಸಹಕರಿಸಿದ ಶ್ರೀಯುತ ಸಿ.ಎಂ. ನಾಗರಾಜ, ಮಮತಾ ಗಿರಿಯಪ್ಪ, ಎನ್.ಆರ್. ಶ್ರೀನಾಥ್, ಶ್ರೀಹರಿ, ಶಿವಪ್ಪ, ದೆಹಲಿ ಕರ್ನಾಟಕ ಸಂಘದ ಸಿಬ್ಬಂದಿ ವರ್ಗ ಸೇರಿದಂತೆ ವಿಪತ್ತಿನ ಕಾಲದಲ್ಲಿ ಸಹಾಯ ಮಾಡಿದ ಇವರ ಈ ಗುಣಕ್ಕೆ ಬೆಲೆ ಕಟ್ಟಲಾಗದು. ಇವರೆಲ್ಲರನ್ನೂ ದೆಹಲಿ ಕರ್ನಾಟಕ ಸಂಘ ಅತ್ಯಂತ ಶ್ರೇಷ್ಠ ಕಾರ್ಯವಾಗಿ ಗುರುತಿಸಿ ಗೌರವಿಸುತ್ತದೆ.

ಎರಡನೇ ಅಲೆ, ಮೂರನೇ ಅಲೆ ಎಂಬ ಆತಂಕಗಳು ದೂರವಾಗಿ ದೇಶ ಮತ್ತು ಪ್ರಜೆಗಳು ನೆಮ್ಮದಿಯಲ್ಲಿ ಬಾಳುವಂತಹ ದಿನಗಳು ಬೇಗನೆ ಬರಲಿ. ಕೊರೊನಾ ಲಸಿಕೆ ಎಲ್ಲರಿಗೂ ದೊರಕಿ, ಸಂಕಷ್ಟಗಳಿಂದ ಮುಕ್ತಿ ಪಡೆಯಲಿ ಎಂದು ಆಶಿಸುವ.

ಡಾ. ಅವನೀಂದ್ರನಾಥ್ ರಾವ್

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 31 ಸಂಚಿಕೆ 8–9
ಮೇ–ಜೂನ್ 2021, ಬೆಲೆ ರೂ. 1

## ನಮ್ಮನಮ್ಮೊಳಗೆ

# ದೆಹಲಿ ಕಂಡ ಕೊರೊನಾದ ಕರಾಳ ನರ್ತನ

ದೆಹಲಿ ಮತ್ತು ಸುತ್ತಲಿನ ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ ಸುಮಾರು ಎರಡು ತಿಂಗಳುಗಳ ನಂತರ ಪರಿಸ್ಥಿತಿ ನಿಧಾನವಾಗಿ ತಿಳಿಯಾಗುತ್ತಿರುವ ಲಕ್ಷಣಗಳು ಕಾಣುತ್ತಿವೆ. ಕೊರೊನಾದ ಕಳೆದ ನಾಲ್ಕಾರು ವಾರಗಳ ಕರಾಳ ನರ್ತನಕ್ಕೆ ಕಡಿವಾಣವನ್ನು ಯಶಸ್ವಿಯಾಗಿ ಹಾಕಿರುವ ಬಗ್ಗೆ ಯಾರೂ ಖಡಾಖಂಡಿತವಾಗಿ ಏನನ್ನೂ ಹೇಳುವಂತಿಲ್ಲ. ದೆಹಲಿಯ ಮುಖ್ಯಮಂತ್ರಿಗಳ ಮಾತಿನಲ್ಲಿ ಮತ್ತು ಇಲ್ಲಿಯ ತನಕವಿದ್ದ ಬಿಗಿಯಾದ ಲಾಕ್‌ಡೌನ್‌ನ್ನು ಹಂತಹಂತವಾಗಿ ಸಡಿಸಲಿಸಿತ್ತಿರುವ ಪರಿಯನ್ನು ಗಮನಿಸಿದಾಗ ಇದು ನಮಗೆ ಅರಿವಾಗುತ್ತದೆ. ದೆಹಲಿಯ ನಾಗರಿಕರು ಆಸ್ಪತ್ರೆಗಳ ದಾಖಲಾತಿಗೆ, ಪ್ರಾಣವಾಯುವಿನ ಸಿಲೆಂಡರ್‌ಗಳಿಗೆ, ಅತ್ಯಗತ್ಯವಾಗಿ ಬೇಕಾದ ಔಷಧಿಗಳಿಗೆ ಪಟ್ಟ ಬವಣೆಯನ್ನು ನೆನೆಸಿಕೊಂಡರೆ ಅದೊಂದು ದುಃಸ್ವಪ್ನದಂತೆ ತೋರುತ್ತದೆ. ಸುಮಾರು ಇಪ್ಪತ್ತೇಳು ಸಾವಿರಕ್ಕೂ ಮೀರಿ ಕೊರೊನಾ ಪೀಡಿತರನ್ನು ಒಂದು ಹಂತದಲ್ಲಿ ಕಂಡ ದೆಹಲಿ ಇದರಿಂದ ತತ್ತರಿಸಿ ಹೋಯಿತು. ನಾವೆಲ್ಲ ಹತ್ತಾರು ಆಪ್ತರನ್ನು, ಸಹೋದ್ಯೋಗಿಗಳನ್ನು, ಬಂಧುಬಾಂಧವರನ್ನು ಕೊರೊನಾದ ಈ ಎರಡನೇಯ ಅಲೆಗೆ ಕಳೆದುಕೊಂಡದ್ದು ಇನ್ನೂ ಮನದಾಳದಿಂದ ಅಳಿಯುವಂತಿಲ್ಲ. ದೆಹಲಿಯ ಹಲವಾರು ಆಪ್ತ ಕನ್ನಡಿಗರನ್ನು ಈ ಅಲೆ ಅಪ್ಪಳಿಸಿದ್ದು ನಮ್ಮನ್ನೆಲ್ಲ ಕಂಗೆಡಿಸಿತ್ತು. ಅವರಲ್ಲಿ ಕೆಲವರನ್ನು ನಾವು ಊಹಿಸಲಾರದ ಪರಿಯಲ್ಲಿ ಕಳೆದುಕೊಂಡಿದ್ದು ಇನ್ನೂ ನಮ್ಮ ಆರಲಾಗದ ಬೇಗುದಿಯ ಭಾಗವಾಗಿದೆ. ಈಗ ಒಂದು ಬಗೆಯ ಮೌನತೆ ನಮ್ಮನ್ನೆಲ್ಲ ಆವರಿಸಿದೆ. ಇವನ್ನೆಲ್ಲ ಹೇಗೆ ಕಳೆದುಕೊಂಡ ಕುಟುಂಬದವರು, ನಾವು–ನೀವೆಲ್ಲ ಎದುರಿಸಬೇಕೆಂಬುದರ ಬಗ್ಗೆ ಯಾವ ಸ್ಪಷ್ಟತೆಯೂ ಕಾಣುತ್ತಿಲ್ಲ. ವಾಸ್ತವದ ಅರಿವು ನಮ್ಮ ಅಂತರಾಳದಿಂದ ನಿಧಾನವಾಗಿ ಇಳಿಯುತ್ತಿದೆ.

ಈ ಎಲ್ಲ ಕಾಲದಲ್ಲೂ ದೆಹಲಿ ಮತ್ತು ಅದರ ಸುತ್ತಮುತ್ತಲಿನ ರಾಜಧಾನಿ ಪ್ರದೇಶದ ಕನ್ನಡಿಗರಿಗೆ ದೆಹಲಿ ಕರ್ನಾಟಕ ಸಂಘ ಮತ್ತು ಅದರ ಹಲವಾರು ಮಾನ್ಯ ಸದಸ್ಯರು ನೀಡಿದ ಸಕಾಲಿಕ ಮತ್ತು ನಿಸ್ಪ್ರಹ ಸೇವೆಯನ್ನು ನಾನು ವಿನಯದಿಂದ ಸ್ಮರಿಸಬಯಸುತ್ತೇನೆ. ಜಾಲತಾಣಗಳ ಮೂಲಕ ಕೊರೊನಾದ ಈ ಎರಡನೇಯ ಅಲೆಗಳಲ್ಲಿ ಸಿಲುಕಿಕೊಂಡವರಿಗೆ ಎಲ್ಲ ಬಗೆಯ ಸಹಾಯ ಹಸ್ತವನ್ನು ಮಾನಸಿಕವಾಗಿ ಮತ್ತು ಭೌತಿಕವಾಗಿ ಚಾಚುವ ಕೆಲಸವನ್ನು ದೆಹಲಿ ಕರ್ನಾಟಕ ಸಂಘದ ಹಲವಾರು ಸದಸ್ಯರು ಮಾಡಿದ್ದನ್ನು ಇಲ್ಲಿ ಉಲ್ಲೇಖಿಸಬೇಕು. ಅವರಿಗೆ ಬೇಕಾದ ಎಲ್ಲ ಬೆಂಬಲ ಮತ್ತು ಸಹಕಾರವನ್ನು ಸಂಘವು ನೀಡಿದೆ. ನಾಲ್ಕಾರು ಸಂದರ್ಭಗಳಲ್ಲಿ ಮಾನ್ಯ ಸದಸ್ಯರು ತಮ್ಮ ಆರೋಗ್ಯದ ಕಾಳಜಿಗಳನ್ನು ಮೀರಿ ಕನ್ನಡಿಗರ ಅತ್ಯಂತ ಸಂಕಷ್ಟದ ಸಮಯದಲ್ಲಿ ಶವಸಂಸ್ಕಾರಕ್ಕೂ ಮುಂದಾದದ್ದನ್ನು ನಾವು ವಿನಮ್ರತೆಯಿಂದ ನಮೂದಿಸಬೇಕು. ಹಲವಾರು ಮಾನ್ಯ ಸದಸ್ಯರು ಸಂಘದಲ್ಲೇ ಕನ್ನಡಿಗರಿಗಾಗಿ ಕೋವಿಡ್ ಕೇರ್ ಸೆಂಟರನ್ನು ಪ್ರಾರಂಭಿಸುವ ಬಗ್ಗೆ ಸಲಹೆಯನ್ನು ನೀಡಿದ್ದರು. ಕೆಲವರು ಆಕ್ಸಿಜನ್ ಸಿಲೆಂಡರ್‌ಗಳನ್ನು ಕನ್ನಡಿಗರಿಗೆ ಪೂರೈಸುವ ಬಗೆಗೂ ಸಲಹೆ ನೀಡಿದ್ದರು. ಈ ಎಲ್ಲ ಸಲಹೆಗಳನ್ನೆಲ್ಲ ನಾವು ಪರಿಶೀಲಿಸಿ ಸರಕಾರದ ಪ್ರಸಕ್ತ ನಿಯಮಾವಳಿಗಳ ಪ್ರಕಾರ ಇದು ಸಾಧ್ಯವಿಲ್ಲವೆಂಬುದನ್ನು ಮನಗಂಡೆವು. ಸದಸ್ಯರಿಗೆ ಈ ನಮ್ಮ ಮಿತಿಗಳನ್ನು ತಿಳಿಸಿ ಇನ್ನುಳಿದಂತೆ ಕೋವಿಡ್‌ನಿಂದ ಬಳಲುತ್ತಿರುವ ಕನ್ನಡಿಗರಿಗೆ ಆಹಾರ ಮತ್ತು ಔಷಧಿಗಳನ್ನು ಒದಗಿಸುವ ಕೆಲಸವನ್ನು ಮಾಡಿದೆವು. ಇನ್ನೂ ಹಲವು ಸದಸ್ಯರು ಮತ್ತು ಆಯಾ ಭಾಗದ ಕನ್ನಡ ಸಂಘಟನೆಗಳು ಸಹ ತಮ್ಮ ಕಾಲೋನಿಯಲ್ಲಿ ಕೋವಿಡ್‌ಗೆ ಪಕ್ಕಾಗಿರುವ ಕನ್ನಡಿಗರಿಗೆ ಬೇಕಾದ ಎಲ್ಲ ಸಹಾಯವನ್ನು ನೀಡಿದ್ದನ್ನು ನಾನು ಇಲ್ಲಿ ಉಲ್ಲೇಖಿಸಬೇಕು. ಕರ್ನಾಟಕ ಸರಕಾರವೂ ಸಹ ಕೋವಿಡ್ ಮಾಹಿತಿ ಕೇಂದ್ರವೊಂದನ್ನು ಪ್ರಾರಂಭಿಸದ್ದನ್ನು ಸಹ ನಾನು ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಈ ಎಲ್ಲ ಕಾಲದಲ್ಲೂ ಸಂಘದ ಕಾವಲು ಸಮಿತಿ ನೀಡಿದ ಸಲಹೆ ಮತ್ತು ಒಪ್ಪಿಗೆಗಳನ್ನು ನಾನು ಕರತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಆದರೆ, ಈ ಎರಡನೇಯ ಅಲೆಯ ಕಾಲದಲ್ಲಿ ಗಂಭೀರವಾಗಿ ಕೋವಿಡ್ ಪೀಡಿತರಾದವರಿಗೆ ಆಸ್ಪತ್ರೆ ದೊರೆಯುವುದೆ ಒಂದು ದೊಡ್ಡ ಕಷ್ಟಕರವಾದ ಸಂಗತಿಯಾಗಿತ್ತು. ಐಸಿಯು, ವೆಂಟಿಲೇಟರ್, ಆಕ್ಸಿಜನ್ ಮತ್ತು ಬೇಕಾದ ಔಷಧಿಗಳನ್ನು ಒದಗಿಸುವುದೆ ಅಸಾಧ್ಯವಾಗುವ ಸನ್ನಿವೇಶಗಳೇ ನಮಗೆಲ್ಲ ಎದುರಾಗಿ ಸಾಕಷ್ಟು ಆತಂಕಕ್ಕೆ ಎಡೆ ಮಾಡಿಕೊಟ್ಟವು. ಒಂದೇ ಕುಟುಂಬದ ಹಲವರು ಕೋವಿಡ್‌ನಿಂದಾಗಿ ಆಸ್ಪತ್ರೆಗೆ ದಾಖಲಾದರೆ ಅದ–ರಿಂದ ಉದ್ಭವವಾಗುವ ಸಮಸ್ಯೆಗಳು ಇನ್ನೊಂದು ತೆರನಾದದ್ದಾಗಿತ್ತು. ಈ ಎಲ್ಲದರ ನಡುವೆ ನಮ್ಮನ್ನೆಲ್ಲ ಅಗಲಿ ಸಾಗಿದ ಹಲವಾರು ಆಪ್ತ ಕನ್ನಡಿಗರನ್ನು ನೆನೆಸಿಕೊಳ್ಳುವ ವ್ಯವಧಾನವೂ ಇಲ್ಲದಂತಾಗಿತ್ತು. ನಮಗೆಲ್ಲ ದೆಹಲಿ ಕನ್ನಡಿಗರ ಈ ಬವಣೆಯ ಜೊತೆಗೆ ನಮ್ಮ ಹಲವಾರು ಸಹೊದ್ಯೋಗಿಗಳ ಅಗಲಿಕೆಯ ದುಃಖದ ಭಾರವನ್ನು ಹೊರುವ ಅನಿವಾರ್ಯತೆಯೂ ಇತ್ತು. ಒಂದು ಬಗೆಯ ಮಾನಸಿಕ ಒತ್ತಡಗಳ ನಡುವೆ ನಾವೆಲ್ಲ ಕಳೆದ ಎರಡು ತಿಂಗಳುಗಳ ಕಾಲ ಬದುಕಿದೆವು. ಈ ಬಾರಿಯ ಅಭಿಮತದ ಪುಟಗಳಲ್ಲಿ ನೀವು ನಮ್ಮನ್ನೆಲ್ಲ ಬಿಟ್ಟು ಅಗಲಿದ ದೆಹಲಿ ಕನ್ನಡಿಗರ ವಿವರಗಳನ್ನು ಗಮನಿಸಬಹುದು. ಶ್ರದ್ಧಾಂಜಲಿ, ಕಂಬನಿ... ಅಗಲುವಿಕೆಯ ನೋವನ್ನು ನಾವು ಸಂಘದ ಪರವಾಗಿ ಕಾಲಕಾಲಕ್ಕೂ ತಮ್ಮೊಂದಿಗೆ ಹಂಚಿಕೊಳ್ಳುವ ಕಾರ್ಯವನ್ನು ಮಾಡಿದ್ದೇವೆ. ದಿನ ಬೆಳಗಾದರೆ ಜಾಲತಾಣಗಳಲ್ಲಿ ಮೂಡಿಬರುವ ಈ ಬಗೆಯ ಸುದ್ದಿಗಳನ್ನು ಜೀರ್ಣಿಸಿಕೊಳ್ಳುವುದೆ ಅಸಾಧ್ಯಾವಾಗಿ ಹೋಗುವ ಮನಸ್ಥಿತಿ ನಮ್ಮದಾಗಿತ್ತು.

ಇದು ಬರಿ ದೆಹಲಿ ಮತ್ತು ಅದರ ರಾಜಧಾನಿ ಪ್ರದೇಶದ ಚಿತ್ರಣವಷ್ಟೆ ಅಲ್ಲ. ನಮ್ಮ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ, ಅದರಲ್ಲೂ ಪ್ರಮುಖವಾಗಿ ಕರ್ನಾಟಕದಲ್ಲಿ, ಈ ಕೋವಿಡ್‌ನ ಕರಾಳ ಛಾಯೆ ವಿಸ್ತ್ರತವಾಗಿ ಪಸರಿಸಿದ್ದನ್ನು ನಾವು ಕಾಣುತ್ತಿದ್ದೇವೆ. ನಮ್ಮ ಕರ್ನಾಟಕದ ಊರುಊರುಗಳಲ್ಲಿ ಈ ಬಾರಿ ಈ ಕೋವಿಡ್ ತನ್ನ ಕಬಂಧಬಾಹುಗಳನ್ನು ಚಾಚಿದೆ. ಸಾವಿರಾರು ಕನ್ನಡಿಗರನ್ನು ನಾವು ಕಳೆದುಕೊಂಡಿದ್ದೇವೆ. ಕರ್ನಾಟಕದಲ್ಲಿ ಪರಿಸ್ಥಿತಿ ನಿಧಾನವಾಗಿ ನಿಯಂತ್ರಣಕ್ಕೆ ಬರುತ್ತಿರುವ ಸೂಚನೆಗಳು ಕಾಣುತ್ತಿವೆ.

ಈ ಕೊರೊನಾದಿಂದ ನಮಗೆ ಮುಕ್ತಿ ಎಂದು? ಮಕ್ಕಳ ಪರೀಕ್ಷೆಗಳ ವೇಳಾಪಟ್ಟಿ ಏರುಪೇರಾಗಿ ಹೋಗಿದೆ. ಹೀಗಾಗಿ ಅವರೆಲ್ಲರೂ ಒಂದು ಬಗೆಯ ಮಾನಸಿಕ ಒತ್ತಡದ ಪರಿಧಿಯಲ್ಲಿ ಸಿಲುಕಿಕೊಂಡಿದ್ದಾರೆ. ಮುಂದಿನ ಹೆಜ್ಜೆಯನ್ನು ಹೇಗೆ ಮತ್ತು ಎಲ್ಲಿ ಇಡಬೇಕು ಎಂಬುದರ ಬಗ್ಗೆ ಯಾರಿಗೂ ಖಚಿತತೆಯಿಲ್ಲ. ಕೇಂದ್ರ ಮತ್ತು ಆಯಾಯಾ ರಾಜ್ಯ ಸರಕಾರಗಳು ಎಡಬಿಡದೆ ಈ ಬಗೆ–ಯ ಅನಿಶ್ಚಿತತೆಗಳನ್ನು ದೂರ ಮಾಡುವತ್ತ ತಮ್ಮ ನಿರ್ಣಯಗಳನ್ನು ಮತ್ತು ಪ್ರಯತ್ನಗಳನ್ನು ಮಾಡುತ್ತಿವೆ. ಕೊರೊನಾದ ಲಸಿಕೆಗಳನ್ನು ಹೆಚ್ಚಿನವರಿಗೆ ನೀಡುವತ್ತ ಸರಕಾರಗಳು ಮತ್ತು ಆಸ್ಪತ್ರೆಗಳು ಒಟ್ಟಾಗಿ ಕೆಲಸ ಮಾಡುತ್ತಿವೆ. ಇದರಿಂದ ನಾವು ಕೊರೊನಾವನ್ನು ಹಿಮ್ಮೆಟ್ಟಿಸಬಹುದೆಂಬುದರ ಬಗ್ಗೆ ಎಲ್ಲ ತಜ್ಞರ ಒಕ್ಕೊರಲಿನ ಸಮ್ಮತಿಯಿದೆಯೆಂಬುದನ್ನು ನಾವು ಗಮನಿಸಬೇಕು. ಸರಕಾರಗಳು ಬಡವರು ಬಲ್ಲಿದವರು ಎಂಬ ತಾರತಮ್ಯವಿಲ್ಲದೆ ಎಲ್ಲರಿಗೂ ಉಚಿತವಾಗಿ ದೇಶದಾದ್ಯಂತ ಲಸಿಕೆಯನ್ನು ಈ ವರ್ಷಾಂತ್ಯದೊಳಕ್ಕೆ ನೀಡುವ ಕೆಲಸವನ್ನು ಮಾಡಬೇಕು. ಈ ಎಲ್ಲ ಕಾಲದಲ್ಲಿ ನಮ್ಮ ಉಳಿದ ಎಲ್ಲ ದೇಶದ ಗೊಂದಲಗಳನ್ನು ಬದಿಗಿರಿಸಿ ಈ ಕೊರೊನಾದ ವಿರುದ್ಧ ಲಸಿಕೆಗಳ ಶಸ್ತ್ರವನ್ನು ಉಪಯೋಗಿಸಿ ನಾವು ನಮ್ಮ ಜನಸಮುದಾಯದ ಬದುಕನ್ನು ಉಳಿಸಿಕೊಂಡು ನೆಮ್ಮದಿಯನ್ನು ತರುವಂತಾಗಲಿ ಎಂದು ಹಾರೈಸೋಣ.

***ಡಾ. ವೆಂಕಟಾಚಲ ಹೆಗಡೆ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳಿಗೆ ನಮಸ್ಕಾರಗಳು.

ಅಭಿಮತ ದೆಹಲಿ ಕರ್ನಾಟಕ ಸಂಘದ ಮುಖ ಪತ್ರಿಕೆ. ಈ ಪತ್ರಿಕೆಯಲ್ಲಿ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಎಲ್ಲಾ ಸದಸ್ಯರಿಗೆ ಮಾಹಿತಿ ತಿಳಿಯುತ್ತಿದೆ ಎಂದು ನಂಬಿಕೊಂಡಿದ್ದೇವೆ. ಈ ಬಾರಿ ಮಾರಕ ರೋಗ ಕೊರೋನಾದಿಂದಾಗಿ ಮೇ ಮತ್ತು ಜೂನ್ ಎರಡು ತಿಂಗಳ ಸಂಯುಕ್ತ ಸಂಚಿಕೆಯನ್ನು ತರಲಾಗಿದೆ.

ಇಂತಹ ವಿಷಮ ಪರಿಸ್ಥಿತಿಯಲ್ಲಿ ದೆಹಲಿ ಕರ್ನಾಟಕ ಸಂಘ ನಮ್ಮ ಸದಸ್ಯರಿಗೆ ಸಾಧ್ಯವಾದಷ್ಟು ಸಹಾಯ ಸಹಕಾರ ನನ್ನ ವೈಯಕ್ತಿಕವಾಗಿ ಹಾಗೂ ಸಂಘದ ಸಹಕಾರದೊಂದಿಗೆ ಮಾಡಿದ್ದೇವೆ. ಎಷ್ಟೋ ಕನ್ನಡಿಗರಿಗೆ ಸಹಾಯವಾದರೆ ಎಷ್ಟೋ ನಮ್ಮ ಸದಸ್ಯರನ್ನು ಈ ಮಾರಕ ರೋಗದಲ್ಲಿ ನಾವು ಕಳೆದುಕೊಂಡಿದ್ದೇವೆ. ಇದು ಇತಿಹಾಸದಲ್ಲಿ ಅತ್ಯಂತ ಭಯಾನಕ ಪರಿಸ್ಥಿತಿ. ಇದರಲ್ಲಿ ನಾವು ಪ್ರಯಾಣ ಮಾಡಿದ್ದೇವೆ.

ಈ ಮಾರಕ ರೋಗ ಕೊರೊನದಿಂದ ನಾವು ಇನ್ನೂ ಅನೇಕ ಸಂಕಷ್ಟಗಳನ್ನು ಗೆದ್ದುಕೊಂಡು ಬಂದಿದ್ದೇವೆ. ಇನ್ನೂ ತುಂಬಾ ಜಾಗ್ರತೆಯಿಂದ ಇರಬೇಕಾಗಿದೆ. ಈ ಸಂದರ್ಭದಲ್ಲಿ ನಮ್ಮ ದೆಹಲಿ ಕರ್ನಾಟಕ ಸಂಘದ ಅನೇಕ ಸದಸ್ಯರನ್ನು ಕಳೆದುಕೊಂಡಿದ್ದೇವೆ. ಇವರ ಆತ್ಮಕ್ಕೆ ಮೋಕ್ಷ ಸಿಗಲಿ ಮತ್ತು ಅವರೆಲ್ಲರ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಈ ಮಾರಕ ರೋಗ ಪೂರ್ತಿಯಾಗಿ ಮುಕ್ತವಾಗಿಲ್ಲ. ಸದ್ಯಕ್ಕೆ ದೆಹಲಿಯಲ್ಲಿ ಸ್ವಲ್ಪ ವಾತಾವರಣ ಸರಿಯಾಗಿದೆ. ಬರುವ ದಿನಗಳಲ್ಲಿ ನಾವು ಈ ಮಾರಕ ರೋಗವನ್ನು ಇನ್ನೂ ಎದುರಿಸಬೇಕಾಗಿದೆ. ಇಂತಹ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಚುನಾವಣೆಯು ಸಹ ಇದ್ದು ಅದನ್ನು ಚುನಾವಣಾಧಿಕಾರಿಗಳು ಮುಂದೂಡಿದ್ದಾರೆ. ಜೂನ್-ಜುಲೈ ನಂತರ ಚುನಾವಣಾ ಅಧಿಕಾರಿಗಳಿಗೆ ಮತ್ತು ಸದಸ್ಯರಿಗೆ ಸರಿಯಾದ ಸಮಯವನ್ನು ನೋಡಿ ಈ ಹೊಸ ಕಾರ್ಯಕಾರಿ ಸಮಿತಿಯನ್ನು ಸಹ ಆಯ್ಕೆ ಮಾಡಬೇಕಾಗಿದೆ. ಸದ್ಯಕ್ಕೆ ಸಂಘದ ಕಾರ್ಯಚಟುವಟಿಕೆಗಳನ್ನು ಕೇಂದ್ರ ಮತ್ತು ರಾಜ್ಯದ ನಿಯಮಾವಳಿಗಳ ಪ್ರಕಾರ ನಿಲ್ಲಿಸಿದ್ದೇವೆ. ಆದಷ್ಟು ಬೇಗನೆ ಈ ಮಾರಕ ರೋಗ ಕೊರೊನಾ ಮುಕ್ತವಾಗಲಿ.

ಮುಂದೆ ಕೂಡಾ ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರತೀ ಭಾನುವಾರ ನಡೆಯಲೆಂದು ಆಶಿಸುತ್ತೇನೆ. ಮುಂಬರುವ ಮಾರಕ ರೋಗ ಕೊರೊನ ಮೂರನೇ ಅಲೆ ಮಕ್ಕಳಿಗೆ ಎಂದು ತಜ್ಞರು ತಿಳಿಸಿರುವುದರಿಂದ ಮಕ್ಕಳನ್ನು ಮತ್ತು ಹಿರಿಯರನ್ನು ಮುಖ್ಯವಾಗಿ ತಾವು ಸುರಕ್ಷಿತವಾಗಿರಿ ಎಂದು ಹೇಳುತ್ತಾ ಈ ಸಂದರ್ಭದಲ್ಲಿ ನಮ್ಮನ್ನು ಅಗಲಿದ ಸದಸ್ಯರಿಗೆ ಮತ್ತೊಮ್ಮೆ ಭಾವ ಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ಅವರ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಆಶಿಸುತ್ತೇನೆ. ಮುಂಬರುವ ದಿನಗಳು ಒಳ್ಳೆಯ ದಿನಗಳು ಬರಲಿ ಎಂದು ಆಶಿಸುತ್ತೇನೆ. ದೆಹಲಿ ಕರ್ನಾಟಕ ಸಂಘದಲ್ಲಿ ನಾವು ಎಲ್ಲರೂ ಸಿಗೋಣ ಎಂದು ಆಶಿಸುತ್ತೇನೆ. ನಿಮ್ಮೆಲ್ಲ ಕುಟುಂಬದವರಿಗೆ ಬರುವ ದಿನಗಳು ಶುಭಾಗಮನವಾಗಲಿ.

***ಸಿ.ಎಂ. ನಾಗರಾಜ***
***ಪ್ರಧಾನ ಕಾರ್ಯದರ್ಶಿ***

# ಅಗಲಿದ ಪದ್ಮಶ್ರೀ ಪ್ರೊ. ಜಿ. ವೆಂಕಟಸುಬ್ಬಯ್ಯ

## ಶ್ರದ್ಧಾಂಜಲಿ



ಕನ್ನಡದ ನಿಘಂಟು ತಜ್ಞ, ಸಂಶೋಧಕ, ಶಬ್ದ ಬ್ರಹ್ಮ, ನುಡಿ ಗಾರುಡಿಗ, ಅಕ್ಷರ ಬ್ರಹ್ಮ, ನಡೆದಾಡುವ ನಿಘಂಟು ಎಂದೇ ಜನಪ್ರಿಯರಾಗಿದ್ದ ಪದ್ಮಶ್ರೀ ಪುರಸ್ಕೃತ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಈಚೆಗೆ ವಿಧಿವಶರಾಗಿದ್ದಾರೆ. 107 ವರ್ಷ ಬದುಕಿದ್ದ ಪ್ರೊ. ಜಿ.ವಿ. ಯವರು ಸಾಹಿತ್ಯ ವಿಮರ್ಶೆ, ಸಂಶೋಧನೆ, ಅನುವಾದ, ನಿಘಂಟು ರಚನೆ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆ ಅಪಾರ. ಬದುಕಿನುದ್ದಕ್ಕೂ ಲವಲವಿಕೆ, ಹುರುಪಿನಿಂದ ಇದ್ದ ಅವರ ಅಗಲಿಕೆ ಕನ್ನಡಿಗರನ್ನು, ಸಾಹಿತ್ಯ ಪ್ರಿಯರನ್ನು ದುಃಖಕ್ಕೀಡುಮಾಡಿದೆ.

ಗಂಜಮ್ ವೆಂಕಟಸುಬ್ಬಯ್ಯ ಪ್ರೊ. ಜಿ. ವೆಂಕಟಸುಬ್ಬಯ್ಯ ಎಂದೇ ಜನಪ್ರಿಯರಾಗಿದ್ದರು. ಇವರು ಹುಟ್ಟಿದ್ದು 1913ರ ಆಗಸ್ಟ್ 23ರಂದು, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಗಂಜಮ್ ಗ್ರಾಮದಲ್ಲಿ. ಅವರ ತಂದೆ ಗಂಜಮ್ ತಿಮ್ಮಯ್ಯ ಖ್ಯಾತ ಕನ್ನಡ ಮತ್ತು ಸಂಸ್ಕೃತ ಪಂಡಿತರಾಗಿದ್ದರು. ಇದರಿಂದಾಗಿಯೇ ಬಾಲಕನಾಗಿದ್ದಾಗಲೇ ವೆಂಕಟಸುಬ್ಬಯ್ಯನವರಿಗೆ ಸಾಹಿತ್ಯದಲ್ಲಿ ಒಲವು ಬೆಳೆಯಿತು.

1930ರ ದಶಕದ ಆರಂಭದ ವೇಳೆಗೆ, ವೆಂಕಟಸುಬ್ಬಯ್ಯ ಅವರ ಕುಟುಂಬವು ಮೈಸೂರು ನಗರಕ್ಕೆ ಸ್ಥಳಾಂತರಗೊಂಡಿತು. ವೆಂಕಟಸುಬ್ಬಯ್ಯ ಇಲ್ಲಿ ಮೈಸೂರಿನ ಯುವರಾಜ ಕಾಲೇಜಿಗೆ ಸೇರಿದರು. ಕುವೆಂಪು ಅವರ ಪ್ರಭಾವಕ್ಕೆ ಒಳಗಾದರು. ನಂತರ ಅವರು ಮೈಸೂರಿನ ಮಹಾರಾಜ ಕಾಲೇಜಿಗೆ ಸೇರಿದರು. ಅಲ್ಲಿ ಅವರು ಆಯ್ಕೆ ಮಾಡಿದ್ದ ವಿಷಯ ಪ್ರಾಚೀನ ಇತಿಹಾಸ, ಸಂಸ್ಕೃತ ಮತ್ತು ಹಳೆಯ ಕನ್ನಡವಾಗಿತ್ತು.

ಇಂದಿಗೂ ಕನ್ನಡ ವ್ಯಾಕರಣ, ಶಬ್ದ ಭಂಡಾರ, ಶಬ್ದಕೋಶಕ್ಕೆ ವೆಂಕಟಸುಬ್ಬಯ್ಯನವರು ಬರೆದ ಪುಸ್ತಕಗಳನ್ನು ಅನುಸರಿಸುವವರು ಅನೇಕ ಮಂದಿ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟುವಿನ ಪ್ರಧಾನ ಸಂಪಾದಕರಾಗಿ ಸೇವೆ ಸಲ್ಲಿಸಿದ್ದ ಪ್ರೊ.ಜಿ. ವೆಂಕಟಸುಬ್ಬಯ್ಯ ಅವರು ಸುಮಾರು 70 ಪುಸ್ತಕಗಳನ್ನು, 14 ನಿಘಂಟುಗಳನ್ನು ಪ್ರಕಟಗೊಳಿಸಿದ್ದಾರೆ.

ಪ್ರೊ. ಜಿ.ವಿ.ಯವರು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆಗೆ ಕೇಂದ್ರ ಸರ್ಕಾರದ ಪದ್ಮಶ್ರೀ ಪ್ರಶಸ್ತಿ ಗಳಿಸಿದ್ದರು.

ಅವರು ನಿಘಂಟು ಪರಿವಾರ, ಅಕ್ರೂರ ಚರಿತ್ರೆ, ಇಗೊ ಕನ್ನಡ, ಗತಿ ಪ್ರಜ್ಞೆ, ಕನ್ನಡವನ್ನು ಉಳಿಸಿ ಬೆಳೆಸಿದವರು, ಅನುಕಲ್ಪನೆ, ಕರ್ಣ ಕರ್ಣಾಮೃತ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. 77ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಭಾಷಾ ಸಮ್ಮಾನ್ ಪ್ರಶಸ್ತಿ ಸೇರಿದಂತೆ ಉನ್ನತ ಪ್ರಶಸ್ತಿಗಳು ಪ್ರೊ. ಜಿ.ವಿ. ಅವರಿಗೆ ಸಂದಿದೆ. ಅಗಲಿದ ಹಿರಿಯ ಚೇತನ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

# ಅಂಬೇಡ್ಕರ್ ವಿಚಾರಧಾರೆಗಳು ಎಂದೆಂದಿಗೂ ಪ್ರಸ್ತುತ

## - ಡಾ. ವೆಂಕಟಾಚಲ ಹೆಗಡೆ




ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರು ಈ ದೇಶಕ್ಕೆ ನೀಡಿದ ಕೊಡುಗೆ ಅಪಾರ, ಅವರ ಆದರ್ಶ ವಿಚಾರಗಳು ಎಂದೆಂದಿಗೂ ಪ್ರಸ್ತುತವಾಗಿವೆ ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಅವರು ಹೇಳಿದರು.

ದೆಹಲಿ ಕರ್ನಾಟಕ ಸಂಘ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಇವರ ಸಹಯೋಗದಲ್ಲಿ ಏಪ್ರಿಲ್ 14ರ ಬುಧವಾರ ಏರ್ಪಡಿಸಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರ 130ನೇ ಜಯಂತ್ಯುತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ವೆಂಕಟಾಚಲ ಹೆಗಡೆ ಅವರು, ಶೋಷಿತ ವರ್ಗಕ್ಕೆ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆ ಅನನ್ಯವಾದುದಾಗಿದೆ. ಸಮಾಜದ ಏಳಿಗೆಗಾಗಿ ನಿರಂತರವಾಗಿ ದುಡಿದವರು. ಅವರು ಕಂಡ ಕನಸನ್ನು ನನಸಾಗಿಸಲು ಹಗಲಿರುಳು ಶ್ರಮವಹಿಸಿದರು. ಬೃಹತ್ ಸಂವಿಧಾನದ ಕೊಡುಗೆ ಈ ದೇಶಕ್ಕೆ ನೀಡಿದ್ದಾರೆ. ಅವರ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ನಡೆಯಬೇಕಾಗಿದೆ. ಕಾರ್ಮಿಕ ವರ್ಗದ ಹಕ್ಕುಗಳಿಗೆ ಅನೇಕ ಕಾಯ್ದೆಗಳನ್ನು ರೂಪಿಸಿದ್ದಾರೆ. ಅಂಬೇಡ್ಕರ್ ಅವರು-ಎಲ್ಲರ ಒಳಿತಿಗಾಗಿ ಶ್ರಮಿಸಿದವರು. ಇಂತಹ ಮಹಾನ್ ಮಾನವತಾವಾದಿಯ ಜೀವನ ಚರಿತ್ರೆ ಪ್ರತಿಯೊಬ್ಬ ಯುವಜನತೆ ಅರಿತುಕೊಳ್ಳಬೇಕು. ಅವರು ವಿಶ್ವವೇ ಪೂಜಿಸುವಂತಹ ಮಹಾನ್ ವ್ಯಕ್ತಿ ಹಾಗೂ ಅದೊಂದು ಶಕ್ತಿ. ಭಾರತೀಯರು ನಾವು ಒಂದೇ ಎನ್ನುವ ದೇಶ ಪ್ರೇಮವನ್ನು ಅವರು ಬೆಳೆಸಿಕೊಂಡಿದ್ದರು. ನವದೆಹಲಿಯ ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಅವರಿಗೆ ತಮ್ಮ ಸಹಕಾರ ಇದ್ದು, 'ಸ್ಫೂರ್ತಿ' ಎನ್ನುವ ಹೆಸರಿನಲ್ಲೇ ಎಲ್ಲವು ಅಡಗಿದೆ. ದೆಹಲಿಯಲ್ಲಿ ಸ್ಫೂರ್ತಿಯಿಂದ ಕಾರ್ಯಕ್ರಮ ಆಯೋಜಿಸಿರುವುದು ಸಂತಸದ ವಿಷಯ ಎಂದು ಡಾ. ವೆಂಕಟಾಚಲ ಹೆಗಡೆ ತಿಳಿಸಿದರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ್ ಮಾತನಾಡಿ, ನವದೆಹಲಿಯ ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಇವರು ಸುಮಾರು ಐದಾರು ವರ್ಷಗಳಿಂದ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಆಚರಿಸಿಕೊಂಡು ಬರುತ್ತಿದ್ದಾರೆ. ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರು ಒಂದೆಡೆ ಸೇರಿ, ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಜನರಿಗೆ ತಲುಪಿಸುವ ಕಾರ್ಯ ಮಾಡುವಲ್ಲಿ ಯಶಸ್ವಿಯಾಗಿದ್ದು, ಮತ್ತಷ್ಟು ಅರ್ಥಪೂರ್ಣವಾಗಿ ಆಚರಿಸಲು ಕಂಕಣಬದ್ಧರಾಗೋಣ ಎಂದರು. ಕನ್ನಡ ಶಾಲೆಯ ಉಪಾಧ್ಯಕ್ಷ ಚಂದ್ರಶೇಖರ್ ಎನ್.ಪಿ. ಅವರು ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಲಾಯಿತು. ಕಾರ್ಯಕ್ರಮವು ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. 'ಕಂದಾ ಕಂದಾ ಅಂಬೇಡ್ಕರರಂತಾಗು' ಎಂಬ ಪ್ರಾರ್ಥನಾ ಗೀತೆಯನ್ನು ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಕಾರ್ಯದರ್ಶಿ ಎಸ್. ಕುಮಾರ್ ಅವರು ಸುಶ್ರಾವ್ಯವಾಗಿ ಹಾಡಿದರು.

ಅಧ್ಯಕ್ಷ ಬಿ.ಕೆ. ಬಸವರಾಜ್ ಅವರು ಸ್ವಾಗತ ಕೋರಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ. ಎಂ.ಎಸ್. ಶಶಿಕುಮಾರ್ ಅವರು ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯದರ್ಶಿ ಎಸ್. ಕುಮಾರ್ ವಂದಿಸಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಟಿ.ಎಂ. ಮೈಲಾರಪ್ಪ, ದೆಹಲಿ ಕರ್ನಾಟಕ ಸಂಘದ ಖಜಾಂಚಿ ಆಶಾಲತಾ ಮಹಾದೇವ್, ಕಾರ್ಯಕಾರಿ ಸಮಿತಿ ಸದಸ್ಯ ಶಿವಪ್ಪ, ಸತೀಶ್ ನಾಯ್ಕ, ಎಂ.ಆರ್. ಸತೀಶ್, ಆನಂದ ಮುರಗೋಡ, ರಾಧಾಕೃಷ್ಣ, ಕೆ.ಆರ್. ವೆಂಕಟೇಶ್, ಈಶ್ವರ ಕಟ್ಟಿಮನಿ, ಸಿ. ಮೋಹನ ಕುಮಾರ್, ಹರಿಕೃಷ್ಣ, ಡಾ. ಕಾರ್ತಿಕ್, ಆಂಜನೇಯ, ಸಿ. ನಟರಾಜ್, ತ್ಯಾಗೇಶ್ ಮೂರ್ತಿ, ಸಂದೀಪ್, ರಮೇಶ್, ವಿಜಯಕುಮಾರ್ ಆರ್. ತೋರಗಲ್, ಹರೀಶ್ ವೈ.ಎಂ. ಮತ್ತಿತರರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಕಾರ್ಯಕ್ರಮದ ಅಂಗವಾಗಿ ಸಿಹಿ ಹಂಚಲಾಯಿತು.

**ಎಸ್. ಕುಮಾರ**

# 'ಪದ್ಯ ಪಂದ್ಯಾವಳಿ' ಹಾಡುಗಳ ಸರಪಳಿಯ ವಿಶಿಷ್ಟ ಕಾರ್ಯಕ್ರಮ




ಕೊರೊನಾ ಸಂಕಷ್ಟದ ಸಂದರ್ಭದಲ್ಲಿ ರಂಗಭೂಮಿಯ ನಿರಂತರತೆಯನ್ನು ಕಾಯ್ದುಕೊಂಡು ಬರುವ ಹಿನ್ನೆಲೆಯಲ್ಲಿ ದೆಹಲಿಯ 'ದಿನಕರ' ಒಂದಿಲ್ಲೊಂದು ರಂಗ ಚಟುವಟಿಕೆಗಳನ್ನು ನಡೆಸುತ್ತಾ ಬರುತ್ತಿದೆ. ಕನ್ನಡ ರಂಗಭೂಮಿಯ ಸಾಧನೆಯ ಸಾರ್ಥಕರ ಅನುಭವ ನುಡಿಗಳು ಇಂದಿನ ಯುವ ಪೀಳಿಗೆಗೆ ಹಾಗೂ ಜನಮಾನಸಕ್ಕೆ ಸಕಾಲಿಕವಾಗಿ ಹಾಗೂ ಸಾರ್ವಕಾಲಿಕವಾಗಿ ಒಂದೆಡೆ ವಿಷಯ ವಿವರಗಳು ದೊರೆಯಲಿ ಎಂಬ ಸದುದ್ದೇಶ ಹೊಂದಿ, ದಿನಕರದ ಸಂವಾದ ಮೂಲಕ ದಾಖಲೀಕರಣಗೊಳಿಸುವ ಕಾರ್ಯ ಮಾಡುವ ನಿಟ್ಟಿನಲ್ಲಿ ಒತ್ತಾಸೆಯಾಗಿ ದಿನಕರ ಕಾರ್ಯಬಾಹುಳ್ಯವನ್ನು ವಿಸ್ತರಿಸಿಕೊಂಡು ಈ ದಿಸೆಯಲ್ಲಿ ತನ್ನ ಕಾರ್ಯ ನಿರ್ವಹಿಸುತ್ತಿದೆ ಎಂದು ದೆಹಲಿ ದಿನಕರದ ಸಂಚಾಲಕರೂ ಆದ ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರು ನುಡಿದರು. ಅವರು ದಿನಾಂಕ 23.05.2021 ರಂದು ದಿನಕರ ಕಲಾವಿದರಿಗಾಗಿ ಆಯೋಜಿಸಿರುವ "ಪದ್ಯ ಪಂದ್ಯಾವಳಿ" ಜೂಮ್ ಮೀಟಿಂಗ್ ಆಪ್ ಮೂಲಕ ನಡೆದ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಅಂತರ್ಜಾಲದ ಮೂಲಕ ನಡೆಯುವ ಸಂವಾದ ಕಾರ್ಯಕ್ರಮಗಳಿಗೆ ಪರೋಕ್ಷವಾಗಿ ಹಾಗೂ ಅಪರೋಕ್ಷವಾಗಿ ಸಹಕಾರ ಹಾಗೂ ಬೆನ್ನೆಲುಬಾಗಿ ನಿಂತು ಪ್ರೋತ್ಸಾಹಿಸುತ್ತಿರುವ ರಮಗಭೂಮಿಯ ಹಿರಿಯರು, ಬರಹಗಾರರು, ಸಾಹಿತಿಗಳು, ಸಂಶೋಧಕರು, ಸಂಪಾದಕರು, ಚಿಂತಕರು ಹಾಗೂ ಸಾಂಸ್ಕೃತಿಕ ಲೋಕದ ಹಿರಿಯರು, ಕಲಾವಿದರು, ತಂತ್ರಜ್ಞರು ಹಾಗೂ ದಿನಕರ ಬಳಗ ಅಭಿನಂದನಾರ್ಹರು.

2020ರ ಮಾರ್ಚ್ ಕೊನೆಯ ವಾರ ಕೊರೊನಾದ ಸಂಕಷ್ಟ ಕಾಲ, ದೇಶದಲ್ಲಿ ಲಾಕ್ ಡೌನ್ ಆಗಿ ಎಲ್ಲವೂ ಸ್ತಬ್ಧಗೊಂಡಿದ್ದ ಸಂದರ್ಭವದು, ದೆಹಲಿಯ ದಿನಕರದ ಹವ್ಯಾಸಿ ಕಲಾವಿದರು ವ್ಯಾಟ್ಸಾಪ್ ಗುಂಪಿನ ಮೂಲಕ ನಿರ್ಣಯ ಕೈಗೊಂಡು, ಈ ಕಷ್ಟ ಕಾಲದಲ್ಲಿಯೂ ಏಕತಾನತೆಯ ಮಧ್ಯ ರಂಗನಿರಂತರವಾಗಿಡುವ ಮಹದಾಸೆ ಹೊಂದಿ, ಆ ನಿಟ್ಟಿನಲ್ಲಿ ಕೈಗೊಂಡ ನಿರ್ಧಾರ 'ದಿನಕರ' ತನ್ನನ್ನು ತಾನು ಬದಲಾಯಿಸಿಕೊಂಡು ಅಂತರ್ಜಾಲಕ್ಕೆ ಒಗ್ಗಿಕೊಂಡಿತು. ಈಗಾಗಲೇ ಹಲವು ಸಂವಾದ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿವೆ.

ಇದೇ ಸರಣಿಯ ಮುಂದುವರಿಕೆಯಾಗಿ 'ಪದ್ಯ ಪಂದ್ಯಾವಳಿ' ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಕು. ಅವನಿ ನೆಲ್ಲಿ, ಸವಿತಾ ನೆಲ್ಲಿ, ಕೃಷ್ಣ ರಾಜ್, ಸಂತೋಷ ಉಪಾಧ್ಯಾಯ, ಎಸ್.ಎಸ್. ಗೋವಿಂದ್ ರಾಜ್, ಅಮರೇಶ, ಎ.ಟಿ. ಶ್ರೀನಿವಾಸ, ಶಶಿಧರ ಮುನವಳ್ಳಿ, ಸ್ನೇಹಾ ಮುನವಳ್ಳಿ, ಎಸ್. ಕುಮಾರ್, ನೇತ್ರಾವತಿ ಕುಮಾರ್, ವಿದ್ಯಾ ಭಟ್, ರಮೇಶ್ ಟಿ.ಎಸ್ ಹಾಗೂ ಗಿರೀಶ್ ಗೌಡ ಅವರು ಭಾಗವಹಿಸಿ ಚಲನಚಿತ್ರ ಗೀತೆ, ಭಾವ ಗೀತೆ, ಭಕ್ತಿ ಗೀತೆ, ತತ್ವ ಪದ ಹಾಗೂ ಜಾನಪದ ಗೀತೆಗಳನ್ನು ಸುಮಧುರವಾಗಿ ಹಾಡಿ, ಭಾಗವಹಿಸಿದ ಪ್ರೇಕ್ಷಕರ ಮೆಚ್ಚುಗೆ ಗಳಿಸುವಲ್ಲಿ ಯಶಸ್ವಿಯಾದರು.

ದೆಹಲಿ ಕರ್ನಾಟಕ ಸಂಘದ ಖಜಾಂಚಿ ಹಾಗೂ ದಿನಕರ ಕಲಾವಿದರೂ ಆದ ಆಶಾಲತಾ ಮಹಾದೇವ ಅವರು ಕಾರ್ಯಕ್ರಮ ನಿರೂಪಿಸಿದರು. ರಮೇಶ್ ಟಿ.ಎಸ್ ಅವರು ತಾಂತ್ರಿಕ ಸಹಾಯ ಒದಗಿಸಿದರು. ಕೃಷ್ಣ ರಾಜ್ ವಂದಿಸಿದರು. ಕಾರ್ಯಕ್ರಮವು ಪುಟಾಣಿ ಅವನಿ ನೆಲ್ಲಿ ಇವಳಿಂದ ಕನ್ನಡ 'ಸ್ವರ' ಅಕ್ಷರಗಳ ಹಾಡಿನೊಂದಿಗೆ ಪ್ರಾರಂಭವಾಗಿ ಮೆರಗು ನೀಡಿತು.

**ಸಂತೋಷ ಉಪಾಧ್ಯಾಯ**





ದೆಹಲಿ ಕರ್ನಾಟಕ ಸಂಘದ
ಸುಸಜ್ಜಿತವಾದ ಆರ್ಟ್ ಗ್ಯಾಲರಿ
ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.
ಹೆಚ್ಚಿನ ಮಾಹಿತಿಗಾಗಿ
ದೆಹಲಿ ಕರ್ನಾಟಕ ಸಂಘದ
ಕಾರ್ಯಾಲಯವನ್ನು ಸಂಪರ್ಕಿಸಿರಿ.
ದೂರವಾಣಿ : 011-26109615 / 26104818

# ಚಾರಿತ್ರಿಕ ಮಹತ್ವದ ದಾಖಲೆ 'ಮುದ್ದಣ ಇನ್ ಫೋಕಸ್'

ಕೊರೋನಾದ ಈ ಕೆಟ್ಟ ಕಾಲದಲ್ಲಿ ನಾನು ಆಗಾಗ ನೆನೆಸಿಕೊಳ್ಳುತ್ತಿರುವ ಲೇಖಕನೆಂದರೆ ಮುದ್ದಣ. ಅವನ ಹುಟ್ಟು ಹೆಸರು ಲಕ್ಷ್ಮೀನಾರಾಯಣಯ್ಯ (1870-1901). ಬದುಕಿದ್ದು ಕೇವಲ 31 ವರ್ಷ. ಅವನ ಪ್ರಖ್ಯಾತವಾದ ರಾಮಾಶ್ವಮೇಧದಲ್ಲಿ- 'ಓವೋ...ಕಾಲಪುರುಷಂಗೆ ಗುಣಮಣಮಿಲ್ಲಂ ಗಡ...ನಿಸ್ತೇಜಂ ಗಡ, ಜಡಂ ಗಡ..ಒಡಲೊಳ್ ಗುಡುಗುಟ್ಟುಗಂ ಗಡ...' ಎಂಬ ಸಾಲು ಬರುತ್ತದೆ. ಮುದ್ದಣ ಬರೆದದ್ದು ಅವನು ಹುಟ್ಟಿ ಬೆಳೆದ ನಂದಳಿಕೆ-ಉಡುಪಿ ಪರಿಸರದಲ್ಲಿ ಬೀಳುತ್ತಿದ್ದ ಧಾರಾಕಾರ ಮಳೆಯ ಬಗ್ಗೆ. ಆದರೆ ಸಂಕೇತಿಸಿದ್ದು ದಿನನಿತ್ಯ ಅವನನ್ನು ಸ್ವಲ್ಪ ಸ್ವಲ್ಪವೇ ಸಾಯಿಸುತ್ತಿದ್ದ ಕ್ಷಯರೋಗವನ್ನು. 'ಭವತಿ ಭಿಕ್ಷಾಂ ದೇಹಿ ಎಂಬುವುದು ಕವಿಗಳಿಗೆ ಸಿದ್ಧಿಸಿರುವ ಹೆಮ್ಮೆಯ ಸಪ್ತಾಕ್ಷರಿ ಮಂತ್ರವಾಗಿದೆ' ಎಂದು ಹೇಳದ ಮುದ್ದಣನು ಬಡತನಕ್ಕೊಂದು ಹೊಸ ವ್ಯಾಖ್ಯಾನ ಬರೆದು ನಮ್ಮೆಲ್ಲಾ ದುರಿತಗಳಿಗೆ ಧ್ವನಿಯಾದ ಮಹಾನ್ ಲೇಖಕ. 'ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಎಂದು ಹೊಸಗನ್ನಡದ ಉದಯವನ್ನು ದಿಟ್ಟವಾಗಿ ಸಾರಿದ ಅವನನ್ನು ಕನ್ನಡ ವಿಮರ್ಶೆಯು ಸರಿಯಾಗಿಯೇ 'ಹೊಸಗನ್ನಡದ ಮುಂಗೋಳಿ' ಎಂದು ಗುರುತಿಸಿದೆ. ಅವನು ರತ್ನಾವತಿ ಕಲ್ಯಾಣ, ಕುಮಾರ ವಿಜಯ, ಶ್ರೀರಾಮ ಪಟ್ಟಾಭಿಷೇಕ, ಅದ್ಭುತ ರಾಮಾಯಣ, ರಾಮಾಶ್ವಮೇಧಂ ಕೃತಿಗಳನ್ನು ಬರೆದ. ಅವನ ಅಕಾಲ ಮರಣದಿಂದಾಗಿ 'ಗೋದಾವರಿ' ಎಂಬ ಕಾದಂಬರಿ ಅರ್ಧದಲ್ಲಿಯೇ ಉಳಿಯಿತು. ಕನ್ನಡ ವ್ಯಾಕರಣ, ವಾರ್ಧಕ ಷಟ್ಪದಿಯಲ್ಲಿ ಕರ್ಣಾಟಕ ರಾಮಾಯಣ, ಭಾಮಿನೀ ಷಟ್ಪದಿಯಲ್ಲಿ ಭಗವದ್ಗೀತೆ, ನವೀನ ರೀತಿಯಲ್ಲಿ ಕುಶವಿಜಯ, ಕಾಮಶಾಸ್ತ್ರದ ಅನುವಾದ ಮಾಡುವ ಅವನ ಕನಸುಗಳು ಹಾಗೆಯೇ ಉಳಿದುಬಿಟ್ಟವು. ತನ್ನದೇ ಕೃತಿಗಳನ್ನು ಬೇರೆ ಹೆಸರಿನಲ್ಲಿ ಪ್ರಕಟಮಾಡಿಕೊಳ್ಳುವಂಥ ಅವನ



ನಂದಳಿಕೆ ಬಾಲಚಂದ್ರ ರಾವ್




ಪ್ರಕಾಶಕರು : ಆಕೃತಿ ಆಶಯ ಪ್ರಕಾಶನ, ಮಂಗಳೂರು
ಪುಟಗಳು : 110, ಬೆಲೆ : ರೂ. 100/-
ವರ್ಷ : 2021

"ಬಗೆ ಬಗೆಯ ಬಿಕ್ಕಟ್ಟುಗಳ ನಡುವೆ ನಾವೆಲ್ಲ ಅನೇಕ ಲೇಖಕರನ್ನು ಮರೆತುಬಿಡುತ್ತೇವೆ. ಮುದ್ದಣನು ಹಾಗೆ ಮರೆತುಹೋಗದಂತೆ ಮಾಡಿದ ಮಹಾನುಭಾವರೆಂದರೆ ನಂದಳಿಕೆ ಬಾಲಚಂದ್ರ ರಾವ್. ಕರ್ನಾಟಕ ಬ್ಯಾಂಕಿನ ಉದ್ಯೋಗಿಯಾಗಿದ್ದ ಅವರು ಸ್ವತಃ ಬರಹಗಾರರು, ಸಂಘಟಕರು. ಸ್ನೇಹಕ್ಕೆ ಅವರದು ಇನ್ನೊಂದು ಹೆಸರು. ಇತರರಿಗೆ ಪ್ರೋತ್ಸಾಹ ನೀಡುವ ಉದಾರ ಸ್ವಭಾವದ ಅವರ ಹಾಗೆ ಕರಾವಳಿಯಲ್ಲಿ ಇರುವ ಇನ್ನೊಬ್ಬರೆಂದರೆ ಕುಶಿ ಹರಿದಾಸ ಭಟ್ಟರು ಮಾತ್ರ."

ದುರಂತ ಪರಿಸ್ಥಿತಿ ಕನ್ನಡದ ಬೇರಾವ ಕವಿಗಳಿಗೂ ಬಂದಂತಿಲ್ಲ.

ಬಗೆ ಬಗೆಯ ಬಿಕ್ಕಟ್ಟುಗಳ ನಡುವೆ ನಾವೆಲ್ಲ ಅನೇಕ ಲೇಖಕರನ್ನು ಮರೆತುಬಿಡುತ್ತೇವೆ. ಮುದ್ದಣನು ಹಾಗೆ ಮರೆತುಹೋಗದಂತೆ ಮಾಡಿದ ಮಹಾನುಭಾವರೆಂದರೆ ನಂದಳಿಕೆ ಬಾಲಚಂದ್ರ ರಾವ್. ಕರ್ನಾಟಕ ಬ್ಯಾಂಕಿನ ಉದ್ಯೋಗಿಯಾಗಿದ್ದ ಅವರು ಸ್ವತಃ ಬರಹಗಾರರು, ಸಂಘಟಕರು. ಸ್ನೇಹಕ್ಕೆ ಅವರದು ಇನ್ನೊಂದು ಹೆಸರು. ಇತರರಿಗೆ ಪ್ರೋತ್ಸಾಹ ನೀಡುವ ಉದಾರ ಸ್ವಭಾವದ ಅವರ ಹಾಗೆ ಕರಾವಳಿಯಲ್ಲಿ ಇರುವ ಇನ್ನೊಬ್ಬರೆಂದರೆ ಕುಶಿ ಹರಿದಾಸ ಭಟ್ಟರು ಮಾತ್ರ.

ಬಾಲಚಂದ್ರ ರಾಯರು ಮುದ್ದಣನ ಬಗೆಗೆ ಇರಿಸಿಕೊಂಡ ಗೌರವ, ಮತ್ತು ಮುದ್ದಣನ ನೆನಪು ಶಾಶ್ವತವಾಗಿ ಉಳಿಯುವಂತೆ ಮಾಡಿದ ಕೆಲಸಗಳು ಚಾರಿತ್ರಿಕವಾದುವು. ಅವರು ಮುದ್ದಣನ ಹುಟ್ಟೂರಾದ ನಂದಳಿಕೆಯಲ್ಲಿ ಕವಿಗೊಂದು ಸ್ಮಾರಕ ಕಟ್ಟಿದರು, ಗ್ರಂಥಾಲಯ ಆರಂಭಿಸಿದರು. ಕನ್ನಡದ ಪ್ರಖ್ಯಾತ ಲೇಖಕರು ಅಲ್ಲಿಗೆ ಭೇಟಿ ನೀಡುವಂತೆ ಮಾಡಿದರು, ನೂರಾರು ಚಟುವಟಿಕೆಗಳನ್ನು ನಿರಂತರವಾಗಿ ಆಯೋಜಿಸಿದರು. 1979ರಲ್ಲಿ ವರಕವಿ ಮುದ್ದಣ ಕಾವ್ಯ ಪ್ರಶಸ್ತಿಯನ್ನೂ, ಅದೇ ವರ್ಷ ಮುದ್ದಣ ಸ್ಮಾರಕ ಮಿತ್ರ ಮಂಡಳಿಯನ್ನೂ ಆರಂಭಿಸಿದರು. 1982ರಲ್ಲಿ ಮುದ್ದಣ ನೆನಪಿನ ವಿಶೇಷ ಅಂಚೆ ಲಕೋಟೆ ಬಿಡುಗಡೆ ಮಾಡಿಸಿದರು. 1987ರಲ್ಲಿ ಮುದ್ದಣ ವನ ಸ್ಥಾಪಿಸಿದರು. ನಿರಂತರ ಪ್ರಯತ್ನದ ಮೂಲಕ 2017ರಲ್ಲಿ ವಿಶೇಷ ಅಂಚೆ ಚೀಟಿ ಹೊರ ಬರುವಂತೆ ಮಾಡಿದರು. ಇಂಥ ದಣಿವರಿಯದ ಕೆಲಸಗಳ ಮೂಲಕ ಬಾಲಚಂದ್ರ ರಾಯರು ಮುದ್ದಣನ ನೆನಪು ಮರೆತುಹೋಗದಂತೆ ಮಾಡಿದರು. ಜೊತೆಗೆ ಪುಟ್ಟ ಊರಾದ ನಂದಳಿಕೆಯೂ ಬೆಳೆಯುವಂತೆ ಮಾಡಿದರು. ಕಳೆದ ಸುಮಾರು 45 ವರ್ಷಗಳಿಂದ ಅವರು ಮುದ್ದಣ ಮಿತ್ರ ಮಂಡಳಿಯ ಮೂಲಕ ಆ ಊರಲ್ಲಿ ಮಾಡಿದ ನೂರಾರು ಕೆಲಸಗಳಿಗಾಗಿ ನಾಡು ಅವರಿಗೆ ಋಣಿಯಾಗಿರಬೇಕು. ಅಕಾಡೆಮಿಗಳಿಗೆ, ವಿಶ್ವವಿದ್ಯಾಲಯಗಳಿಗೆ ಮಾಡಲಾಗದ ಕೆಲಸಗಳನ್ನು ಅವರು ಮಾಡಿದ್ದಾರೆ. ಇದಕ್ಕೆ ನಾನೇ ಸಾಕ್ಷಿಯಾಗಿದ್ದೇನೆ.

ಪ್ರಸ್ತುತ ಪುಸ್ತಕವು ಶ್ರೀ ಬಾಲಚಂದ್ರ ರಾಯರೇ ಹುಟ್ಟು ಹಾಕಿದ್ದ ಮುದ್ದಣ ಪ್ರಕಾಶನದ ಬೆಳ್ಳಿ ಹಬ್ಬ ಆಚರಣೆಯ ನೆನಪಿನಲ್ಲಿ ಪ್ರಕಟವಾಗಿದೆ. ಪುಸ್ತಕದಲ್ಲಿ ಒಟ್ಟು 16 ಲೇಖನಗಳಿದ್ದು 1986 ರಿಂದೀಚೆಗೆ ಮುದ್ದಣನ ಬಗೆಗೆ ಪ್ರಕಟವಾದ ಲೇಖನಗಳನ್ನು ಸಂಕ್ಷಿಪ್ತವಾಗಿ ಇಂಗ್ಲಿಷಿನಲ್ಲಿ ಪರಿಚಯಿಸುತ್ತವೆ. ಜೊತೆಗೆ ಬಾಲಚಂದ್ರ ರಾಯರ ಸಾಧನೆಗಳ ಬಗೆಗೆಯೂ ಇಲ್ಲಿ ವಿವರ ಸಿಗುತ್ತದೆ. ಹಿರಿಯ ವಿದ್ವಾಂಸರಾದ ಡಾ. ಎನ್. ತಿರುಮಲೇಶ್ವರ ಭಟ್ ಅವರ ಅನುವಾದವು ಆಪ್ತವಾಗಿದ್ದು ಲೇಖನಗಳನ್ನು ಸುಲಭವಾಗಿ ಓದಿಕೊಳ್ಳುವಂತೆ ಮಾಡಿದೆ.

ಪುಟ್ಟದಾದರೂ ಇದೊಂದು ಹೊಸ ಯೋಚನೆಯ ಪುಸ್ತಕ. ಸಾಮಾನ್ಯವಾಗಿ ನಾವು ವಿವರಣಾತ್ಮಕ ಗ್ರಂಥ ಸೂಚಿಯನ್ನು ಸಿದ್ಧಪಡಿಸುವುದುಂಟು. ಆದರೆ ಇದಕ್ಕಿಂತ ಭಿನ್ನವಾಗಿ ಇಲ್ಲಿ ಲೇಖನಗಳನ್ನು ಸಂಕ್ಷಿಪ್ತವಾಗಿ, ಅವುಗಳ ಪ್ರಕಟಣೆಯ ಸಂದರ್ಭದ ಸಮೇತ ನೀಡಲಾಗಿದೆ. ಕನ್ನಡದ ಪ್ರಸಿದ್ಧ ಲೇಖಕರಾದ ಶ್ರೀಕೃಷ್ಣ ಚೆನ್ನಂಗೋಡು, ಡಾ. ನಾ. ಮೊಗಸಾಲೆ, ಜಿ.ಕೆ. ಐತಾಳ, ವಸಂತ ಕುಮಾರ ಪೆರ್ಲ, ಎಂ ರಾಜಗೋಪಾಲಾಚಾರ್ಯ, ಜಯರಾಮ ಕಾರಂತ, ಮಲ್ವೆ ರಾಮದಾಸ ಸಾಮಗ, ತೆಕ್ಕುಂಜ ಗೋಪಾಲಕೃಷ್ಣ ಭಟ್, ಮೊದಲಾದವರ ಅಭಿಪ್ರಾಯಗಳು ಇಲ್ಲಿ ಸಂಗ್ರಹಿತವಾಗಿದೆ. ಜಯರಾಮ ಕಾರಂತರು ಮತ್ತು ನಂದಳಿಕೆಯವರು ಜಂಟಿಯಾಗಿ ಸಂಪಾದಿಸಿದ 'ಮುದ್ದಣನಿಗೆ ನಮನ' ಕೃತಿಯಲ್ಲಿ ಜಿ. ವೆಂಕಟಸುಬ್ಬಯ್ಯ, ಐರೋಡಿ ಶಿವರಾಮಯ್ಯ, ಮಳಲಿ ಸುಬ್ಬ ರಾವ್, ಆರ್. ನರಸಿಂಹಾಚಾರ್, ಬೆನಗಲ್ ರಾಮ ರಾವ್. ಪಂಜೆ ಮಂಗೇಶ ರಾವ್, ಹುರುಳಿ ಭೀಮ ರಾವ್, ಗೋವಿಂದ ಪೈ, ರಾಮಚಂದ್ರ ಉಚ್ಚಿಲ, ಉಪ್ಪಂಗಳ ರಾಮ ಭಟ್ಟ ಮೊದಲಾದ ಮಹನೀಯರ ಅಪೂರ್ವ ಒಳನೋಟಗಳ ಉಲ್ಲೇಖಗಳಿವೆ. ಮುದ್ದಣನ ನೆನಪಲ್ಲಿ ಈ ಎಲ್ಲ ಹೆಸರುಗಳನ್ನು ನೋಡುವುದೇ ಒಂದು ಸಂಭ್ರಮ.

ಹೀಗೆ ಈ ಪುಸ್ತಕವು ಹೊಸಗನ್ನಡದ ಅತ್ಯಂತ ಮಹತ್ವದ ಕವಿಯಾದ ಮುದ್ದಣನನ್ನೂ, ಆ ಮುದ್ದಣನನ್ನು ನಮ್ಮವರೆಗೆ ಜೋಕೆಯಿಂದ ಕರೆದುಕೊಂಡು ಬಂದ ನಂದಳಿಕೆ ಬಾಲಚಂದ್ರ ರಾಯರ ಬಗ್ಗೆಯೂ ಉಪಯುಕ್ತ ಮಾಹಿತಿಗಳನ್ನು ನೀಡುತ್ತದೆ. ಈ ಅರ್ಥದಲ್ಲಿ ಇದೊಂದು ಚಾರಿತ್ರಿಕ ಮಹತ್ವದ ದಾಖಲೆಯೂ ಹೌದು.


**ಡಾ. ಪುರುಷೋತ್ತಮ ಬಿಳಿಮಲೆ**

# ಸಾರ್ವಜನಿಕ ಸಂಪರ್ಕದ ಕೌಶಲಗಳನ್ನು ನಿರೂಪಿಸಿದ ಕೃತಿ

ಸಾರ್ವಜನಿಕ ಸಂಪರ್ಕದ ಕೌಶಲಗಳನ್ನು ಪರಿಣಾಮಕಾರಿಯಾಗಿ ನಿರೂಪಿಸುವ ಈ ಕೃತಿಯನ್ನು ಬರೆದವರು ಜಯಪ್ರಕಾಶ ಪುತ್ತೂರು ಅವರು. (ಪ್ರಕಾಶನ: ಸಪ್ನ ಬುಕ್ ಹೌಸ್, ಬೆಂಗಳೂರು-2020) 'ಪಿಆರ್‌ಒ ಎಂದರೇನು?' ಎಂಬ ಪ್ರಶ್ನೆಗೆ 'ಪಗೆಲ್ ರಾತ್ರೆ ಆಫೀಸರ್' ಎಂದು ತುಳುವಿನಲ್ಲಿ ಉತ್ತರಿಸುತ್ತಾ ಹಗಲು ರಾತ್ರಿ ಎರಡೂ ಹೊತ್ತು ದುಡಿಯಬೇಕಾದ ವಾಸ್ತವವನ್ನು ಹಾಸ್ಯಮಿಶ್ರಿತವಾಗಿಯೇ ಲೇಖಕರು ವ್ಯಾಖ್ಯಾನಿಸುತ್ತಾರೆ. ಗೆಳೆಯ ಜಯಪ್ರಕಾಶ್ ಅವರು ತಮ್ಮ ವೃತ್ತಿಜೀವನದ ಅಪಾರ ಅನುಭವವನ್ನು ಹಂಚಿಕೊಳ್ಳುವುದರೊಂದಿಗೆ ನಿವೃತ್ತಿ-ಪ್ರವೃತ್ತಿಗಳ ಸುಂದರ ಸಮನ್ವಯಸೂತ್ರವೊಂದನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಸಿಂಡಿಕೇಟ್ ಬ್ಯಾಂಕಿನಲ್ಲಿ ಅವರ ವೃತ್ತಿಜೀವನದ ಆರಂಭದ ದಿನಗಳು, ಡಿಆರ್‌ಡಿಒ.ದಲ್ಲಿ ಪಿಆರ್‌ಒ ಆಗಿದ್ದು, ಡಾ. ಅಬ್ದುಲ್ ಕಲಾಂ ಅವರ ಸಂಪರ್ಕ, ನಿವೃತ್ತಿಯ ಅನಂತರ ವಿವಿಧ ಸಾರ್ವಜನಿಕ ಸೇವೆಗಳಲ್ಲಿ ತೊಡಗಿದ್ದು, ಪತ್ರಿಕೋದ್ಯಮ, ಸಿನೆಮಾ ನಿರ್ಮಾಣ, ವ್ಯಕ್ತಿತ್ವವಿಕಸನದ ತರಬೇತಿಶಿಬಿರಗಳು ಮುಂತಾಗಿ ಒಂದು ಅರ್ಥದಲ್ಲಿ ಲೇಖಕರ ಆತ್ಮಕಥನದಂತೆಯೂ ಇಲ್ಲಿಯ ಬರವಣಿಗೆ ಸಾಗಿದೆ.

ಡಿಆರ್‌ಡಿಒ.ದಲ್ಲಿ ನಿರ್ದೇಶಕರಾಗಿದ್ದ ಡಾ. ಕಲಾಂ ಅವರೊಂದಿಗಿನ ಸೇವಾವಧಿಯ ನೆನಪುಗಳು ಈ ಕೃತಿಯ ಮುಖ್ಯಭಾಗ. ವಿಮಾನಕ್ಕೆ ಏಣಿ ತಂದಿರಿಸಿದ್ದು, ಪೇಜಾವರಶ್ರೀಪಾದರು-ಜಾರ್ಜ್‌ಫೆರ್ನಾಂಡಿಸ್-ಡಾ. ಅಬ್ದುಲ್ ಕಲಾಂ ಅವರ ತ್ರಿವೇಣೀಸಂಗಮ, ಜಾರ್ಜ್ ಫೆರ್ನಾಂಡಿಸರಿಗೆ ದಕ್ಷಿಣಕನ್ನಡದ ಊಟದ ವ್ಯವಸ್ಥೆಮಾಡಿದ್ದು, ಯುದ್ಧವಿಮಾನ ಪತನಹೊಂದಿದ್ದು ಇತ್ಯಾದಿ ಘಟನೆಗಳು ರೋಚಕವಾಗಿವೆ. ಕೆಲವು ಆಘಾತಕಾರಿ ಸಂದರ್ಭಗಳಲ್ಲಿ ಲೇಖಕರು ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ವರ್ತಿಸಿದ ರೀತಿ ಮನುಷ್ಯಸಂಬಂಧವನ್ನು ಚಿತ್ರಿಸುವ ಹಲವು ಸಣ್ಣಕಥೆಗಳಿಗೆ ವಸ್ತುವಾಗುವಂತಿದೆ. ಉದಾ: ಶವಾಗಾರದಲ್ಲಿ ಹೆಣವಿರಿಸಿದ್ದು, ವಿಜ್ಞಾನಿಗೆ ಅಪಘಾತ ಸಂಭವಿಸಿದ್ದು, ಮಹಿಳಾ ಇಂಜಿನಿಯರ್ ಒಬ್ಬಳ ಆತ್ಮಹತ್ಯೆ ಇತ್ಯಾದಿ.

ಇವುಗಳಿಗಿಂತಲೂ ಮಿಗಿಲಾಗಿ 'ಸಾರ್ವಜನಿಕ ಸಂಪರ್ಕ'ದ ಕುರಿತಾದ ಮಾಹಿತಿಗಳ ಕಣಜವಾಗಿಯೂ ಈ ಕೃತಿ ಗಮನಸೆಳೆಯುತ್ತದೆ. ಥಾಮಸ್ ಜೆಫರ್‌ಸನ್ ಎಂಬ ಅಮೆರಿಕ ಅಧ್ಯಕ್ಷನಿಂದ ಮೊತ್ತಮೊದಲು ಪಿ.ಆರ್ ಶಬ್ದ ಹುಟ್ಟಿದ್ದು (1807), ಆಗಿನ 'ಸೆಂಟ್ರಲ್ ಪಬ್ಲಿಕ್ ಸಿಟಿ ಬೋರ್ಡ್' ಅಂದರೆ ಈಗಿರುವ 'ಪ್ರೆಸ್ ಇನ್‌ಫರ್ಮೇಶನ್ ಬ್ಯೂರೋ'ದ ಆರಂಭ (1920), ಇಂಗ್ಲೆಂಡಿನಲ್ಲಿ ಪಿ.ಆರ್. ಸಂಸ್ಥೆ ಹುಟ್ಟಿಕೊಂಡಿದ್ದು (1948), ಅಂತಾರಾಷ್ಟ್ರೀಯ ಸಂವಹನ ಸಂಪರ್ಕಮಂಡಳಿಯ ಸ್ಥಾಪನೆ (2013) ಮುಂತಾದ ಇತಿಹಾಸಕಥನಗಳು ಇಲ್ಲಿವೆ. ಸಾರ್ವಜನಿಕ ಸಂಸ್ಥೆಗಳ ಪ್ರತಿಷ್ಠೆಯನ್ನು ಹೆಚ್ಚಿಸುವುದು, ಸಾರ್ವಜನಿಕ ಸಂಪರ್ಕಾಧಿಕಾರಿಗಳ ಕರ್ತವ್ಯದ ವಿಭಿನ್ನ ಮುಖಗಳು ಮುಂತಾದ ವಿಶ್ಲೇಷಣೆಗಳೊಂದಿಗೆ ವ್ಯಕ್ತಿತ್ವವಿಕಸನದ ಮಾರ್ಗದರ್ಶಿಯಾಗಿಯೂ ಈ ಕೃತಿ ಮೂಡಿಬಂದಿದೆ. ಸಮೂಹಸಂವಹನವನ್ನು ಓದುವ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕ ಸಂಪರ್ಕದ ಅಧಿಕಾರಿಗಳಿಗೆ ಈ ಕೃತಿ ಉಪಯುಕ್ತವೆನಿಸಬಲ್ಲುದು. ಆಧುನಿಕ ಜಗತ್ತಿಗೆ ಪಿ.ಆರ್ ಅನಿವಾರ್ಯವಾದ ಕೌಶಲವೆಂಬುದನ್ನು ಅತ್ಯಂತ ಸಮರ್ಥವಾಗಿ ನಿರೂಪಿಸಲಾದ ಈ ಕೃತಿಯನ್ನು ಕನ್ನಡಕ್ಕೆ ನೀಡಿದ ಲೇಖಕರಿಗೆ ಹಾರ್ದಿಕ ಅಭಿನಂದನೆಗಳು ಸಲ್ಲಬೇಕು.




| | |
|---|---|
| ಪ್ರಕಾಶಕರು | : ಸಪ್ನ ಬುಕ್ ಹೌಸ್, ಬೆಂಗಳೂರು |
| ಪುಟಗಳು | : 228 |
| ಬೆಲೆ | : ರೂ. 180/- |
| ವರ್ಷ | : 2020 |

**ಡಾ. ಕಬ್ಬಿನಾಲೆ ವಸಂತ ಭಾರದ್ವಾಜ**

# ಕನ್ನಡ ಕುಟುಂಬವೊಂದರ ಸಾಂಸ್ಕೃತಿಕ ಸೀಮೋಲ್ಲಂಘನ...

**ಹಿರಿಯ ಕನ್ನಡತಿ ಶ್ರೀಮತಿ ಸಾವಿತ್ರಿ ಶಾಸ್ತ್ರಿ ಈಚೆಗೆ ವಿಧಿವಶರಾಗಿದ್ದಾರೆ. ಶಾಸ್ತ್ರಿ ಕುಟುಂಬದ ಕುರಿತು ಲೇಖಕಿ ರೇಣುಕಾ ನಿಡಗುಂದಿ ಅವರು ಈ ಹಿಂದೆ ಬರೆದ ಸ್ಮರಣೀಯ ಮತ್ತು ಮೌಲಿಕ ಬರಹ ಇಲ್ಲಿದೆ.**

**–ಸಂಪಾದಕ**



ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ದಿ. ಗೋಪಾಲ ಶಾಸ್ತ್ರಿ ಮತ್ತು ಅವರ ಪತ್ನಿ ದಿ. ಸಾವಿತ್ರಿ ಶಾಸ್ತ್ರಿ

ಕತೆಗಳು ಕುತೂಹಲ ಹುಟ್ಟಿಸುತ್ತವೆ. ಹರಪ್ಪಾ ಮೊಹೆಂಜೊದಾರೋವಿನ ಗಲ್ಲಿಗಳಲ್ಲಿ ಕಳೆದುಹೋದ ಒಂದು ನಾಣ್ಯದ ಕಥೆಯಿರಬಹುದು, ಆಕಸ್ಮಿಕವಾಗಿ ಹಾದಿತಪ್ಪಿ ಗಡಿದಾಟಿ ಬಂದು ಇಲ್ಲೇ ಉಳಿದುಹೋದ ಚೀನಿಯೊಬ್ಬನ ಬದುಕಿನ ಕಥೆ (ವಾಂಗ್ ಕಿ) ಇರಬಹುದು ಅಥವಾ ನಾವು ಬಾಲ್ಯದಲ್ಲಿ ಕೇಳಿಸಿಕೊಂಡ ರೇಡಿಯೋ ನಾಟಕ – ಸ್ವಪ್ನ ವಾಸವದತ್ತೆಯ ಕಥೆಯೆ ಇರಬಹುದು. ಕತೆಗಳು ನಮ್ಮೊಳಗಿನ ಜೀವನಪ್ರೀತಿ ಬತ್ತದಂತೆ ಹಸಿಯಾಗಿಟ್ಟಿರುತ್ತವೆ. ಕಥನಪ್ರಿಯತೆಯೂ ಒಂದು ಮನುಷ್ಯಗುಣ.

ಉತ್ತರಭಾರತದಲ್ಲಿ ಹುಟ್ಟಿದ ಜೈನ ಧರ್ಮಕ್ಕೆ ಕರ್ನಾಟಕವು 'ಆಡುಂಬೊಲ' ಆಯಿತೆಂದು ಶಾಸನವೊಂದು ವರ್ಣಿಸುತ್ತದೆ. ಹೀಗೆ ಹೊರಗಿನಿಂದ ಕರ್ನಾಟಕಕ್ಕೆ ವಲಸೆ ಬಂದು, ಕರ್ನಾಟಕವನ್ನು ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡ ದೊಡ್ಡ ಚರಿತ್ರೆಯೇ ನಮ್ಮ ಮುಂದಿದೆ. ಆದರೆ ಕರ್ನಾಟಕದಿಂದ ಹೊರಹೋದವರ ಕಥೆಗಳು ದಾಖಲಿವೆಯೋ ಗೊತ್ತಿಲ್ಲ. ಡಾ. ಪುರುಷೋತ್ತಮ ಬಿಳಿಮಲೆ ವಿವರಿಸುವಂತೆ ಕರ್ನಾಟಕದ ಪ್ರಖ್ಯಾತ ಅರಸರಲ್ಲಿ ಒಬ್ಬನಾಗಿದ್ದ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಕರ್ನಾಟಕದಿಂದ ಸುಮಾರು ಆರು ನೂರು ಕುಟುಂಬಗಳು ಉತ್ತರ ಭಾರತದ ಕಡೆ ವಲಸೆ ಹೋದವು ಎಂದು ಇತಿಹಾಸ ಸಂಶೋಧಕರಾದ ಡಾ. ಯು.ಎಸ್. ಮೂರ್ತಿ ಅವರು ಒಮ್ಮೆ ಹೇಳಿದ್ದರಂತೆ. ಹೀಗೆ ವಲಸೆ ಹೋದ ಆರು ನೂರು ಕುಟುಂಬಗಳು ಕಳೆದ ಒಂದು ಸಾವಿರ ವರ್ಷದಲ್ಲಿ ಏನಾದುವು? ಅವರಲ್ಲಿ ಕ್ವಚಿತ್ತಾದರೂ ಕನ್ನಡದ ನೆನಪುಗಳು ಉಳಿದಿವೆಯೇ? ಅಂಥ ಕುಟುಂಬವನ್ನು ಬಿಹಾರದ ಕೋಸಿ ನದಿಯಂಚಿನಲ್ಲಿ ಅವರು ಕಂಡು ಮಾತಾಡಿಯೂ ಇದ್ದಾರೆ.

ದೆಹಲಿಯೇ ಒಂದು ಕಥಾಸಾಗರ. ಪುರಾಣದಿಂದ ಚರಿತ್ರೆಯವರೆಗೂ ಕತೆಗಳೇ ತುಂಬಿಕೊಂಡಿವೆ. ಇಂಥದರಲ್ಲಿ ಕನ್ನಡಿಗರ ಕತೆಯೂ ಇದೆಯಲ್ಲ. ಬಹುತೇಕ ಕನ್ನಡಿಗರು, ಅದರಲ್ಲೂ ದೆಹಲಿ ಕನ್ನಡಿಗರಿಗೂ ಗೊತ್ತಿರದ ಕತೆಯೊಂದು ಯಮುನೆಯ ಹರಿವಿನಲ್ಲಿ ಅಡಗಿಹೋಗಿದೆಯಲ್ಲ !

> **"ಸಂಸ್ಕೃತಿಯ ಉಳಿವು ಮತ್ತು ಪ್ರಚಾರದ ಕಾರ್ಯಕ್ಕಾಗಿ ಅಂದಿನ ಆಸ್ಥಾನದ ರಾಜರುಗಳೇ ಸ್ಥಾನಿಕ ಬ್ರಾಹ್ಮಣ ಕುಟುಂಬಗಳನ್ನು ಉತ್ತರ ಭಾರತಕ್ಕೆ ಕಳಿಸುತ್ತಿದ್ದರಂತೆ. ಹಾಗೆ ಸೂರ್ಯನಾರಾಯಣ ದೀಕ್ಷಿತರ ಕುಟುಂಬವೂ ಕಾಲುನಡಿಗೆಯಲ್ಲಿ ಹೊರಟಿತು ಎಂಬುದೊಂದು ಕಥೆ. ಕಾಲುದಾರಿಯ ಪ್ರಯಾಣವೇನೂ ಸಾಮಾನ್ಯದ್ದಲ್ಲ. ಕಷ್ಟಕರ ಯಾತ್ರೆ, ಕಾಡು ಮೃಗಗಳ ಭಯ ಒಂದೆಡೆಯಾದರೆ ಕಳ್ಳರು–ಕಾಕರು, ದರೋಡೆಕೋರರ ಭಯ ಇನ್ನೊಂದೆಡೆ. ಹೇಗೋ ಜೀವವುಳಿಸಿಕೊಂಡು ದೀಕ್ಷಿತ ಕುಟುಂಬ ಉತ್ತರಭಾರತ ತಲಪುತ್ತದೆ."**

ಆ ಕಾಲವೊಂದಿತ್ತು. ಮೋಟರ್ ಗಾಡಿ ಸೌಕರ್ಯವಿಲ್ಲದ ಕಾಲದಲ್ಲಿ ಕಾಶಿಗೆ ಹೋದವರು ಮರಳಿ ಬರುವುದಿಲ್ಲ ಎಂಬ ನಂಬಿಕೆಯ ಕಾಲ. ಅವರ ಶ್ರಾದ್ಧ ಕರ್ಮಗಳನ್ನೆಲ್ಲ ತೀರಿಸಿ ಗಂಗಾ ಸಮಾರಾಧನೆಯನ್ನೂ ಮಾಡಿ ಬೀಳ್ಕೊಡುತ್ತಿದ್ದರಂತೆ. ಹೀಗೆ ಸುಮಾರು 193 ವರ್ಷಗಳ ಹಿಂದೆ (ಎರಡು ಶತಮಾನಗಳ ಹತ್ತಿರ) ಕಾಶಿ ಯಾತ್ರೆಗೆಂದು ಹೋಗಿ ಮರಳಿ ಊರಿಗೆ ಹೋಗದೇ ಬಿಹಾರದ ಗಯಾದಲ್ಲಿ ನೆಲೆಸಿಹೋದ ಕುಟುಂಬ ದಿ. ಶ್ರೀ ಗೋಪಾಲ ಶಾಸ್ತ್ರಿಗಳ ಪೂರ್ವಜರದ್ದು. ಯಾತ್ರೆಗೆಂದು ಬಂದ ಅವರ ಪೂರ್ವಜರು ಕಾಶಿಯಲ್ಲಿಯೂ ಮತ್ತು ಬಿಹಾರದ ಬೋಧಗಯಾದಲ್ಲಿ ನೆಲೆಸಿಹೋದರು. ದಿ. ಗೋಪಾಲ ಶಾಸ್ತ್ರಿಯವರ ತಾತ ದಿ. ಸೂರ್ಯನಾರಾಯಣ ದೀಕ್ಷಿತರು ಮೈಸೂರಿನ ಕೃಷ್ಣಾಗಿರಿಯವರು.

ಇನ್ನೊಂದು ಕಥನದ ಪ್ರಕಾರ 1825 ರಲ್ಲಿ ಅದ್ವೈತ ಮತದ ಅನುಯಾಯಿಗಳಾಗಿದ್ದ ದೀಕ್ಷಿತ ಕುಟುಂಬ ಶಂಕರರ ಅದ್ವೈತ ಪ್ರಚಾರ (ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಮಠಗಳಲ್ಲಿ ಗಯಾದೂ ಒಂದು) ಮತ್ತು ಪೌರೋಹಿತ್ಯಕ್ಕಾಗಿ ಮೈಸೂರಿನಿಂದ ವಲಸೆಹೊರಡುತ್ತದೆ. ಯುರೋಪಿನಲ್ಲಿನ ಯಂತ್ರಯುಗ, ಕೈಗಾರಿಕಾ ಕ್ರಾಂತಿ ಭಾರತದಲ್ಲಿ ಸ್ಥಿತ್ಯಂತರದ ಕಾಲವನ್ನು ಹುಟ್ಟುಹಾಕಿತ್ತು. ಧಾರ್ಮಿಕ ಮತ್ತು ಸಾಂಸ್ಕೃತಿಕ ಸಮಾಜ ಬೆರಗಿನಿಂದ ಕಣ್ಣುಬಿಡುತ್ತಿತ್ತು. ಸಂಸ್ಕೃತಿಯ ಉಳಿವು ಮತ್ತು ಪ್ರಚಾರದ ಕಾರ್ಯಕ್ಕಾಗಿ ಅಂದಿನ ಆಸ್ಥಾನದ ರಾಜರುಗಳೇ ಸ್ಥಾನಿಕ ಬ್ರಾಹ್ಮಣ ಕುಟುಂಬಗಳನ್ನು ಉತ್ತರಭಾರತಕ್ಕೆ ಕಳಿಸುತ್ತಿದ್ದರಂತೆ. ಹಾಗೆ ಸೂರ್ಯನಾರಾಯಣ ದೀಕ್ಷಿತರ ಕುಟುಂಬವೂ ಕಾಲುನಡಿಗೆಯಲ್ಲಿ ಹೊರಟಿತು ಎಂಬುದೊಂದು ಕಥೆ. ಕಾಲುದಾರಿಯ ಪ್ರಯಾಣವೇನೂ ಸಾಮಾನ್ಯದ್ದಲ್ಲ. ಕಷ್ಟಕರ ಯಾತ್ರೆ, ಕಾಡು ಮೃಗಗಳ ಭಯ ಒಂದೆಡೆಯಾದರೆ ಕಳ್ಳರು–ಕಾಕರು, ದರೋಡೆಕೋರರ ಭಯ ಇನ್ನೊಂದೆಡೆ. ಹೇಗೋ ಜೀವವುಳಿಸಿಕೊಂಡು ದೀಕ್ಷಿತ ಕುಟುಂಬ ಉತ್ತರಭಾರತ ತಲಪುತ್ತದೆ. ದಿ. ಸೂರ್ಯ ನಾರಾಯಣರ ಸೋದರನೊಬ್ಬ ಕಾಶಿಯಲ್ಲಿಯೇ ನೆಲೆಸುತ್ತಾರಂತೆ (ಈಗಲೂ ಆ ಕುಟುಂಬದವರು ಇದ್ದಾರೆ). ಇವರು ಬಿಹಾರಕ್ಕೆ ಪ್ರಯಾಣಿಸಿ ಗಯಾದಲ್ಲಿ ನೆಲೆಯೂರುತ್ತಾರೆ.

ಸೂರ್ಯನಾರಾಯಣ ದೀಕ್ಷಿತರ ಮಗ ಸತ್ಯನಾರಾಯಣ ದೀಕ್ಷಿತ. ಸತ್ಯನಾರಾಯಣನ ಪತ್ನಿಯೂ ಮೈಸೂರಿನ ಕೃಷ್ಣಾಗಿರಿಯವರು. ಆಕೆಯ ತಂದೆ ಗಂಜಾಮ್ ಗುಂಡಪ್ಪನವರು ನವರತ್ನದ ವ್ಯಾಪಾರಿಗಳಾಗಿದ್ದು, ಮುತ್ತು, ರತ್ನ ವೈಡೂರ್ಯಗಳನ್ನು ಅರಮನೆಗೆ ಸಪ್ಲೈ ಮಾಡುತ್ತಿದ್ದರಂತೆ ಹಾಗೂ ಮೈಸೂರು ಮಹಾರಾಜರ ಆಪ್ತ ಸ್ನೇಹಿತರಾಗಿದ್ದರಂತೆ.

ಅವರ ಮಗನೇ ನಮ್ಮ ದೆಹಲಿ ಕನ್ನಡಿಗ ದಿ. ಗೋಪಾಲ ಶಾಸ್ತ್ರಿ. ಮನೆಯ ಕಟ್ಟಾ ಸಂಪ್ರದಾಯದ ಬದುಕು ಅವರಿಗೆ ಹಿಡಿಸಲಿಲ್ಲ. ಆಗಲೆ ಸ್ವಾಂತಂತ್ರ ಸಂಗ್ರಾಮದ ಗಾಳಿ ಬೀಸುತ್ತಿದ್ದು ಡಾ. ರಾಜೇಂದ್ರ ಪ್ರಸಾದ ಹಾಗೂ ಜಯಪ್ರಕಾಶ್ ನಾರಾಯಣರಂಥ ಜನನಾಯಕರ ಒಡನಾಟ ಲಭಿಸುತ್ತದೆ. ಗೋಪಾಲ ಶಾಸ್ತ್ರಿ ಮನೆಯವರ ವಿರೋಧವಾಗಿ ಸ್ವಾಂತತ್ರ್ಯ ಚಳವಳಿಯಲ್ಲಿ ಧುಮುಕುತ್ತಾರೆ. 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ ಗೋಪಾಲಶಾಸ್ತ್ರಿಗಳು ಬಿಹಾರದ ಹಜಾರಿಬಾಗ್ ಜೈಲಿನಲ್ಲಿರುತ್ತಾರೆ. ಆಗಿನ ಯುವಕರು "ಬ್ರಿಟಿಷರ ಕಾಲದಲ್ಲಿ ಮದುವೆ ಆಗುವುದು ಬೇಡ, ಮಕ್ಕಳಾದರೆ ಅವರೂ ನಮ್ಮಂತೆ ಪರಾಧೀನರಾಗುತ್ತಾರೆ" ಎಂದು ಭಾವಿಸಿ ಮದುವೆಯೇ ಬೇಡ ಎನ್ನುತ್ತಿದ್ದರಂತೆ. ಆದರೆ ಅವರ ತಂದೆ ತಾಯಿಗಳು ಹೀಗೆ ಬಿಟ್ಟರೇ ಮಗ ಸಂಸಾರಿಯಾಗುವುದಿಲ್ಲ ಎಂದು ಆಲೋಚಿಸಿ ಮದುವೆ ಮಾಡಿದರಂತೆ. ಹೀಗೆ ನಮ್ಮ ಅಕ್ಕರೆಯ ಸಾವಿತ್ರಿ ಶಾಸ್ತ್ರಿ 1946 ರ ಏಪ್ರಿಲ್ 26 ರಂದು ಗೋಪಾಲಶಾಸ್ತ್ರಿಯವರ ಕೈಹಿಡಿದರು.

ಸಾವಿತ್ರಿ ಶಾಸ್ತ್ರಿ 1930, ಮಾರ್ಚ 23 ರಂದು ಕೋಲಾರದಲ್ಲಿ ಹುಟ್ಟಿದರು. ಸ್ವಾತಂತ್ರ್ಯಪೂರ್ವ ಭಾರತದ ಸಂಪ್ರದಾಯಸ್ಥರ ಕುಟುಂಬದಲ್ಲಿ ಹುಟ್ಟಿ ಬೆಳೆದ ಆಕೆ ಮುಂದೆ ಉತ್ತರ ಭಾರತದಲ್ಲೇ ನೆಲೆಸಿ ಹೋದ ಕನ್ನಡ ಕುಟುಂಬವೊಂದರ ಸೊಸೆಯಾಗಿ ಹೋಗುತ್ತಾರೆಂದು ಬಹುಶಃ ಆಗ ಯಾರೂ ತಿಳಿದಿರಲಿಕ್ಕಿಲ್ಲ. ಅವರ ಅಜ್ಜ ವೆಂಕಟಯ್ಯನವರು ನಂಜನಗೂಡಿನವರು. ಅಜ್ಜಿ–ನರಸಮ್ಮ ನಂಜನಗೂಡಿನಲ್ಲಿ ಶಾಲಾ ಪ್ರಾಂಶುಪಾಲರಾಗಿದ್ದರು. ಹೀಗೆ ಅಜ್ಜ–ಅಜ್ಜಿ ಇಬ್ಬರೂ ಅಧ್ಯಾಪಕ ವೃತ್ತಿಯವರು. ಅವರ ಅಜ್ಜಿ ಆಗಿನ ಕಾಲದಲ್ಲೇ ಮನೆಗೆಲಸವನ್ನೂ, ಅಧ್ಯಾಪಕ ವೃತ್ತಿಯನ್ನೂ ಸಮರ್ಥವಾಗಿ ನಿರ್ವಹಿಸುತ್ತಿದ್ದ ಆಧುನಿಕ ವಿಚಾರದ ಮಹಿಳೆಯಾಗಿದ್ದರೆಂದು ಸಾವಿತ್ರಿ ಅವರು ಹೆಮ್ಮೆಯಿಂದ ಹೇಳುತ್ತಾರೆ. ಆಗಿನ ಕಾಲಕ್ಕೆ ಕುಕ್ಕರ್ ಅಥವಾ ಗ್ಯಾಸ್ ಸ್ಟೌವ್ ಇರಲಿಲ್ಲ. ಸೌದೆಯಲ್ಲೇ ಅಡುಗೆ ಮಾಡಬೇಕಿತ್ತು. ಉದ್ಯೋಗಸ್ಥೆಯಾಗಿದ್ದ ಆಕೆ ಒಲೆ ಉರಿಸಿ ಸಾರಿಗೆ ಬೇಳೆ ಬೇಯಿಸುವುದು ಬಹಳ ಸಮಯ ಹಿಡಿಯುವ ಕೆಲಸವಾದ್ದರಿಂದ, ತೊಗರಿಬೇಳೆಯನ್ನು ಒಟ್ಟಿಗೆ ಹುರಿದು, ಬೀಸಿ ಹಿಟ್ಟುಮಾಡಿಟ್ಟುಕೊಳ್ಳುತ್ತಿದ್ದರಂತೆ. ಅದನ್ನು ಕಲಸಿ ದಿಢೀರ್ ಸಾರು ತಯಾರಿಸುತ್ತಿದ್ದರಂತೆ. ಹೀಗೆ ವೃತ್ತಿಜೀವನವನ್ನೂ, ಮನೆಯನ್ನೂ ಚೊಕ್ಕಟವಾಗಿ ತೂಗಿಸಿಕೊಂಡು ಹೋಗುತ್ತಿದ್ದ ಜಾಣೆ. ಅಜ್ಜಿಯಂತೆಯೇ ಚುರುಕು 'ಹುರುಪಿನ' ಸದಾ ಮುಗುಳ್ನಗುವಿನ ಈ ಮೊಮ್ಮಗಳು–ನಮ್ಮ ಸಾವಿತ್ರಿ ಶಾಸ್ತ್ರಿ.

1955ರಲ್ಲಿ ಪಂಡಿತ್ ನೆಹರೂ ಅವರು ಗೋಪಾಲಶಾಸ್ತ್ರಿಗಳನ್ನು ಭಾರತ ಸೇವಕ ಸಮಾಜದಲ್ಲಿ ಕೆಲಸಮಾಡಲು ಬಿಹಾರದಿಂದ ದೆಹಲಿಗೆ ಕರೆಸಿಕೊಂಡರಂತೆ. ಆಗ ಸಾವಿತ್ರಿ ಅವರು ಮಕ್ಕಳೊಂದಿಗೆ ಗಯಾದಲ್ಲೇ ಇದ್ದರು. 1956 ರಲ್ಲಿ ಗೋಪಾಲಶಾಸ್ತ್ರಿಗಳು ಎರಡು ತಿಂಗಳು ಮಡದಿ ಮಕ್ಕಳನ್ನು ದೆಹಲಿ ಸುತ್ತಾಡಿಸಿ ಕರೆತರುತ್ತೇನೆ ಎಂದು ತಂದೆತಾಯಿಗಳಲ್ಲಿ ಅಪ್ಪಣೆ ಪಡೆದು ಕುಟುಂಬವನ್ನು ದೆಹಲಿ ಕರೆತಂದರಂತೆ. ತತ್ಕಾಲಕ್ಕೆ ಎಲ್ಲೋ ಬೇರೆ ಕಡೆ ಬಾಡಿಗೆ ತಂಗಿದ್ದರಂತೆ. ಆಮೇಲೆ ಸುಜಾನ್ ಸಿಂಗ್ ಪಾರ್ಕಿನ ಭವ್ಯ ಬಂಗಲೆಯಲ್ಲಿ ವಸತಿ ಹಂಚಿಕೆಯಾಗಿ ಎರಡು ತಿಂಗಳು ಯಾತ್ರಿಕರಾಗಿ ಬಂದವರು ಇಲ್ಲಿಯೇ ನೆಲೆಸಿಹೋದರು.

1958 ರಲ್ಲಿ ಗೌಹಾಟಿಯಲ್ಲಿ ದಂಗೆ ಪ್ರಾರಂಭವಾಯಿತು. ಆಗ ಶಾಸ್ತ್ರಿ ಅವರು ಆಲ್ ಇಂಡಿಯಾ ಯೂತ್ ಕಾಂಗ್ರೆಸ್ಸಿನ ಸೆಕ್ರೆಟರಿಯಾಗಿದ್ದರು. ಹದಿನೈದು ದಿನ ಗೌಹಾಟಿ, ಹದಿನೈದು ದಿನ ದಿಲ್ಲಿ ಹೀಗೆ ಓಡಾಡಿಕೊಂಡಿದ್ದರಂತೆ. ಅಂಥ ಸಮಯದಲ್ಲಿ ಮಕ್ಕಳನ್ನೂ ಶಾಲೆಗೆ ಕಳಿಸಿ ಮನೆಯನ್ನೂ, ಮನೆಗೆ ಬರುವ ಹೋಗುವವರನ್ನೂ, ಸಂಸಾರವನ್ನು ಲವಲವಿಕೆಯಿಂದ ಸಾವಿತ್ರಿ ಅವರೇ ನಿಭಾಯಿಸುತ್ತಿದ್ದರಂತೆ. ಆಗಿನ ಮನರಂಜನೆಗೆ ದರಿಯಾಗಂಜ್, ಚಾಂದನೀಚೌಕ್, ರೀಗಲ್‌ನಲ್ಲಿ ಸಿನೆಮಾ ಬರುತ್ತಿದ್ದವು. ಎತ್ತಿನ ಗಾಡಿಯಲ್ಲಿ ಓಣಿ ಓಣಿಗೆ ಹೋಗಿ ಇಂಥಲ್ಲಿ ಸಿನೆಮಾ ಇದೆಯೆಂದು ಅನೌನ್ಸ್ ಮಾಡುತ್ತಿದ್ದರಂತೆ. ಆಗ ಜನಸಂಖ್ಯೆಯೇ ಕಡಿಮೆ ಇತ್ತು. ಮೋಟಾರು ಬಸ್ಸುಗಳೂ ಇದ್ದಿಲ್ಲ. ಕೆಲವೆಡೆಯಲ್ಲ ಕಾಲ್ನಡಿಗೆಯಲ್ಲೇ ಓಡಾಡಬೇಕಿತ್ತು. ಹಬ್ಬಕ್ಕೆ ಹೂವು ಇತ್ಯಾದಿ ತರಲು ಚಾಂದನೀಚೌಕ್‌ಗೆ ನಡೆದುಕೊಂಡೇ ಹೋಗುತ್ತಿದ್ದರು. ರಿಕ್ಷಾಗಳಿದ್ದವು. ಅವಕ್ಕಾದರೆ ದುಡ್ಡು ಕೊಟ್ಟು ಹೋಗಬೇಕು. ಈಗಿನ ಐತಿಹಾಸಿಕ ಪ್ರಸಿದ್ಧಿಯ ರಾಮಲೀಲಾ ಮೈದಾನದಲ್ಲಿ ದೇವಸ್ಥಾನದ ಹೆಸರಿಗೆ ಒಂದು ಪುಟ್ಟ ಗುಡಿಸಲಿತ್ತಂತೆ. ಅಷ್ಟೇ. ಈಗಿನ ಸೌತ್ ಎಕ್ಸ್ಟೆಂಶನ್ ಎಲ್ಲ ಕಾಡಿತ್ತು. ದಯಾಲ್ ಸಿಂಗ್ ವರೆಗೆ ಮಾತ್ರ ದಿಲ್ಲಿ. ಮುಂದೆಲ್ಲ ಕಾಡು. ಆಗಿನ್ನೂ ನವದೆಹಲಿ (ಲುಟಿಯನ್ಸ್ ದಿಲ್ಲಿ) ಈಗಿನಂತೆ ಬೆಳೆದು ನಿಂತಿರಲಿಲ್ಲ. ಈಗ ದೆಹಲಿ ಕನ್ನಡ ಶಾಲೆಯಿದ್ದ ಜಾಗದಲ್ಲಿ ಒಂದು ನಾಲಾ ಇತ್ತಂತೆ. ಅದನ್ನು ದಾಟಿಕೊಂಡು ಸರದಾರ್ ಪಟೇಲ್ ಸ್ಕೂಲಿನಲ್ಲಿ ನರ್ಸರಿಯಲ್ಲಿದ್ದ ಮಕ್ಕಳನ್ನು ಕರೆತರಲು ಸಾವಿತ್ರಿ ಅವರು ಹೋಗುತ್ತಿದ್ದರಂತೆ. ಆವಾಗಲೇ ತೆಲುಗು ಶಾಲೆ, ತಮಿಳು ಶಾಲೆಗಳು ಅಸ್ತಿತ್ವಕ್ಕೆ ಬಂದಿದ್ದವು.

ಕನ್ನಡ ಶಾಲೆಯ ಸ್ಥಾಪಕರಾದ ಶ್ರೀ ಎಸ್.ವಿ. ಕೃಷ್ಣಮೂರ್ತಿ ರಾವ್ ಅವರ ಭಾವ ಆಗ ಬಿಹಾರದ ಗವರ್ನರ್ ಆಗಿದ್ದು, ಗೋಪಾಲ ಶಾಸ್ತ್ರಿ ಅವರಿಗೆ ತುಂಬಾ ಆಪ್ತರಾಗಿದ್ದರು. ಅವರ ಮೂಲಕ ಕೃಷ್ಣಮೂರ್ತಿಯವರ ಸ್ನೇಹವೂ ಆಳವಾಯಿತು. ಇವರೆಲ್ಲ ಸೇರಿ ಕನ್ನಡಿಗರ ಮಕ್ಕಳಿಗೆ ಒಂದು ಶಾಲೆಯನ್ನು ತೆರೆಯಲು ಯೋಚಿಸಿದರು. 1961 ರಲ್ಲಿ LND ಯಿಂದ ಈ ಶಾಲೆಗಾಗಿ ಆಗಲೇ ಭೂಮಿ ಹಂಚಿಕೆಯಾಗಿತ್ತಂತೆ. ಒಂದು ಶುಭದಿನದಂದು ಶ್ರೀಮತಿ ಮತ್ತು ಶ್ರೀ ಚಂದ್ರಶೇಖರ್, ಗೋಪಾಲ ಶಾಸ್ತ್ರಿ ದಂಪತಿಗಳು ಮತ್ತು ಎ. ಸೀತಾರಾಮಯ್ಯ ಎಂಬುವರು ಸೇರಿ ಐದು ಇಟ್ಟಿಗೆ ಇಟ್ಟು ಭೂಮಿಪೂಜೆ ಮಾಡಿದ್ದನ್ನು ಸಾವಿತ್ರಿ ಶಾಸ್ತ್ರಿಯವರು ಅತ್ಯಂತ ಪ್ರೀತಿಯಿಂದ ನೆನೆಯುತ್ತಾರೆ. ಅಲ್ಲಿಯೇ ಶ್ರೀಮತಿ ಚಂದ್ರಶೇಖರ್ ಅವರು ಚಹಾ ತಯಾರಿಸಿದರಂತೆ. ಖಾನ್ ಮಾರ್ಕೆಟ್ಟಿನಿಂದ ಸಿಹಿ ತಂದು ಎಲ್ಲರಿಗೂ ಹಂಚಿದರಂತೆ. ಎರಡು ವರ್ಷದಲ್ಲಿ ಕನ್ನಡ ಶಾಲೆ ರಾಜಧಾನಿಯ ಹೃದಯದಲ್ಲಿ ತಲೆಯೆತ್ತಿ ನಿಂತಿತು– ಎಂದು ಸಾವಿತ್ರಿಯವರು ಹೃದಯತುಂಬಿ ಆ ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ.



**ಮಾಜಿ ಪ್ರಧಾನಿ ನೆಹರು ಅವರೊಂದಿಗೆ ದಿ. ಗೋಪಾಲ ಶಾಸ್ತ್ರಿ**

ಸುಜಾನ್ ಸಿಂಗ್ ಪಾರ್ಕ್‌ನ ಅವರ ಮನೆ ಕಿಟಕಿಯಿಂದ ಶಾಲೆ ಕಾಣುತ್ತಿತ್ತು ಆಗ. ಮನೆಗೆಲಸ ಮಾಡಿಕೊಳ್ಳುತ್ತಲೇ ಶಾಲೆಯ ಮಕ್ಕಳ ಮೇಲೊಂದು ಕಣ್ಣಿಟ್ಟಿರುತ್ತಿದ್ದರು. ಯಾರಾದರೂ ಮಕ್ಕಳು ಶಾಲೆಯ ಹೊರಗಡೆ ತಿರುಗಾಡುತ್ತಿದ್ದರೆ ತಕ್ಷಣ ಶಾಲೆಗೆ ಫೋನ್ ಮಾಡಿ–'ನೋಡಿ ಮಕ್ಕಳು ಹೊರಗಡೆ ಇದ್ದಾರೆ, ಒಳಗಡೆ ಕರೆಸಿಕೊಳ್ಳಿ' ಎಂದು ಎಚ್ಚರಿಸುತ್ತಿದ್ದರಂತೆ. ತಾಯಿ ಕಣ್ಣಲ್ಲಿ ಕಣ್ಣಿಟ್ಟು ಮಕ್ಕಳನ್ನು ಕಾಯುವಂತೆ ಸಾವಿತ್ರಿ ಮಕ್ಕಳನ್ನು ಕಾದಿದ್ದಾರೆ ಎಂದರೂ ತಪ್ಪಿಲ್ಲ. ಅಂಥ ಕಾಳಜಿ– ಕಳಕಳಿಯ ಜೀವ ಅವರದು. ಹೀಗೆ ಈ ಕನ್ನಡ ಶಾಲೆಯ ಭೂಮಿ ಪೂಜೆಯಿಂದ ಹಿಡಿದು ಇಂದಿನ ದಿನದ ವರೆಗೂ ಎಲ್ಲ ಘಟ್ಟಗಳಲ್ಲಿ ಅವರು ಶಾಲೆಯ ಶ್ರೇಯೋಭಿವೃದ್ಧಿಗಾಗಿ ಹಗಲಿರುಳು ಚಿಂತಿಸಿದವರು. ಅದಕ್ಕಾಗಿ ಸತತವಾಗಿ ದುಡಿದವರು. ಕನ್ನಡ ಶಾಲೆಯ ಐವತ್ತು ದಶಕಗಳ ಏಳು–ಬೀಳು, ಬೆಳವಣಿಗೆ

ಎಲ್ಲದರ ಪ್ರತ್ಯಕ್ಷ ಸಾಕ್ಷಿಯಾಗಿ ಶಾಲೆಯ ಬಗ್ಗೆ ಅತ್ಯಂತ ಅಭಿಮಾನ ಮತ್ತು ಪ್ರೀತಿಯುಳ್ಳ ಸಾವಿತ್ರಿ ಅವರು "ಕನ್ನಡಿಗರು ಎಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಶಾಲೆಯನ್ನು ಬೆಳೆಸಬೇಕು. ಈಗಲೂ ಶಾಲೆ ಬೆಳೆದರೆ ಸಂತೋಷ ಪಡ್ತೀನಿ" ಎಂದು ಭಾವಪೂರ್ಣವಾಗಿ ಹೇಳುತ್ತಾರೆ. ಅಂಥ ಅಭಿಮಾನ ಅವರಿಗೆ ಶಾಲೆಯ ಮೇಲೆ.

ದೇಶಕ್ಕೆ ಸ್ವಾತಂತ್ರ್ಯ ದೊರೆಯುವ ಮುನ್ನವೇ ಉತ್ತರಭಾರತ ಸೇರಿದ ಸಾವಿತ್ರಿ ಅವರನ್ನು ಗಾಢವಾಗಿ ಪ್ರಭಾವಿಸಿದ್ದು ಸ್ವಾತಂತ್ರ್ಯ ಹೋರಾಟಗಾರ ಪತಿ. ಮನೆಗೆ ಬರು-ಹೋಗುವ ಅಪ್ರತಿಮ ದೇಶಭಕ್ತ ಹೋರಾಟಗಾರರು. ಹೀಗೆ ಸಾವಿತ್ರಿ ಅವರ ವ್ಯಕ್ತಿತ್ವ ನಾನಾ ರೀತಿಯಲ್ಲಿ ವಿಕಸಿತವಾಯಿತೆಂದರೆ ಅತಿಶಯೋಕ್ತಿಯೇನಲ್ಲ. ಅವರಲ್ಲಿ ಸೇವಾ ಮನೋಭಾವನೆ, ನಾಡು ನುಡಿಯ ಬಗ್ಗೆ ಪ್ರೇಮ, ಅಪಾರ ಅಭಿಮಾನವಿದೆ. ಈ ವಯಸ್ಸಿನಲ್ಲೂ ಬೇಸರವಿಲ್ಲದೇ ಬಂದು ಹೋಗುವವರನ್ನು ಅತ್ಯಂತ ಆದರದಿಂದ ಸತ್ಕರಿಸುತ್ತಾರೆ. 1966 ರಲ್ಲಿ ಮಗಧ ಮಹಿಳಾ ಸಮಿತಿಯ ಅಧ್ಯಕ್ಷೆಯಾಗಿದ್ದ ಸಾವಿತ್ರಿ ಶಾಸ್ತ್ರಿ ಕನ್ನಡ ತೆಲುಗಿನ ಜೊತೆ ಮಗಧಿ, ಹಿಂದಿ, ತಮಿಳು, ಮಾತಾಡಬಲ್ಲವರಾಗಿದ್ದರು. ಶ್ರೀಮತಿ ಇಂದಿರಾ ಗಾಂಧಿ ಅವರು ಯೂತ್ ಕಾಂಗ್ರೆಸ್ಸಿನ ಸದಸ್ಯೆಯಾಗಿದ್ದಾಗ, ಸಾವಿತ್ರಿ ಅವರೂ ಶ್ರೀಮತಿ ಕೆ.ಸಿ. ರೆಡ್ಡಿ, ಅರುಣಾ ಅಸಫ್ ಅಲಿ, ಅವರೆಲ್ಲ ಇಂದಿರಾ ಅವರ ಜತೆ ಸಮಾಜಸೇವೆಗೆಂದು ಅಲ್ಲಲ್ಲಿ ಹೋಗುತ್ತಿದ್ದರಂತೆ. 1962 ರಲ್ಲಿ ಚೀನಾ ಯುದ್ಧ ನಡೆದು ಅನೇಕ ನಿರಾಶ್ರಿತರು ಶಿಬಿರಗಳಲ್ಲಿ ನೆಲೆಯೂರಿದಾಗ ಅಲ್ಲೆಲ್ಲ ಈ ಮಹಿಳೆಯರು ಹೋಗಿ ಸುಖ-ದುಃಖ ವಿಚಾರಿಸಿಕೊಳ್ಳುತ್ತಿದ್ದಲ್ಲದೇ, ಅಕ್ಕಿ, ಆಹಾರ, ಸೋಪು, ಔಷಧ, ಬಟ್ಟೆ ಬರೆ ಇತ್ಯಾದಿಗಳನ್ನು ಮನೆ ಮನೆಯಿಂದ ಸಂಗ್ರಹಿಸಿ ಶಿಬಿರಗಳಲ್ಲಿ ಹಂಚುತ್ತಿದ್ದರಂತೆ. ಛಳಿಗಾಲದಲ್ಲಿ ಸ್ವೆಟರ್ ಹೆಣೆದು ಕೊಡುತ್ತಿದ್ದರಂತೆ ಶಿಬಿರದ ನಿರಾಶ್ರಿತರಿಗೆ. ಇದಲ್ಲದೇ 1970 ರ ಭಾರತ -ಪಾಕಿಸ್ತಾನ ಯುದ್ಧದ ಸಮಯದಲ್ಲೂ ಸಾಕಷ್ಟು ಸೇವೆಯನ್ನು ಮಾಡಿದ್ದಾರೆ.

1962 ರಲ್ಲಿ ಈಗಿನ ತೀಸ್ ಜನೆವರಿ ಮಾರ್ಗ್ ಇದ್ದ ಜಾಗದಲ್ಲಿ. ಆಗಿನ ಹೋಟೆಲ್ ಕ್ಲಾರಿಜಸ್ ಹಿಂಭಾಗ ಒಂದು ಖಾಲಿ ಜಾಗೆಯಿತ್ತಂತೆ. ಅಲ್ಲಿ ಅಗಸರೆಲ್ಲ ಬಟ್ಟೆ ಒಣ ಹಾಕುತ್ತಿದ್ದರು. ಆಗಿನ ಹೌಸಿಂಗ್ ಮಿನಿಸ್ಟರ್ ಆಗಿದ್ದ ಮೆಹರ್ಸಿಂಗ್ ಖನ್ನಾ ಅವರ ಸಹಾಯದಿಂದ ಈ ಜಾಗೆಯನ್ನು ಪಡೆದುಕೊಂಡು, 'ಜ್ಞಾನ ಮಂದಿರ ಸೊಸೈಟಿ' ಶಾಲೆಯನ್ನು ಮರದ ಕೆಳಗೇ ಪ್ರಾರಂಭಿಸಿದರಂತೆ. ಅದು ಕೆಳವರ್ಗದ ಬಡ ಮಕ್ಕಳಿಗಾಗಿ. ಮನೆ ಮನೆಗೆ ಹೋಗಿ ಪೋಷಕರಿಗೆ ಶಾಲೆಗೆ ಕಳಿಸಿ ಎಂದು ತಿಳಿಹೇಳಿ ಬಡ ಮಕ್ಕಳನ್ನು ಒಂದುಗೂಡಿಸಿದರಂತೆ. ಅಲ್ಲೇ ನಂಬರ್ 26 ಔರಂಗಜೇಬ್ ರಸ್ತೆಯಲ್ಲಿದ್ದ ಶ್ರೀಮತಿ ಕೇಜರಿವಾಲ್ ಕುಟುಂಬದ ಸದಸ್ಯರು, ಸಾವಿತ್ರಿ ಶಾಸ್ತ್ರಿ, ಗೋಪಾಲ ಶಾಸ್ತ್ರಿ, ಮತ್ತಿತರ ಸಮಾಜಸೇವಾ ಮನೋಭಾವದ ಹಿರಿಯರೆಲ್ಲ ಸೇರಿ ಕೈಯಿಂದ ಹಣ ಸಂಗ್ರಹಿಸಿ, ಮಕ್ಕಳಿಗೆ ಸ್ಲೇಟು, ಬಳಪ, ಪುಸ್ತಕ, ಪೆನ್ಸಿಲ್,



**ಮಾಜಿ ಪ್ರಧಾನಿ ದಿ. ಇಂದಿರಾ ಗಾಂಧಿ ಅವರೊಂದಿಗೆ ದಿ. ಸಾವಿತ್ರಿ ಶಾಸ್ತ್ರಿ**

ಯೂನಿಫಾರ್ಮ್, ಶೂ, ಇತ್ಯಾದಿಗಳ ವ್ಯವಸ್ಥೆ ಮಾಡಿದರಂತೆ. ಮಕ್ಕಳನ್ನು ಸ್ವಚ್ಛವಾಗಿಡಲು ಅಲ್ಲೇ ಅವುಗಳಿಗೆ ಕೈಯಾರೆ ಸ್ನಾನ ಮಾಡಿಸುತ್ತಿದ್ದರಂತೆ. ಛಳಿಗಾಲದಲ್ಲಿ ಮಕ್ಕಳಿಗೆ ಕಷ್ಟವಾಗುತ್ತದೆಂದು ಸಾವಿತ್ರಿಯವರು ತಮ್ಮ ಮನೆಯಿಂದ ಹಳೇ ನೀರು ಕಾಯಿಸುವ ಬಾಯ್ಲರನ್ನು ತೆಗೆದುಕೊಂಡು ಹೋಗಿ ಇಟ್ಟಿದ್ದರಂತೆ. ಮನೆಯಲ್ಲಿ ತಿನ್ನಲು ಉಡಲು ಇಲ್ಲದ ಬಡವರು ಮಕ್ಕಳನ್ನು ಹೇಗೆ ಶಾಲೆಗೆ ಕಳಿಸಿಯಾರು? ಮಕ್ಕಳು ಶಾಲೆಗೆ ಬರಲಿ ಎಂಬ ಸದುದ್ದೇಶದಿಂದ ಮಕ್ಕಳಿಗೆ ತಿಂಡಿ ತಿನಿಸುಗಳನ್ನು ಮನೆಯಿಂದಲೇ ಸರದಿಯಂತೆ ಒಬ್ಬರು ಮಾಡಿಕೊಂಡು ಹೋಗುತ್ತಿದ್ದರಂತೆ. ನಂತರ ಅಲ್ಲೇ ಮರದ ಕೆಳಗೆ ರವೆ ಹಲ್ವ ಮಾಡತೊಡಗಿದರಂತೆ. ಅರಳಿ ಮರದ ಎಲೆಗಳನ್ನು ತೊಳೆದು ಅದರಲ್ಲೇ ಬಡಿಸುತ್ತಿದ್ದರಂತೆ. ಮುಂದೆ ತಮ್ಮ ತಮ್ಮಲೇ ದುಡ್ಡು ಹಾಕಿಕೊಂಡು ತಟ್ಟೆ, ಪ್ಲೇಟು, ಗ್ಲಾಸು, ಬಕೆಟ್ಟು ಹೀಗೆ ಎಲ್ಲ ವ್ಯವಸ್ಥೆಯನ್ನೂ ಮಾಡಿದರಂತೆ. ಹೀಗೆ ಪ್ರಾರಂಭವಾದ-'ಜ್ಞಾನ ಮಂದಿರ ಸೊಸೈಟಿ' ವಿದ್ಯಾಮಂದಿರ ಈಗ ಸಾವಿರ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿದೆ. ಶ್ರೀಮಂತವಾಗಿಯೂ ಬೆಳೆದಿದೆ. ಮುಂದೆ 1988 ರಲ್ಲಿ ಶಾಸ್ತ್ರಿ ದಂಪತಿಗಳು ಅಮೇರಿಕೆಗೆ ಹೋಗಬೇಕಾಗಿ ಬಂದಾಗ ಶಾಲೆಯ ವ್ಯವಹಾರದಲ್ಲಿ ಇತರರಿಗೆ ತಮ್ಮಿಂದ ತೊಂದರೆಯಾಗಬಾರದು ಎಂದು ಜ್ಞಾನ ಮಂದಿರ ಸೊಸೈಟಿಯ ಆಡಳಿತ ಮಂಡಳಿಗೆ ರಾಜೀನಾಮೆ ನೀಡಿದರಂತೆ.

ಆಗಲೇ LND ಇನ್ನೊಂದು ಶಾಲೆಯ ನಿರ್ಮಾಣಕ್ಕಾಗಿ ಮಸ್ಜಿದ್ ಮೋಠ್ (ಗ್ರೇಟರ್ ಕೈಲಾಸ್ ಭಾಗ ಎರಡರಲ್ಲಿ) ಹತ್ತಿರದ ವಿಶಾಲ ಜಮೀನನ್ನು ಕೇವಲ 9000 ರೂ. ಗೆ ಹಂಚಿಕೊಟ್ಟಿತ್ತಂತೆ. ಆದರೆ ಶಾಸ್ತ್ರೀ ಅವರ ರಾಜೀನಾಮೆ ನಂತರ ಕೇಜರೀವಾಲ್ ಅವರು J.K.TV ಅವರಿಗೆ ಆ ಭೂಮಿಯನ್ನು ಮಾರಿಕೊಂಡರಂತೆ. ಹೀಗೆ ಕೋಟ್ಯಾಂತರ ಬೆಲೆಬಾಳುವ ಜಮೀನು ಅವರ ಕಣ್ಣೆದುರಿಗೇ ಬೇರೆಯವರ ಕೈವಶವಾಯಿತು. ಸ್ವಲ್ಪ ಜಾಣತನ ಮಾಡಿದ್ದರೆ ನಾವೇ ಖರೀದಿಸಿ ಇನ್ನೊಂದು ಕನ್ನಡ ಶಾಲೆಯನ್ನು ಕಟ್ಟಬಹುದಿತ್ತು ಎಂದು ಈಗಲೂ ಸಾವಿತ್ರಿ ಶಾಸ್ತ್ರಿ ಮರಗುತ್ತಾರೆ. ವಿಷಾದದಿಂದ ನೆನೆಯುತ್ತಾರೆ. ಅಂಥ ಪ್ರಾಮಾಣಿಕ, ಸಾತ್ವಿಕ ಬದುಕು ನಡೆಸಿದ ಸರಳ ಹೃದಯವಂತ ಕುಟುಂಬದ ನಾಲ್ಕನೇ ತಲೆಮಾರು ಪ್ರಸ್ತುತ ದೆಹಲಿಯ ಹೊಸ ಚಿಗುರುಗಳು.

ಇಂದು ಗೋಪಾಲ ಶಾಸ್ತ್ರಿಯವರಿಲ್ಲ. ಹೀಗೆ ಕೋಲಾರದಿಂದ ಬಿಹಾರ್, ಮುಂದೆ ದೆಹಲಿ ಹೀಗೆ 72 ವರ್ಷಗಳ ವಾಸದಲ್ಲಿ ಕನ್ನಡವನ್ನೇ ಬದುಕಿದ ಅಚ್ಚ ಕನ್ನಡತಿ. ಹಿಂದೊಮ್ಮೆ ಕೂರಿಸಿ ಊಟಮಾಡಿಸಿ ನನಗೆ ಇಷ್ಟೆಲ್ಲ ಕಥೆ ಹೇಳಿದ 88 ರ ಸಾವಿತ್ರಿ ಶಾಸ್ತ್ರಿ ಆಂಟಿ ಇವತ್ತು ಮರೆವಿನ ರೋಗಕ್ಕೆ ಬಲಿಯಾಗಿ ಎಲ್ಲವನ್ನೂ ಮರೆತಿದ್ದಾರೆ. ಮೊನ್ನೆ ಮೊನ್ನೆ ಆಸ್ಪತ್ರೆಯ ಐಸಿಯೂವಿನಲ್ಲಿದ್ದ ಅವರನ್ನು ವೈದ್ಯರು ಕೈಸೋತು ಮನೆಗೆ ಕಳಿಸಿದ್ದಾರೆ. ಕಣ್ಣುಗಳು ಮಂಜಾಗುವ ಮುನ್ನವೇ ಈ ಕಥೆಯನ್ನು ಹೇಳಬೇಕೆನಿಸಿತು.

ದೆಹಲಿ ಬದುಕಿನ ನೂರು ತಲ್ಲಣಗಳಲ್ಲಿ ತಂಪೆರೆಯುವಂತೆ, ಸೋಲಿನ ಕ್ಷಣಗಳನ್ನು ಮೆಟ್ಟಿ ನಿಲ್ಲುವಂತೆ ನನಗೆ ಸಾವಿತ್ರಿ ಶಾಸ್ತ್ರಿ ಅವರ ಪ್ರೀತಿಯ ನೆರಳು ಸದಾ ದೊರಕಿದೆ. ಆ ಋಣ ತೀರಿಸಲಾಗದ ಅಪಾರ ಪ್ರೀತಿಗೆ ನಾನು ಚಿರಋಣಿ.

**ರೇಣುಕಾ ನಿಡಗುಂದಿ**

(ದಿನಾಂಕ 8.11.2018 ರ ಸುಧಾ ಪತ್ರಿಕೆಯಲ್ಲಿ ಪ್ರಕಟಿತ)

# ಬಸವಣ್ಣ ಇವತ್ತಿನ ಜಗತ್ತಿಗೆ ಏಕೆ ಬೇಕು?

ಬಸವಣ್ಣ ಇವತ್ತಿನ ಜಗತ್ತಿಗೆ ಏಕೆ ಬೇಕು? ಎಂಬ ಪ್ರಶ್ನೆ ವಚನ ಚಳುವಳಿಯನ್ನು ಕುರಿತು ಆಸಕ್ತಿಯಿರುವ ಯಾರಿಗಾದರೂ ಸಹಜವಾಗಿಯೇ ಕಾಡಬಹುದು. ನಾನೂ ಕೂಡ ಅದನ್ನು ಅನೇಕ ಬಾರಿ ಚಿಂತನೆ ನಡೆಸಿದ್ದೇನೆ. ಹೀಗಾಗಿ ಈ ಬಗ್ಗೆ ಅನೇಕ ವಚನಗಳ ವಿಶ್ಲೇಷಣೆ, ವ್ಯಾಖ್ಯಾನ, ವಿದ್ವಾಂಸರ ಲೇಖನಗಳನ್ನು ಓದಿದ ಮೇಲೆ ನನ್ನ ಕೆಲವು ಅನಿಸಿಕೆಗಳನ್ನು ಈ ಶುಭ ಸಂದರ್ಭದಲ್ಲಿ ನಿಮ್ಮ ಜೊತೆ ಹಂಚಿಕೊಳ್ಳಲು ಈ ಮೂಲಕ ಪ್ರಯತ್ನಿಸಿದ್ದೇನೆ.

ನಮಗೆ ಗೊತ್ತಿರುವಂತೆ ಈ ಸೃಷ್ಟಿಯಲ್ಲಿಯೇ ವೈವಿಧ್ಯತೆ ಅಡಗಿದೆ. ಏಕತಾನತೆ ಎನ್ನುವುದಕ್ಕೆ ಇಲ್ಲಿ ಅರ್ಥವೇ ಇಲ್ಲ. ರೂಪು, ಬಣ್ಣ, ಸ್ವಭಾವ, ಭಾವನೆ.....ಹೀಗೆ ಯಾವುದರಲ್ಲೂ ಏಕತಾನತೆ ಎನ್ನುವುದು ಇಲ್ಲವೇ ಇಲ್ಲ. ವೈವಿಧ್ಯತೆಯೇ ಅದರ ಮೂಲ ಗುಣ. ಸೃಷ್ಟಿ ರಹಸ್ಯದ ಈ ವಿವಿಧತೆಯ ಮೂಲ ಶೃತಿಯನ್ನು ತಮ್ಮ ಬದುಕಿನ ಮೂಲಕ ಎತ್ತಿಹಿಡಿದು ಗೌರವಯುತವಾಗಿ ಬದುಕಬಲ್ಲ, ಹೊಸ ಸಮಾಜವನ್ನು ನಿರ್ಮಿಸಬಲ್ಲ ಸಾಧ್ಯತೆಯನ್ನು ತೋರಿದವರು 12ನೇ ಶತಮಾನದಲ್ಲಿ ಬಾಳ ಬದುಕಿದ ಬಸವಾದಿ ಶರಣರು.

ಇಂತಹ ವೈವಿಧ್ಯತೆಯಿಂದ ಕೂಡಿದ ಜಗತ್ತಿನ ಸಕಲ ಜೀವ ಸಂಕುಲದ ಸಂಕುಲದ ಲೇಸಿಗಾಗಿ ಅಹೋರಾತ್ರಿ ಶ್ರಮಿಸಿದ ಶರಣ ಚಳವಳ ಗೊಡ್ಡು ಸಂಪ್ರದಾಯಕ್ಕೆ ಸೆಡ್ಡು ಹೊಡೆದು ಪರ್ಯಾಯ ಸಮಾಜವೊಂದನ್ನು ಕಟ್ಟಲು ಯಶಸ್ವಿಯಾದದ್ದು ಸಾಮಾಜಿಕ ಕ್ರಾಂತಿಯ ಹರಿಕಾರ ಬಸವಣ್ಣನವರ ನೇತೃತ್ವದ ಫಲಶೃತಿ.

ಕಲ್ಯಾಣ ಕ್ರಾಂತಿ ಮಾನವೀಯ ಮೌಲ್ಯಗಳಿಗಾಗಿ ಸೆಣಸಿದ ಕ್ರಾಂತಿ.

"ನಾನು ಬಂದ ಕಾರ್ಯಕ್ಕೆ ನೀವು ಬಂದಿರಯ್ಯ?..." ಎಂದು ಎಲ್ಲರನ್ನೂ ಹುರಿದುಂಬಿಸಿ, ಹುರುಪು ಉತ್ಸಾಹಗಳಿಂದ ಶರಣ ಪಡೆಯನ್ನು ಮುನ್ನಡೆಸಿದ ಪ್ರಧಾನ ದಂಡನಾಯಕ ಬಸವಣ್ಣನೆಂಬ ಪ್ರೇರಕ ಶಕ್ತಿ.

ಲೋಕ ಕಲ್ಯಾಣಕ್ಕಾಗಿ ಅನುಸರಿಸ ಬೇಕಾದ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ, ಅವುಗಳನ್ನು ಸಮಾಜದಲ್ಲಿ ಅನುಷ್ಠಾನಗೊಳಿಸುವ ವಿವಿಧ ಮಾರ್ಗಗಳ ಬಗ್ಗೆ ಬಸವಣ್ಣನವರು ತೋರಿದ ಮಾರ್ಗದಲ್ಲಿ ನಡೆಯಲು ಶರಣರ ದೊಡ್ಡ ಪಡೆಯೇ ಹಗಲಿರುಳು ಕಾರ್ಯನಿರ್ವಹಿಸಿತ್ತು.

ಬಸವಾದಿ ಶಿವ ಶರಣರ ನಡೆ ಹೇಗಿತ್ತೆಂದರೆ "ಲೋಕ ವಿರೋಧಿ ಶರಣನಾರಿಗೂ ಅಂಜುವುದಿಲ್ಲ" ಎನ್ನುವಂತಹ, ತತ್ವ–ಸಿದ್ಧಾಂತಗಳಿಗೆ ಬದ್ಧ ತ್ಯಾಗಬಲಿದಾನಗಳಿಗೆ ಸಿದ್ಧ, ಎಂಬ ದಿಟ್ಟತನದಿಂದ ಕೂಡಿತ್ತು.

ಶರಣ ಚಳುವಳಿಯ ವೈಶಿಷ್ಟ್ಯತೆ ಎಂದರೆ – ಬಹುದನಿಗಳ ಸ್ವೀಕಾರ, ವಿಚಾರಗಳ ವಿನಿಮಯ– ಭಾವನೆಗಳ ಸಮನ್ವಯ ಮತ್ತು ಪೂರ್ವಾಗ್ರಹಗಳಿಂದ ಮುಕ್ತವಾದ ಚಿಂತನೆ, ಎಲ್ಲ



ಕಾಯಕಗಳಿಗೂ ಗೌರವ ಸಮಾನ ಹಕ್ಕು ....ಆ ಮೂಲಕ ಸಮಸಮಾಜದ ನಿರ್ಮಾಣ.

ಇಷ್ಟೆಲ್ಲಾ ವೈಶಿಷ್ಟ್ಯಗಳನ್ನುಳ್ಳ ಶರಣ ಚಳುವಳಿಯ ಯಶಸ್ಸಿನ ಗುಟ್ಟು ಜಗತ್ತು ಅದುವರೆಗೆ ಕಂಡರಿಯದ, ಕೇಳರಿಯದ ನವೀನ ಮಾದರಿಯ ನಾಯಕತ್ವ– ಅದೇ ಸಾಮೂಹಿಕ ನಾಯಕತ್ವ.

ನಮ್ಮ ಅನುಭವದಮಾತುಗಳಲ್ಲೇ ಹೇಳುವುದಾದರೆ ಒಬ್ಬಬ್ಬರಲ್ಲೂ ಒಂದೊಂದು ದೋಷಗಳನ್ನೂ, ದೌರ್ಬಲ್ಯಗಳನ್ನೂ ಹುಡುಕುತ್ತಾ ಹೋದರೆ ಯಾವ ಘನ ಕಾರ್ಯಗಳನ್ನೂ ಸಾಧಿಸಲಾಗದು. ಸರ್ವರ ಸಹಯೋಗ ಮತ್ತು ಸಮನ್ವಯತೆ ಯಾವುದೇ ಚಳುವಳಿಯ, ಸಂಘಟನೆಯ ಸಾಮರ್ಥ್ಯವನ್ನು ಹೆಚ್ಚಿಸಬಲ್ಲುದು. ಜೊತೆಗೆ ಇಂದಿನ ಜಗತ್ತು ಎದುರಿಸುತ್ತಿರುವ ಹಲವಾರು ಗೊಂದಲಗಳಿಗೆ ಬಸವಾದಿ ಶಿವ ಶರಣರ ಆ ಚಿಂತನೆಗಳು ಸರಿಯಾದ ತೋರುದೀಪಗಳೆಂದು ನನ್ನ ನಂಬಿಕೆ. ಸಾಮೂಹಿಕ ನಾಯಕತ್ವವು ದೀರ್ಘಾವಧಿಯಲ್ಲಿ ಹೊಸ ಸಂಸ್ಕೃತಿಯೊಂದನ್ನು ಖಂಡಿತವಾಗಿಯೂ ಹುಟ್ಟುಹಾಕಬಲ್ಲುದು.

ಇವತ್ತು ನಾವೆಲ್ಲರೂ ಬೌದ್ಧಿಕ ಬಂಡವಾಳ ('intellectual capital')ದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದೇವೆ. ಆದರೆ ಇನ್ನೂ ತಿಳಿದುಕೊಳ್ಳ ಬೇಕಾಗಿರುವುದೇನೆಂದರೆ ಕಲ್ಯಾಣದಲ್ಲಿ ಹೂಡಲ್ಪಟ್ಟದ ಸಾಮೂಹಿಕ ಬಂಡವಾಳ (social capital?)ದ ಬಗ್ಗೆ. ಅಂದರೆ ನಾಯಕನ ಬದಲು ನಾಯಕತ್ವದ ಪ್ರಗತಿ. ಸಾಮೂಹಿಕ ನಾಯಕತ್ವವು ನಾಯಕರನ್ನು ಬೆಳೆಸುವುದಕ್ಕಿಂತ ಚಳುವಳಿಯ ನಾಯಕತ್ವದ ಸಾಮರ್ಥ್ಯವನ್ನು ಬೆಳೆಸಬಲ್ಲದು ಎಂಬುದಕ್ಕೆ ಮಾನವೀಯ ಮೌಲ್ಯಗಳಿಗಾಗಿ ಸೆಣೆಸಿದ ಕಲ್ಯಾಣ ಕ್ರಾಂತಿಯೇ ಸಾಕ್ಷಿ. ಸಮಾಜದ ಎಲ್ಲ ವಲಯಗಳಲ್ಲೂ ಇದ್ದ ಸ್ಥಾಪಿತ ಯಜಮಾನಿಕೆಯನ್ನು ಧ್ವಂಸ ಮಾಡುವ ಪ್ರಯತ್ನ ನಡೆಸಿದ ಶರಣರಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಬಸವಣ್ಣನವರು ನಾಯಕತ್ವಕ್ಕೂ ಹೊಸ ಭಾಷ್ಯ ಬರೆದರು. ಹೊಸ ಧರ್ಮದ ದ್ರಷ್ಟಾರರೂ, ಸಮ ಸಮಾಜದ ಸೂತ್ರಧಾರರೂ ಆಗಿದ್ದ ಅವರು ಇಡೀ ಚಳುವಳಿಯನ್ನು ಕಟ್ಟಿದ್ದು ಸಾಮೂಹಿಕ ನಾಯಕತ್ವದಿಂದ.

ಇಪ್ಪತ್ತೊಂದನೇ ಶತಮಾನದ ಮೂರನೇ ದಶಕದಲ್ಲಿ ಬದುಕುತ್ತಿರುವ ನಾವು ನೋಡುತ್ತಿರುವಂತೆ ಜಗತ್ತು ಏನೆಲ್ಲಾ ವಿಜ್ಞಾನ, ತಂತ್ರಜ್ಞಾನ ಪ್ರಗತಿಸಾಧಿಸಿದ್ದರೂ ಕೂಡ ಹಲವಾರು ದೇಶಗಳಲ್ಲಿ ಸಾಮೂಹಿಕ ನಾಯಕತ್ವದ ಕುರಿತು ಈಗ ಗಂಭೀರವಾದ ಚಿಂತನೆ ನಡೆಯುತ್ತಿರುವುದನ್ನು ನೋಡಿದ್ದೇವೆ.

ಆದರೆ ಇಂತಹ ಗೊಂದಲಕ್ಕೆ ಒಂಬತ್ತು ಶತಮಾನಗಳ ಹಿಂದೆಯೇ ಬಸವಣ್ಣನವರು ಪರಿಹಾರವನ್ನು ಹುಡುಕಿ ಅನುಷ್ಠಾನಕ್ಕೆ ತಂದಿದ್ದರು. ಅವರ ವಚನಗಳಲ್ಲಿ ಸಾಕಷ್ಟು ಉದಾಹರಣೆಗಳು ನಮಗೆ ಸಿಗುತ್ತವೆ. ಬಸವಣ್ಣನವರ ನಾಯಕತ್ವದ ಬಗ್ಗೆ ಯೋಚಿಸುವಾಗಲೆಲ್ಲ ನೆನಪಾಗುವ, ಹಾಗೆ ನೆನಪಾದಾಗಲೆಲ್ಲ ಬಿಟ್ಟು ಬಿಡದೆ ಮನಸ್ಸನ್ನು ಕಾಡುವ ಈ ವಚನದಲ್ಲಿ ಸಾಮೂಹಿಕ ನಾಯಕತ್ವದ ಪ್ರಬಲ ಎಳೆಗಳಿವೆ. ಯಾವುದೇ ಸಂಘಟನೆ, ಸಂಸ್ಥೆ, ಆಡಳಿತ ವ್ಯವಸ್ಥೆ ಅಥವಾ ಚಳುವಳಿಯು ಸಮರ್ಪಕವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಯಲು ನಾಯಕ ಸ್ಥಾನದಲ್ಲಿರುವವರ ಪಾತ್ರ ಬಹಳ ಮುಖ್ಯ. ಐತಿಹಾಸಿಕ ದಾಖಲೆಗಳ ಪ್ರಕಾರ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ವಲಯಗಳನ್ನು ಆವರಿಸಿದ ಆ ಕ್ರಾಂತಿಕಾರಕ ಬದಲಾವಣೆಗಳು ಸಂಭವಿಸಲು ತೆಗೆದುಕೊಂಡದ್ದು ಕೇವಲ ಎರಡು ಮೂರು ದಶಕಗಳು! ಇಷ್ಟು ಪುಟ್ಟ ಅವಧಿಯಲ್ಲಿ ಅಷ್ಟೊಂದು ವ್ಯಾಪಕವಾಗಿ ಇತಿಹಾಸದ ದಿಕ್ಕನ್ನೇ ಬದಲಿಸಲು ಸಾಧ್ಯವಾದದ್ದು ಬಸವಣ್ಣನವರು ಚಾಲನೆ ನೀಡಿದ ಸಾಮೂಹಿಕ ನಾಯಕತ್ವದಿಂದ.

ಬಸವಣ್ಣನವರು ಈ ಚಿಂತನೆಯ ಮೂಲಕ ಎಲ್ಲರನ್ನೂ ಒಳಗೊಂಡ ಸಮ ಸಮಾಜದ ನಿರ್ಮಾಣದ ಗುರಿಯತ್ತ ನಡೆಯಬಯಸಿದ್ದು ವಿಶೇಷ. ಜಗತ್ತಿನಲ್ಲಿಯೇ ಇಂಥದೊಂದು ನಿದರ್ಶನ ಬೇರೆಲ್ಲೂ ಸಿಗಲಿಕ್ಕಿಲ್ಲ. ಬಸವಣ್ಣನವರು ತಾನು ದೇವದೂತ ಎಂದಾಗಲಿ, 'ದೇವರ ಮಗ ನಾನು, ನನಗೆ ಶರಣಾಗಿ' ಎಂದಾಗಲಿ, ಆಚಾರ್ಯ ಪುರುಷ, ಧರ್ಮ ಪ್ರವರ್ತಕ ತಾನು ಎಂದಾಗಲಿ ಎಲ್ಲಿಯೂ ಹೇಳಿಕೊಳ್ಳಲಿಲ್ಲ. ಜನಸಾಮಾನ್ಯರು ಹಿಂದುಮುಂದು ಯೋಚಿಸದೆ ತಮ್ಮ ಮೇಲೆ ಅಂಧಭಕ್ತಿಯನ್ನು ತೋರಿಸುವುದಾಗಲಿ, ವಿಶ್ವಾಸ ಇಡುವುದಾಗಲಿ ಅವರಿಗೆ ಸಹ್ಯವಾಗುತ್ತಿರಲಿಲ್ಲ. 'ಎನಗೆ ಪ್ರಥಮಾಚಾರ್ಯನೆಂಬರು ನಾನೇನು ಮಾಡಿದೆನಯ್ಯಾ..' ಎಂದು ಹೇಳುತ್ತಾ ತಾವೊಬ್ಬ ಬಚ್ಚ ಬರಿಯ ಬಸವ ಎಂದು ಸಾರಿದರು.

ಯಾವುದೇ ಸಾಧನೆಯ ಶ್ರೇಯಸ್ಸನ್ನೂ ತಮಗೆ ಅಂಟಿಸಿಕೊಳ್ಳದಂತೆ ವಿನೀತ ಭಾವದಿಂದ ನಡೆದವರು ಬಸವಣ್ಣ. ಅವರ ಇಂಥ ಅಸದೃಶ ವಿನಯಶೀಲತೆಯೇ ಪ್ರಕಾಂಡ ಪಂಡಿತರನ್ನು, ಪಾಮರರನ್ನು ಸೂಜಿಗಲ್ಲಿನಂತೆ ಅವರತ್ತ ಸೆಳೆದಿತ್ತು.

ಅಂದು ಕಲ್ಯಾಣ ಪಟ್ಟಣವು ಮಾನವಹಿತಸಾಧನೆಯ ಕಾರ್ಯಕ್ಷೇತ್ರವಾಗಿತ್ತು. ಬಸವಾದಿ ಶರಣರು ಮನುಕುಲೋದ್ಧಾರದ ಮಹಾಕಾರ್ಯದಲ್ಲಿ ತೊಡಗಿದ್ದರು. ಇದರ ಕೀರ್ತಿ ಎಲ್ಲ ಕಡೆ ಹಬ್ಬಿತು. ದೇಶದ ನಾನಾ ಕಡೆಯಿಂದ ಜನರು ಕಲ್ಯಾಣ ಪಟ್ಟಣಕ್ಕೆ ಬಂದು ಸೇರಿದರು. ಕಾಶ್ಮೀರದಿಂದ ಮಹದೇವ ಭೂಪಾಲ, ಅಫಘಾನಿಸ್ತಾನದಿಂದ ಮರುಳ ಶಂಕರದೇವ. ಸೌರಾಷ್ಟ್ರದಿಂದ ಆದಯ್ಯ, ಮಾಳವ ದೇಶದಿಂದ ಕಕ್ಕಯ್ಯ ಬಂದರು.

ಇಲ್ಲಿ ನಾವು ಗಮನಿಸಬೇಕಾದು ದೇನೆಂದರೆ- ಬಸವಣ್ಣನವರ ಕಾಲದಲ್ಲಿ ಭಾರತದಲ್ಲಿ ಅಲ್ಲಲ್ಲಿ ಅನೇಕ ಜನ ಮಹಾನ್ ಸಂತರು, ಯೋಗಿಗಳು ಇದ್ದರು. ಆದಾಗ್ಯೂ ನೆರೆಯ ಸಾಮ್ರಾಜ್ಯಗಳಿಂದ, ದೂರದ ಕಾಶ್ಮೀರ ಹಾಗೂ ಅಫಘಾನಿಸ್ತಾನದಿಂದ ಕಲ್ಯಾಣಕ್ಕೆ ಜ್ಞಾನಿಗಳ, ಪಂಡಿತರ, ಭಕ್ತರ ದಂಡೇ ಹರಿದು ಬಂದಿತು. ಸೂಕ್ಷ್ಮಜ್ಞರಾದವರು, ಬುದ್ಧಿವಂತರು ಬಸವಣ್ಣನವರ ನಿಜವಾದ ಕಳಕಳಿಗೆ, ಕಕ್ಕುಲಾತಿಗೆ ಕರುಳ ಸಂಬಂಧ ಜೋಡಿಸಿದರು. ಬಸವಣ್ಣನವರ ಸಾಮೀಪ್ಯ ಬಯಸಿ ಅವರ ಜೊತೆ ಜೊತೆಗೇ ನಿಂತರು. ಇಂಥ ಶರಣರ ಬಳಗ ವಿಸ್ತಾರಗೊಳ್ಳುತ್ತಾ ಅನುಭಾವಿಗಳ ಶರಣ ಸಮಾಜ ನಿರ್ಮಾಣವಾಯಿತು. ಕಾಯಕಜೀವಿಗಳ ಆ ಬಳಗದಲ್ಲಿ ಸಮಾಜವಾದವು ತನ್ನಿಂದ ತಾನೇ ರೂಪು ಪಡೆಯುತ್ತಿತ್ತು.

ಹೀಗೆ ಕಲ್ಯಾಣದಲ್ಲಿ ನಡೆದದ್ದು ಎಲ್ಲ ಬಗೆಯ ಸಮಾನತೆಯ ಹೋರಾಟ. ಸಮಾಜದ ಹೊರಸೆರಗಿನಲ್ಲಿದ್ದ ಅಂತ್ಯಜರೂ, ಅಸ್ಪೃಶ್ಯರೂ ಸೇರಿದಂತೆ ಎಲ್ಲ ಕೆಳಜಾತಿಗಳ, ದುಡಿವವರ, ದಮನಿತರ ಹತ್ತಿರ ಹೋದ ಬಸವಣ್ಣನವರು ಅವರ ನಾಡಿಮಿಡಿತಕ್ಕೆ ಸ್ಪಂದಿಸಿದರು. ಮನುಷ್ಯ ವಿರೋಧಿ ವ್ಯವಸ್ಥೆಯನ್ನು, ಮನುಷ್ಯತ್ವ ವಿರೋಧಿ ಮನಸ್ಥಿತಿಯನ್ನು ಧಿಕ್ಕರಿಸುವ ಮೂಲಕ ಸಾಮೂಹಿಕ ನಾಯಕತ್ವಕ್ಕೆ ಮುನ್ನುಡಿ ಬರೆದವರು ಬಸವಣ್ಣನವರು.

ಸಾಮೂಹಿಕ ನಾಯಕತ್ವದಲ್ಲಿ ನಾನು ಎಂಬ ಅಹಂ ಗೆ ಅವಕಾಶವಿರುವುದಿಲ್ಲ. ಮನಸ್ಸುಗಳ ಬೆಸುಗೆ ಸಾಮೂಹಿಕ ನಾಯಕತ್ವದಿಂದ ಮಾತ್ರ ಸಾಧ್ಯ.

ನಾನು ಎಂಬ ಭಾವನೆ ಕರಗಿದಾಗಲೇ 'ನಾವು' ಎಂಬುದಕ್ಕೆ ಜಾಗ ಸಿಗುತ್ತದೆ. ನಾನು ಎಂಬ ಭಾವವು ಹರಿಯದ ಹೊರತು ಅಂಗ-ಸಂಗ ಸಾಧ್ಯವಾಗುವುದಿಲ್ಲ. ಅಂದರೆ ನೀನು, ತಾನು ಎನ್ನುವ ಪ್ರತ್ಯೇಕತಾ ಭಾವವನ್ನು ಕಳೆದುಕೊಂಡಾಗ ಸಮಾಜದಲ್ಲಿ ಸಮನ್ವಯತೆಯನ್ನು ಸಾಧಿಸಲು ಸಾಧ್ಯ. ಇಂಥ ಭಾವನೆ ಜನರಲ್ಲಿಯೂ ಮೂಡಬೇಕು. ಜನನಾಯಕರಲ್ಲಿಯೂ ಇರಬೇಕು.

ಸಮಾಜಕ್ಕಿಂತ ವ್ಯಕ್ತಿ ಮುಖ್ಯವಾದಲ್ಲಿ ಅದು ಸ್ವಾರ್ಥಿಗಳನ್ನು ಹುಟ್ಟಿಸುತ್ತಾ ಹೋಗುತ್ತದೆ. ಅದೇ ರೀತಿ ವ್ಯಕ್ತಿಗಿಂತ ಸಮಾಜ ಮುಖ್ಯ ಎಂಬ ಧೋರಣೆಯಲ್ಲಿ ವ್ಯಕ್ತಿಗಳನ್ನು ಯಂತ್ರಗಳಂತೆ ದುಡಿಸಿಕೊಳ್ಳಲಾಗುತ್ತದೆ.

ಆದರೆ ಕಲ್ಯಾಣದಲ್ಲಿ ಸಮಾಜದ ಹಿತದಲ್ಲಿ ವ್ಯಕ್ತಿಯ ಹಿತವೂ; ವ್ಯಕ್ತಿಯ ಏಳ್ಗೆಯಲ್ಲಿ ಇಡೀ ಸಮಾಜದ ಉದ್ಧಾರವೂ ಅಡಕವಾಗಿತ್ತು. ಇದೊಂದು ಅಪರೂಪದ ನೇಯ್ಗೆ. ಏಕೆಂದರೆ ಬಸವಣ್ಣನವರ ಶರಣ ಸಮಾಜದಲ್ಲಿ ಯಾವೊಬ್ಬ ಶರಣರೂ ವ್ಯಕ್ತಿ ವಿಶಿಷ್ಟತೆಯನ್ನು ಕಳೆದುಕೊಂಡಿರಲಿಲ್ಲ. ಪ್ರತಿಯೊಬ್ಬರ ಮಾತಿಗೂ ಅಲ್ಲಿ ಜಾಗವಿತ್ತು. ಯಾರೂ ಯಾರ ಆಜ್ಞೆಗೂ, ಅವಜ್ಞೆಗೂ ಒಳಪಟ್ಟಿರಲಿಲ್ಲ.

ಇಂದಿನ ದಿನಮಾನಗಳಲ್ಲಿ ಕೆಲವು ಸಮಾನ ಮನಸ್ಕರು ಸೇರಿ ಒಂದು ಪುಟ್ಟ ಸಂಘಟನೆ ಕಟ್ಟುವುದು ಅಸಾಧ್ಯವೆನಿಸುವಂತಹ ಸನ್ನಿವೇಶ ಇದೆ. ಹೀಗಿರುವಾಗ ಬಸವಣ್ಣನವರ ಕಲ್ಯಾಣವನ್ನು ನೋಡಿದಾಗ ನಿಜಕ್ಕೂ ಅಚ್ಚರಿ ಎನಿಸುತ್ತದೆ. ಎಷ್ಟೊಂದು ಪ್ರತಿಭಾವಂತರು ಸ್ವಹಿತಾಸಕ್ತಿಯ ವಾಸನೆಯೂ ಇಲ್ಲದಂತೆ ಒಂದೆಡೆ ಸೇರಿ ಕಲ್ಯಾಣ ರಾಜ್ಯ ನಿರ್ಮಿಸಿದ್ದು ಹೇಗೆಂಬ ಪ್ರಶ್ನೆ ಏಳದೇ ಇರದು. ವಚನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಬಸವಣ್ಣನವರು ಇಡೀ ಸಮೂಹವನ್ನು ಒಂದು ಕುಟುಂಬದಂತೆ ಕಟ್ಟಿದ ಹಾಗೆ ಕಾಣುತ್ತದೆ. ಕಲ್ಯಾಣ ನಗರಿಯಲ್ಲಿ ಅಂಥದೊಂದು ಗಾಢ ಬಾಂಧವ್ಯ ಶರಣರ ನಡುವೆ ಸಾಧ್ಯವಾಗಿದ್ದಕ್ಕೆ ವಚನಗಳು ಸಾಕಷ್ಟು ದಾಖಲೆಗಳನ್ನು ಒದಗಿಸುತ್ತವೆ.


ಹಾಗಾಗಿ ನಾಯಕತ್ವದ ಸಾಂಪ್ರದಾಯಿಕ ಗ್ರಹಿಕೆಯನ್ನೇ ಬುಡಮೇಲು ಮಾಡಿದ್ದರು ಬಸವಣ್ಣನವರ ಮಾದರಿ ಇವತ್ತು ನಮಗೆ ಬೇಕಿದೆ.

**ಚಂದ್ರಶೇಖರ್ ಎನ್.ಪಿ.**

# ಬುದ್ಧ, ಗುರು ಬಸವಣ್ಣ, ಅಂಬೇಡ್ಕರ್ ಅವರ ಚಿಂತನೆಗಳ ಸಮನ್ವಯ ನೋಟ ಕುರಿತ ಉಪನ್ಯಾಸ

ಬುದ್ಧಗುರುವಿನ ಕರುಣಾ ಮೈತ್ರಿ, ಬಸವಣ್ಣನವರ ದಯೆಯೇ ಧರ್ಮದ ಮೂಲ ಹಾಗೂ ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ಆಶಯಗಳ ಪಾಲನೆ ಅಗತ್ಯ ಎಂದು ಕವಿ, ಚಿಂತಕ ಹಾಗೂ ಸಾಮಾಜಿಕ ಹೋರಾಟಗಾರ ಡಾ. ವಡ್ಡಗೆರೆ ನಾಗರಾಜಯ್ಯ ಅಭಿಪ್ರಾಯಪಟ್ಟರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು (ರಿ) ದೆಹಲಿ ಪ್ರದೇಶ ಘಟಕವು ಭಾರತ ರತ್ನ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಜಯಂತಿಯ ಪ್ರಯುಕ್ತವಾಗಿ ದಿನಾಂಕ 24.04.2021ರಂದು ಬುದ್ಧ ಗುರು ಬಸವಣ್ಣ, ಅಂಬೇಡ್ಕರ್ ಅವರ ಚಿಂತನೆಗಳ ಸಮನ್ವಯ ನೋಟ ಎನ್ನುವ ವಿಷಯವನ್ನು ಕುರಿತು ಅಂತರ್ ಜಾಲದ ಮುಖೇನ ಹಮ್ಮಿಕೊಂಡಿದ್ದ ಉಪನ್ಯಾಸ (ಮಾಲಿಕೆ-5) ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಚಾರ ಮಂಡನೆ ಮಾಡಿದ ಅವರು ಬಸವಣ್ಣನವರು ದಯೆಯೇ ಧರ್ಮದ ಮೂಲವಯ್ಯ ಎಂದು 12ನೇ ಶತಮಾನದಲ್ಲಿ ನೀಡಿದ ಸಂದೇಶದಂತೆಯೇ ಕ್ರಿ.ಪೂ. 6ನೇ ಶತಮಾನದಲ್ಲಿ ಕರುಣಾ ಮೈತ್ರಿ ಎಂಬ ನುಡಿಗಟ್ಟನ್ನು ಬಳಸಿದರು. ಮುಂದೆ ಕ್ರಿ.ಶ. 20ನೇ



ಶತಮಾನದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಶಿಕ್ಷಣದ ಮೂಲಕ ಸಮಾನತೆ ಸಾಧಿಸಿ ಸಂಘಟಿತರಾಗಿ ಸಮಾಜದಲ್ಲಿ ಸಾಮಾಜಿಕ ನ್ಯಾಯ ಒದಗಿಸಲು ಸಂವಿಧಾನ ಧರ್ಮ ಪಾಲನೆ ಮಾಡಬೇಕು ಎಂದು ಕರೆ ನೀಡಿದರು.

ಭಾರತದ ಪ್ರಜೆಗಳಿಗೆಲ್ಲಾ ಒಂದು ಧರ್ಮವಿದೆ. ಅದುವೇ ನಮ್ಮ ಭಾರತದ ಸಂವಿಧಾನ. ಅದೇ ನಮ್ಮ ಧರ್ಮ ಗ್ರಂಥ ಎಂದರು. ಭಾರತದ ಪ್ರಜೆಗಳೆಲ್ಲಾ ಸಮಾಜದಲ್ಲಿ ಸಂವಿಧಾನದ ಪ್ರಕಾರ ತಮ್ಮ ಜೀವನವನ್ನು ನಡೆಸಬೇಕು ಎನ್ನುವದು ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಆಶಯವಾಗಿತ್ತು ಎಂದು ಹೇಳಿದ್ದರು. ಬುದ್ಧ, ಬಸವ ಹಾಗು ಅಂಬೇಡ್ಕರ್ ಅವರು ಪುರೋಹಿತ ಶಾಹಿಯನ್ನು ಹೊಡಿದೊಡಿಸಲು ಹೋರಾಡಿದರು,

ಆದರೆ ಈಗ ಅದೇ ಪುರೋಹಿತಶಾಹಿ ಮತ್ತೆ ತಲೆ ಎತ್ತುತ್ತಿದೆ ಕೆಲವರು ಮಂತ್ರ ಉಪಾಯದಿಂದ ನಿಮ್ಮ ಸಮಸ್ಯೆಗಳನ್ನು ಹಾಗು ರೋಗ ರುಜಿನಗಳನ್ನು ಸರಿಪಡಿಸುತ್ತೇವೆ ಎನ್ನುತ್ತಿದ್ದಾರೆ, ಆದರೆ ಸಾಕ್ಷರರಾದ ನಾವು ಅಂತಹ ಮೂಢ ನಂಬಿಕೆಗಳಿಗೆ ಬಲಿಯಾಗಬಾರದು ಹಾಗು ನಂಬಲು ಬಾರದು.ಎಂದು ಡಾ.ವಡ್ಡಗೆರೆ ಅವರು ಹೇಳಿದರು. ಬಸವಣ್ಣನವರು 12ನೇ ಶತಮಾನದಲ್ಲಿ ಕೆಳವರ್ಗ ಹಾಗು ಮಹಿಳೆಯರ ಸಮಾನತೆಗಾಗಿ ಹೋರಾಡಿದರೆ, ಡಾ. ಬಿ.ಆರ್. ಅಂಬೇಡ್ಕರ್ ಅವರು ಭಾರತದ ಸ್ವಾತಂತ್ರ್ಯ ನಂತರ ಸಂವಿಧಾನದ ಮೂಲಕ ಕೆಳವರ್ಗದವರಿಗೆ ಹಾಗು ಮಹಿಳೆಯರಿಗೆ ಸಮಾನತೆ ಹಾಗು ಶಿಕ್ಷಣದ ಹಕ್ಕನ್ನು ತಂದು ಕೊಟ್ಟರು ಎಂದು ಹೇಳಿದರು. ಅದೇ ರೀತಿಯಾಗಿ ಬುದ್ಧಗುರು, ಬಸವಣ್ಣ, ಹಾಗು ಅಂಬೇಡ್ಕರ್ ಅವರುಗಳ ಚಿಂತನೆಗಳ ಹಲವಾರು ಸಮನ್ವತೆಗಳನ್ನು ಪ್ರಸ್ತಾಪಿಸಿ ಅನೇಕ ವಿಷಯಗಳ ಬಗ್ಗೆ ಮಾತನ್ನಾಡಿದ್ದರು.

ಕಾರ್ಯಕ್ರಮದ ಮುಖ್ಯ ಅತಿಥಿ ಬೆಂಗಳೂರಿನ ಪತಂಜಲಿ ಯೋಗ ಟ್ರಸ್ಟ್‌ನ ಸಂಸ್ಥಾಪಕ ಶ್ರೀ ಪ್ರಕಾಶ ಗುರೂಜಿ ಅವರು ಭಯಾನಕ ಮಹಾಮಾರಿ ಕೊರೊನದ ವಿರುದ್ಧ ಹೋರಾಡಲು ನಮ್ಮ ದೇಹದ ಬಲವನ್ನು ವೃದ್ಧಿಸಿಕೊಳ್ಳಲು ಯೋಗ ಮಾಡುವದರ ಮೂಲಕ ಹಾಗೂ ವೈರಾಣುವಿನ ವಿರುದ್ಧ ಹೋರಾಡಲು ದೇಹದಲ್ಲಿ ಪ್ರತಿಕಾಯಗಳನ್ನು ಸೃಷ್ಟಿಸಲು ನಮ್ಮ ಆಹಾರ ಸೇವನೆಯಲ್ಲಿ ಹಣ್ಣು ತರಕಾರಿಗಳನ್ನು ಹೆಚ್ಚಾಗಿ ಸೇವಿಸುವ ಮೂಲಕ ಹೆಚ್ಚಿಸಿಕೊಳ್ಳಬಹುದು ಎಂದು ಸಲಹೆ ಕೊಟ್ಟರು. ಹಾಗು ನಮ್ಮ ಆತ್ಮಸ್ಥೈರ್ಯವೇ ನಮ್ಮ ದೊಡ್ಡ ಶಕ್ತಿ, ಆತ್ಮವಿಶ್ವಾಸವಿದ್ದರೆ ನಾವು ಯಾವುದೇ ಮಾಹಾಮಾರಿಯನ್ನು ಸುಲಭವಾಗಿ ಗೆಲ್ಲಬಹುದು ಎಂದು ಕಿವಿ ಮಾತು ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ದೆಹಲಿ ಘಟಕದ ಅಧ್ಯಕ್ಷ ಚಂದ್ರಶೇಖರ ಎನ್.ಪಿ. ಅವರು ಪ್ರಾಸ್ತಾವಿಕ ಭಾಷಣ ಮಾಡಿ ಬುದ್ಧಗುರು, ಬಸವಣ್ಣ ನವರ ಪರಿಕಲ್ಪನೆಗಳನ್ನು ವಾಸ್ತವವಾಗಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಭಾರತದಲ್ಲಿ ಸಂವಿಧಾನದ ಮೂಲಕ ಜಾರಿಗೆ ತಂದರು ಎಂದರು.

ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಮಾಜಿ ರಾಜ್ಯಸಭಾ ಸದಸ್ಯ ಹಾಗು ಶಿಕ್ಷಣ ತಜ್ಞರೂ ಆದ ಶ್ರೀ ಬಸವರಾಜ ಪಾಟೀಲ್ ಸೇಡಂ ಅವರು ಭಾಗವಹಿಸಬೇಕಾಗಿತ್ತು. ತಾಂತ್ರಿಕ ದೋಷದಿಂದಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಆದರೂ ಮುಂದಿನ ಕಾರ್ಯಕ್ರಮದಲ್ಲಿ ಭಾಗವಹಿಸುವುದಾಗಿ ಭರವಸೆ ಕೊಟ್ಟರು.

ದೆಹಲಿ ಎನ್.ಸಿ.ಆರ್. ನ ಕನ್ನಡಿಗ ಚಿದಂಬರ ಕೋಟೆ ಅವರ ಮಧುರ ಕಂಠದ ವಚನ ಗಾಯನದ ಮೂಲಕ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಪುಟಾಣಿಗಳಾದ ಜನಿತಾ ಉಮೇಶ್, ವೃದ್ಧಿ ಸಾಹುಕಾರ್, ಅಭಿಷೇಕ್ ಶಿವಪ್ಪ, ಕಾವ್ಯಂಶ್ ಪಿ, ನೂತನ ಕೈಕಾಡೇ, ನಿಸರ್ಗ ಅವರು ಬಸವಾದಿ ಶರಣರ ವಚನಗಳನ್ನು ವಾಚನ ಮಾಡುವದರ ಮುಖಾಂತರ ಶರಣ ಸಾಹಿತ್ಯಕ್ಕೆ ಮತ್ತಷ್ಟು ಮೆರಗು ತಂದು ಕೊಟ್ಟರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅನೇಕ ಜನ ಗಣ್ಯರು ಪರಿಷತ್ತಿನ ಕೆಲಸಗಳನ್ನು ಕುರಿತು ಮೆಚ್ಚುಗೆ ವ್ಯಕ್ತಪಡಿಸಿ ಪ್ರೋತ್ಸಾಹಕ ನುಡಿಗಳನ್ನಾಡಿದರು.

ಘಟಕದ ಕಾರ್ಯದರ್ಶಿ ಕೆ.ಎಸ್. ಮೂರ್ತಿ ಅವರು ಕಾರ್ಯಕ್ರಮ ನಿರೂಪಿಸಿದರು. ಖಜಾಂಚಿ ಶಿವಪ್ಪ ಅವರು ಸ್ವಾಗತಿಸಿದರು ಹಾಗೂ ಯುವ ಘಟಕದ ಸಂಚಾಲಕ ಯಲ್ಲಾಲಿಂಗ ಕೊಪ್ಪದ ವಂದಿಸಿದರು.

ಪದಾಧಿಕಾರಿಗಳಾದ ರಾಘವೇಂದ್ರ ನಾಯಕ, ಶ್ರೀಮತಿ ಸುಜಾತ ನಿಂಬಾಳ್, ಪ್ರಭಾಕರ ಮಡ್ಡಿತೋಟ ಅವರುಗಳು ಅತಿಥಿಗಳ ಪರಿಚಯವನ್ನು ಯಶಸ್ವಿಯಾಗಿ ಮಾಡಿಕೊಟ್ಟರು.

**ರಾಜಕುಮಾರ ನೀಲೂರ**

## ಕಾವ್ಯಧಾರೆ

# ಅಲೌಕಿಕ

**ಅಲೌಕಿಕ ಆತನ ದಾರಿ
ಅವನನ್ನೇ ದೇವರೆನ್ನುತ್ತೇವೆ**

**ನಾವು ಬೇರೆ ಬೇರೆ ಹೆಸರಿಂದ
ಕರೆಯುತ್ತೇವೆ
ಮರಳಿ
ಆತ ಬೇರೆ ಬೇರೆ ಬಗೆಯಲ್ಲಿ
ಇರುವಿಕೆಯನ್ನು ಕಾಣಿಸುತ್ತಾನೆ**

**ನಂಬಿಕೆಗಳು ಬೇರೆ ಬೇರೆ
ಆದರೆ ಭಿನ್ನವಲ್ಲ
ಆತನ ಇರುವಿಕೆ**


**ಎಲ್ಲರೂ ಹೇಳುವರು ಆತನಿರುವ
ಆದರೆ ಎಲ್ಲಿ?
ನೀ ಕಂಡಿರುವೆಯಾ
ಹೇಗಿದ್ದಾನೆ?
ಹೇಳು, ಓ ವಿಶ್ವಾಸಿ
ಅವರಲ್ಲಿ ನೀನೂ ಒಬ್ಬನಲ್ಲವೇ?**

**ಇಂದು, ಅವನಿದ್ದಾನೆ
ಬಾ, ನೋಡು
ಅವನಲ್ಲವೇ ನೆಲೆಯಾದವನು**

**ವಿಶ್ವಾಸಿಯಲ್ಲದವನೂ
ಒಪ್ಪುವ–ಹೌದು
ಅದೇ ..
ಓ, ನನ್ನ ದೇವರೇ!**

**ಇಂಗ್ಲೀಷ್ ಮೂಲ : ಬಸವರಾಜ ಎಸ್. ಕಲ್ಲೂರ**
**ಅನುವಾದ : ಡಾ. ಅವನೀಂದ್ರನಾಥ್ ರಾವ್**

# ಆನ್‌ಲೈನ್ ಮ್ಯಾಜಿಕ್ ಕಲಿಕಾ ತರಬೇತಿ ಶಿಬಿರ




ಮಕ್ಕಳಲ್ಲಿ ಗ್ರಹಿಕಾ ಶಕ್ತಿ, ಚಿಂತನಾ ಶಕ್ತಿ ಹೀಗೆ ಬೌದ್ಧಿಕ ಗುಣಮಟ್ಟವನ್ನು ಮತ್ತಷ್ಟು ಬಲಪಡಿಸುವ ಜೊತೆಗೆ ಸೃಜನಶೀಲ ಚಟುವಟಿಗಳಿಂದ ಮಕ್ಕಳಲ್ಲಿ ಜೀವನೋತ್ಸಾಹವನ್ನು ಪ್ರೇರೇಪಿಸುವ ಸದುದ್ದೇಶದೊಂದಿಗೆ ರಾಷ್ಟ್ರ ರಾಜಧಾನಿ ನವದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯು ಸಂಸ್ಥೆಯ ವಿದ್ಯಾರ್ಥಿಗಳಿಗೆ ಅಂತರ್ಜಾಲದ ಮೂಲಕ ಆಯೋಜಿಸಿರುವ 'ಮ್ಯಾಜಿಕ್ ಕಲಿಕಾ ತರಬೇತಿ ಶಿಬಿರ'ವನ್ನು ದೆಹಲಿ ಸರಕಾರದ ಶಿಕ್ಷಣ ಇಲಾಖೆ ಹಾಗೂ ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಎಚ್. ರಾಜೇಶ್ ಪ್ರಸಾದ್ ಅವರು ದಿನಾಂಕ 16.05.2021 ರಂದು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು ಮಕ್ಕಳ ಕಲಿಕಾ ವಿಧಾನಕ್ಕೆ ಮ್ಯಾಜಿಕ್ ತಂತ್ರಗಳು ಪೂರಕವಾಗಿದೆ. ಮಕ್ಕಳಲ್ಲಿ ಆಸಕ್ತಿಯನ್ನು, ಏಕಾಗ್ರತೆಯನ್ನು ಮೂಡಿಸಲು ಇಂತಹ ಚಟುವಟಿಕೆಗಳನ್ನು ಆಯೋಜನೆ ಮಾಡುತ್ತಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯ ನಿಜಕ್ಕೂ ಮಾದರಿಯಾದುದು ಎಂದು ಹೇಳಿದರು.

ನಾಲ್ಕನೇ ತರಗತಿಯಿಂದ ಹನ್ನೆರಡನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಆಯೋಜಿಸಲ್ಪಟ್ಟ ಹದಿನಾಲ್ಕು ದಿವಸಗಳ ಈ ಮ್ಯಾಜಿಕ್ ಕಲಿಕಾ ತರಬೇತಿಯನ್ನು ಭಾರತೀಯ ಜಾದೂರಂಗದಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡ ಅಂತರರಾಷ್ಟ್ರೀಯ ಖ್ಯಾತಿಯ ಜಾದೂಗಾರ ಕುದ್ರೋಳಿ ಗಣೇಶ್ ಅವರು ನಡೆಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಅವರು ತರಬೇತಿಯ ಮೂಲೋದ್ದೇಶವನ್ನು ವಿವರಿಸುತ್ತಾ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯು ಸಂಸ್ಥೆಯ ಅಭಿವೃದ್ಧಿಯೊಂದಿಗೆ ವಿದ್ಯಾರ್ಥಿಗಳ ಮನೋವಿಕಾಸಕ್ಕೆ ಪೂರಕವಾದ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿದೆ. ಕೊರೊನಾ ಕಾಲದ ಸಂಕಷ್ಟದಲ್ಲಿಯೂ ಕೂಡ ಈ ನಿರಂತರತೆಯನ್ನು ಕಾಯ್ದುಕೊಂಡು ಬರುತ್ತಿದೆ. ಇದೀಗ ಆಡಳಿತ ಮಂಡಳಿಯ ಹಾಗೂ ದೆಹಲಿ ಕನ್ನಡಿಗರ ಸಹಕಾರದಿಂದ ಉಚಿತವಾಗಿ ಆಯೋಜಿಸಿದ ಈ ತರಬೇತಿಗೆ ಸುಮಾರು 400 ವಿದ್ಯಾರ್ಥಿಗಳು ಭಾಗವಹಿಸುತ್ತಿರುವುದು ಸಂತೋಷದ ವಿಚಾರ. ಮುಂದೆ ಈ ಮ್ಯಾಜಿಕ್ ಕಲಿಕೆಯನ್ನು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯು ಶೈಕ್ಷಣಿಕ ವ್ಯಾಪ್ತಿಗೆ ಒಳಪಡಿಸುವ ಪ್ರಯತ್ನಕ್ಕೆ ಮುಂದಾಗುವುದು ಎಂದು ಹೇಳಿದರು.

ಜಾದೂ ಕಲಿಕಾ ಶಿಬಿರದ ಸಂಪನ್ಮೂಲ ವ್ಯಕ್ತಿಯಾದ ಖ್ಯಾತ ಜಾದೂಗಾರ ಕುದ್ರೋಳಿ ಗಣೇಶ್ ಇವರು ಮಾತನಾಡಿ ಜಾದೂ ಒಂದು ವೈಜ್ಞಾನಿಕ ಕಲೆಯಾಗಿದ್ದು ಜಾದೂ ಕಲೆಯಲ್ಲಿ ಅಡಕವಾಗಿರುವ ವಿಜಾನ ಮತ್ತು ಕೈಚಳಕದ ತಂತ್ರಗಾರಿಕೆಗಳು ಮಕ್ಕಳ ಮನಸ್ಸನ್ನು ಚುರುಕುಗೊಳಿಸಿ ಅವರಲ್ಲಿರುವ ಬುದ್ಧಿಮತ್ತೆಯನ್ನು ಅರಳಿಸುತ್ತದೆ. ಜಾದೂ ಕಲಿತ ಮಕ್ಕಳು ವೇದಿಕೆಯನ್ನೇರಿ ಜನರನ್ನು ಎದುರಿಸುವ ಆತ್ಮವಿಶ್ವಾಸ, ಪರಿಣಾಮಕಾರಿಯಾಗಿ ಮಾತನಾಡುವ ಕಲೆ ಮುಂತಾದ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾರೆ ಎಂದು ಅಭಿಪ್ರಾಯಪಟ್ಟರು. ಜಾದೂ ಕಲಿಕಾ ಶಿಬಿರದಲ್ಲಿ ವಿಜ್ಞಾನ ಮತ್ತು ಗಣಿತ ಆಧಾರಿತ ಹಲವು ತಂತ್ರಗಳನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡಲಾಗುವುದು ಎಂದು ತಿಳಿಸಿದರು.

ಈ ಆನ್‌ಲೈನ್ ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರು, ದೆಹಲಿ ಕನ್ನಡ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ದೆಹಲಿ ಕನ್ನಡಿಗರು ಪಾಲ್ಗೊಂಡಿದ್ದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಎಂ.ಎಸ್. ಶಶಿಕುಮಾರ್ ಸ್ವಾಗತಿಸಿದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಪ್ರಶಾಂತ್ ಕುಮಾರ್ ವಂದಿಸಿದರು. ಶಿಕ್ಷಕಿ ಕುಮಾರಿ ಬಿದಿಶಾ ಕಾರ್ಯಕ್ರಮ ನಿರ್ವಹಿಸಿದರು.

ಬಳಿಕ ಪ್ರಸಿದ್ಧ ಜಾದೂಗಾರ ಕುದ್ರೋಳಿ ಗಣೇಶ್ ಇವರು 'ವರ್ಚುವಲ್ ಮ್ಯಾಜಿಕ್' ಆನ್‌ಲೈನ್ ಜಾದೂ ಮೂಲಕ ಜನರನ್ನು ಬೆರಗುಗೊಳಿಸಿದರು.

**ಅರವಿಂದ ಬಿಜೈ**

# ಫ.ಗು. ಹಳಕಟ್ಟಿ ಜೀವನ ದರ್ಶನ ಕುರಿತ ಸಂವಾದ

19ನೇ ಶತಮಾನದ ಉತ್ತರಾರ್ಧ ಹಾಗೂ 20ನೇ ಶತಮಾನದ ಪೂರ್ವಾರ್ಧ ಇವೆರಡನ್ನು ದೀರ್ಘವಾಗಿ ಆಲೋಚನೆ ಮಾಡಲಾಗಿದ್ದು, ಈ ಕಾಲಘಟ್ಟದಲ್ಲಿ ನಾಡನ್ನು ಬೆಳಗಿ ಬೆಳಕಾಗಿಸುವ ಅಂದಿನ ಬಿಜಾಪೂರ ಇಂದಿನ ವಿಜಯಪುರ ಜಿಲ್ಲೆಯನ್ನು ಒಂದು ಚಾರಿತ್ರಿಕ ದಾಖಲೆಗೆ ಒಳಪಡಿಸುವಂತಹ ಮೂವರು ಮಹಾತ್ಮರು ಜನಿಸಿದ್ದು ಇದೇ ಅವಧಿಯಲ್ಲಿಯೇ. 1880ರಲ್ಲಿ ವಚನಪಿತಾಮಹ ಡಾ. ಫ.ಗು. ಹಳಕಟ್ಟಿಯವರು, 1886ರಲ್ಲಿ 'ಕರ್ನಾಟಕದ ಗಾಂಧಿ' ಎಂದೇ ಕರಯಲ್ಪಡುವ ಹರ್ಡೇಕರ ಮಂಜಪ್ಪನವರು ಜನಿಸಿದ್ದು, ತಮ್ಮ ಇಡೀ ಜೀವನವನ್ನೆ ಶಿಕ್ಷಣದ ಅಭ್ಯುದಯಕ್ಕಾಗಿ ಮೀಸಲಾಗಿಟ್ಟು ಮಠ–ಮಾನ್ಯಗಳಮೂಲಕ ಶಿಕ್ಷಣ ಕ್ಷೇತ್ರವನ್ನು ಹುಟ್ಟುಹಾಕಿ, ಹೆಮ್ಮರವಾಗಿ ಬೆಳೆಸಿದಂತಹ ಮಹಾನ್ ಚೇತನ ಬಿಜಾಪೂರದ ನೆಲವನ್ನು ಬೆಳಗಿದ ಬೆಳಕು ಪೂಜ್ಯ ಬಂಥನಾಳದ ಸಂಗನ ಬಸವ ಮಹಾಸ್ವಾಮಿಗಳು. ಈ ಮಹನೀಯರು ನಮಗೆ ಪ್ರಾತಃಸ್ಮರಣೀಯರಾಗಿದ್ದಾರೆ ಎಂದು ವಿಜಯಪುರದ ಬಿ.ಎಲ್.ಡಿ.ಇ. ಸಂಸ್ಥೆಯ ವಚನ ಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರದ ಕಾರ್ಯದರ್ಶಿ ಡಾ. ಎಂ.ಎಸ್. ಮದಬಾವಿ ಅವರು ಹೇಳಿದರು. ನವದೆಹಲಿಯ 'ದಿನಕರ' ಫೌಂಡೇಶನ್ ಅವರು ಝೂಮ್ ಮೀಟಿಂಗ್ ಆನ್ ಲೈನ್ ಮೂಲಕ ಆಯೋಜಿಸಿದ್ದ 'ಫ.ಗು. ಹಳಕಟ್ಟಿ ಜೀವನ ದರ್ಶನ, ವಚನಾನುಭವ ಹಾಗೂ ಅವರ ಸಾಮಾಜಿಕ ಕೊಡುಗೆ' ವಿಷಯದ ಕುರಿತು ದಿನಾಂಕ 31.01.2021 ಹಾಗೂ 07.02.2021 ರಂದು ಎರಡು ಆವೃತ್ತಿಯ ಸಂವಾದದಲ್ಲಿ ಭಾಗವಹಿಸಿ, ಸಮಗ್ರ ವಿದ್ವತ್ಪೂರ್ಣ ವಿಷಯ ಮಂಡಿಸಿದರು

ಕ್ರಿ.ಶ. 1880 ರಿಂದ 1900 ರವರೆಗಿನ 20 ವರ್ಷದ ಈ ಕಾಲಘಟ್ಟದಲ್ಲಿ ಮಹನೀಯರಾದ ಡಾ. ಫ.ಗು. ಹಳಕಟ್ಟಿ, ಹರ್ಡೇಕರ ಮಂಜಪ್ಪನವರು ಹಾಗೂ ಬಂಥನಾಳ ಶಿವಯೋಗಿಗಳು ತಮ್ಮದೇಯಾದ ಸಿದ್ಧಾಂತ ಹೊಂದಿದವರು. ಫ. ಗು. ಹಳಕಟ್ಟಿಯವರು ವಿಜಯಪುರದಲ್ಲಿ 60 ವರ್ಷಗಳಗೂ ಹೆಚ್ಚು ನಿರಂತರವಾಗಿ ಈ ಕರ್ಮಭೂಮಿಯಲ್ಲಿ ಅವರು ವಚನ ಶಾಸ್ತ್ರ



ಡಾ. ಉಷಾದೇವಿ ಹಿರೇಮಠ

ಬೀಜ ಬಿತ್ತಿದಂತಹ ಅಪ್ಪಟ ಶ್ರೇಷ್ಠ ವಚನಕಾರರು. 1886ರಲ್ಲಿ ಬನವಾಸಿಯಲ್ಲಿ ಜನಿಸಿದ ಹರ್ಡೇಕರ ಮಂಜಪ್ಪನವರು ಬಿಜಾಪೂರವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಅವರು ಈ ನೆಲದಲ್ಲಿ ರಾಷ್ಟ್ರಪ್ರೇಮದ ಬೀಜ ಬಿತ್ತಿದರು. ಮೂರನೇಯವರು ಇದೇ ನೆಲದಲ್ಲಿ ಜನ್ಮ ತಾಳಿ, ಕಾಯಕಲ್ಪವಾಗಿ ಅವರು ಶಿಕ್ಷಣ ಕ್ಷೇತ್ರದ ಅಭ್ಯುದಯಮಾಡಿದಂತಹ ಬಂಥನಾಳದ ಶಿವಯೋಗಿಗಳು.

ಇದೇ ಸಂದರ್ಭ ಡಾ.ಉಷಾದೇವಿ ಹಿರೇಮಠ ಅವರು ಒಂದು ವಚನದ ಸಾರ ತಿಳಿಸಿದರು.'ಲೋಕದಂತೆ ಬಾರರು, ಲೋಕದಂತೆ ಇರರು, ಲೋಕದಂತೆ ಹೋಗರು ನೋಡಯ್ಯ ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು, ಮುಕ್ತಿಯಂತೆ ಹೋಹರು ನೋಡಯ್ಯ ಉರಿ ಲಿಂಗದೇವ ನಿಮ್ಮ ಶರಣರು ಉಪಮಾತೀತರಾಗಿ ಉಪಮಿಸಬಾರದು' ಈ ವಚನವನ್ನು ಸಾಕ್ಷಿ ಹಿರೇಮಠ ಅವರು ಸುಮಧುರ ಕಂಠದಿಂದ ಹಾಡಿದರು.

ಡಾ. ಫ.ಗು. ಹಳಕಟ್ಟಿಯವರು 1880ರ ಜುಲೈ 2 ರಂದು ಧಾರವಾಡದಲ್ಲಿ ಜನಿಸಿದರು. ತಂದೆ ಗುರುಬಸಪ್ಪ ತಾಯಿ ದಾನಮ್ಮ, 'ಫಕೀರಪ್ಪ' ಎಂದು ನಾಮಕರಣ ಮಾಡಿದರು. ಕಾಕತಾಳಿಯವೇನೋ ತಮ್ಮ ಹೆಸರಿನಂತೆ ಇಡೀ ಬದುಕನ್ನು ಹಳಕಟ್ಟಿಯವರು ಫಕೀರರಾಗಿಯೇ ಬದುಕಿದರು. ಅಂಕಿತವಾಗಿದ್ದಂತಹ ಹೆಸರು ಅನ್ವರ್ಥಕವಾಗಿ ಪರಿಣಮಿಸಿದ್ದು ಹಳಕಟ್ಟಿ ಅವರ ಬದುಕಿನಲ್ಲಿ ಒಂದು ವಿಪರ್ಯಾಸ ಎಂದರು. ಇವರು ಜನಿಸಿದ ಮೂರು ವರ್ಷಕ್ಕೆ ಇವರ ಪ್ರೀತಿಯ ತಾಯಿ ಮಗನನ್ನು ತಬ್ಬಲಿ ಮಾಡಿ ಅಗಲಿದರು. ಅನಾಥ ಪ್ರಜ್ಞೆ ಕಾಡುತ್ತಿತ್ತು. ತಂದೆ ಗುರುಬಸಪ್ಪನವರು ತಾಯಿಯ ಸ್ಥಾನದಲ್ಲಿ ನಿಂತು, ಶರಣರ ಅನುಭಾವದ ನುಡಿ ಬೋಧನೆ ಮಾಡಿ, ಇವರ ಜೀವನ ಸುಸಂಸ್ಕೃತ ಮಾರ್ಗದಲ್ಲಿ ಸಾಗಲು ಪ್ರೇರಣೆ ನೀಡಿದರು. ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರೂ ಪ್ರವೃತ್ತಿಯಲ್ಲಿ ಸಾಹಿತಿಯಾಗಿದ್ದರು. ತಂದೆ ಗುರುಬಸಪ್ಪನವರು ಅನುಭಾವ ಹಾಗೂ ಆಧ್ಯಾತ್ಮದಡಿಯಲ್ಲಿ ಸಂಸ್ಕಾರ ನೀಡಿದರು. ಹಳಕಟ್ಟಿಯವರು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಧಾರವಾಡದಲ್ಲಿ ಪೂರೈಸಿದರು. ನಾಡು–ನುಡಿಯ ಕುರಿತು ಬಾಲಕರಿದ್ದಾಗಲೇ ಅಭಿಮಾನ ಪ್ರೀತಿ ಅವರ ಮನಸ್ಸಿನಲ್ಲಿ ಜಾಗೃತವಾಗಿತ್ತು. 1896ರಲ್ಲಿ ಮೆಟ್ರಿಕ್ ಪರೀಕ್ಷೆ ಮುಗಿಸಿಕೊಂಡರು. ಮುಂಬೈನ 'ಸೇಂಟ್ ಝೇವಿಯರ' ಕಾಲೇಜಿಗೆ ಉನ್ನತ ಶಿಕ್ಷಣ–ಕ್ಕಾಗಿ ಪ್ರವೇಶವಾಯಿತು. ಇವರು ಧಾರವಾಡಕ್ಕೆ ಮರಳಿದರು. ಧಾರವಾಡದಲ್ಲಿ ವಕೀಲ ವೃತ್ತಿ ಕೈಗೊಂಡರು. ಹಳಕಟ್ಟಿ ಅವರು ಮೊದಲು ತಮ್ಮ ವಕಾಲತ್ತನ್ನು ಬೆಳಗಾವಿಯಲ್ಲಿ ಆರಂಭಿಸಿದರು. ಮಾವ ತಮ್ಮಣ್ಣಪ್ಪ ಚಿಕ್ಕೋಡಿ ಅವರ ಸಲಹೆಯ ಮೇರೆಗೆ ಫ.ಗು. ಹಳಕಟ್ಟಿಯವರು 1904ರಲ್ಲಿ ವಿಜಯಪುರಕ್ಕೆ ಆಗಮಿಸಿದರು. ವಿಜಯಪುರವನ್ನು ಕಾಯಕ ಭೂಮಿಯನ್ನಾಗಿಸಿಕೊಂಡರು. ಜಮಖಂಡಿಯ 'ಗೋಠೆ' ಗ್ರಾಮದಲ್ಲಿ ಪ್ರಭುದೇವರ ಹಸ್ತಪ್ರತಿಗಳು ದೊರೆತವು. ಆಗಿನಿಂದಲೇ ಅವರು ಪ್ರಭಾವಿತರಾದರು. ವಕೀಲ ವೃತ್ತಿಯೊಂದಿಗೆ



ಡಾ. ಎಂ.ಎಸ್. ಮದಬಾವಿ

ನಾಡಿನ ತುಂಬಾ ಸಂಚರಿಸಿದರು.ಮನೆ ಮನೆಯಲ್ಲಿನ ಜಗುಲಿಯ ಮೇಲೆ ಕೆಂಪು ವಸ್ತ್ರದಲ್ಲಿ ಕಟ್ಟಿದ ವಚನಗಳನ್ನು ಅವರು ಪಡೆಯುತ್ತಿದ್ದರು. ಅಪಾರ ಶ್ರಮವಹಿಸಿ ಸಂಗ್ರಹಿಸಿದ ಶರಣರ ಅಪಾರ ಸಂಪತ್ತು ಅವರ ಕೈಗೆ ದೊರಕಿತು. ಅದರಿಂದ ಪ್ರಭಾವಿತರಾದರು ಎಂದು ಮದಬಾವಿ ಅವರು ಹೇಳಿದರು.

ಹಳಕಟ್ಟಿಯವರಿಗೆ ಒಂದಿಲ್ಲೊಂದು ಸಮಸ್ಯೆಗಳು ತಲೆದೋರುತ್ತಿದ್ದವು. ಕಾಯಿಲೆ, ಬಡತನ, ಒಂದು ಕಡೆ ಬರಗಾಲದ ಬವಣೆ, ಇನ್ನೊಂದು ಕಡೆಗೆ ಬಡತನ, ಮಗದೊಂದು ಕಡೆಗೆ ಕಾಡುವ ರೋಗ–ರುಜಿನ, ಇವರು ಅರವತ್ತು ವರುಷಗಳವರೆಗೆ ಬಿಜಾಪೂರದಲ್ಲಿ ನೆಲೆನಿಂತರು. ಅವರು ಕಟ್ಟಿದ ಹಲವಾರು ಸಂಸ್ಥೆಗಳು, ಬ್ಯಾಂಕ್‌ಗಳು, ನೆರವೇರಿಸಿದ ಯೋಜನೆಗಳು ಶತಮಾನೋತ್ಸವವನ್ನು ಆಚರಿಸಿಕೊಂಡಿವೆ ಎಂದರು. ಹಳಕಟ್ಟಿಯವರು ವಕೀಲ ವೃತ್ತಿಯೊಂದಿಗೆ ಶರಣ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿದರು ಎಂದವರು ಹೇಳಿದರು.

ಭೌತಿಕ ಜೀವನದ ಸುಖ ಅವರಿಗೆ ಬೇಕಾಗಿರಲಿಲ್ಲ. ಸಮಾಜಮುಖಿ ಕಾರ್ಯಗಳಿಗೆ ಒತ್ತು ನೀಡಿದರು. ಶಿಕ್ಷಣಕ್ಕೆ ಒತ್ತು ಕೊಟ್ಟು ಶಾಲೆಗಳನ್ನು ಪ್ರಾರಂಭಿಸುತ್ತಾರೆ. 1910ರಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯನ್ನು ಸ್ಥಾಪಿಸುತ್ತಾರೆ. 110 ವರ್ಷಗಳ ಇತಿಹಾಸ ಈ ಸಂಸ್ಥೆಗಿದೆ ಎಂದರು. ಓರ್ವ ವ್ಯಕ್ತಿ ಕ್ರಿಯಾಶೀಲ, ಇಚ್ಛಾಶಕ್ತಿಯುಳ್ಳವರಾಗಿದ್ದರೆ ಎಂತಹ ಕಾರ್ಯವನ್ನು ಸಾಧಿಸಬಹುದು ಎಂದು ಡಾ. ಎಂ.ಎಸ್. ಮದಬಾವಿ ಹೇಳಿದರು.

ಅವರು ಯಾವುದೇ ಊರಿಗೆ ಹೋದರು ಒಂದು ಟ್ರಂಕ್ ತೆಗೆದುಕೊಂಡು ಹೋಗುತ್ತಿದ್ದರು. ಅದರಲ್ಲಿ ವಚನದ ಕಟ್ಟುಗಳನ್ನು ತರುತ್ತಿದ್ದರು. ಪರಿಷ್ಕರಿಸುತ್ತಿದ್ದರು. ವಚನ ಸಾಹಿತ್ಯವನ್ನು ಸಂಗ್ರಹಿಸುತ್ತಿದ್ದರು. ವಚನ ಸಾಹಿತ್ಯ ಪ್ರಕಟಿಸುವುದಕ್ಕಾಗಿ ಪ್ರಿಂಟಿಂಗ್ ಪ್ರೆಸ್ ಬೇಕಿತ್ತು, ಹಣಕಾಸಿನ ತೊಂದರೆ, ಮಂಗಳೂರಿನ ಬಾಸಲ್ ಮಿಶನ್ ಸಂಸ್ಥೆಗೆ ಪ್ರಕಟಣೆಗೆ ಕಳುಹಿಸಿದರು. ಮುಂಗಡ ಕೂಡ ಪಾವತಿಸಿದ್ದರು.ಆ ಸಂಸ್ಥೆ

ಮುಂಗಡ ಹಣ ಸಹಿತ ಹಸ್ತಪ್ರತಿ ಹಳಕಟ್ಟಿಯವರಿಗೆ ಮರಳಿಸಿದರು. ಹಳಕಟ್ಟಿಯವರು ವಚನ ಸಂಗ್ರಹ ಪ್ರಕಟಿಸುವುದಕ್ಕೆ ಮನೆಯನ್ನೇ ಮಾರಾಟ ಮಾಡಿದರು. 1926ರಲ್ಲಿ 'ಶಿವಾನುಭವ' ಪತ್ರಿಕೆ ಪ್ರಾರಂಭ ಮಾಡಿದರು. ಶಿವಾನುಭವ ಗ್ರಂಥ ಮಾಲೆಯನ್ನು 1926ರಲ್ಲಿ ಹುಟ್ಟು ಹಾಕಿ ಪ್ರಿಂಟಿಂಗ್ ಪ್ರೆಸ್ ಖರೀದಿಸಿದರು. ಆ ಕಾಲಕ್ಕೆ ಆರಂಭವಾದ ಪತ್ರಿಕೆ 35ವರ್ಷಕ್ಕೂ ಹೆಚ್ಚು ಅವಧಿಗೆ ಪ್ರಕಟವಾಯಿತು. 1912ರಲ್ಲಿ ಬ್ಯಾಂಕ್ ಸ್ಥಾಪನೆ ಮಾಡುತ್ತಾರೆ. ಸೈಕಲ್ ತುಳಿದುಕೊಂಡೆ ಮನೆ-ಮನೆಗೆ ತೆರಳಿ ಒಂದು ರೂಪಾಯಿ ಷೇರು ಬಂಡವಾಳ ಸಂಗ್ರಹಿಸುತ್ತಿದ್ದರು. ಹಳಕಟ್ಟಿಯವರ ಮನಸ್ಸು ಸ್ಥಿತ ಪ್ರಜ್ಞಾವಸ್ಥೆಯಿಂದ ಕೂಡಿತ್ತು ಎಂದರು. 1928ರಲ್ಲಿ ಸ್ಥಾಪಿಸಿದ ನವ ಕರ್ನಾಟಕ ಪತ್ರಿಕೆಯ ಮೂಲಕ ಕನ್ನಡಿಗರಲ್ಲಿ ಕನ್ನಡದ ಅಭಿಮಾನ ಜಾಗೃತಗೊಳಿಸಲು ಮಾಡಿದ ಹೋರಾಟ, ಭೂತನಾಳ ಕೆರೆ ಯೋಜನೆ ಭಾರತ ರತ್ನ ಸರ್.ಎಂ. ವಿಶ್ವೇಶ್ವರಯ್ಯ ಅವರು ಮೆಚ್ಚಿಕೊಂಡರು. ಹಳಕಟ್ಟಿಯವರು ಬಸವಣ್ಣನವರ ಅನೇಕ ವಚನಗಳನ್ನು ಆಂಗ್ಲ ಭಾಷೆಗೆ ತರ್ಜುಮೆಗೊಳಿಸಿದರು. ಮರಾಠಿ, ಸಂಸ್ಕೃತ, ಇಂಗ್ಲೀಷ ಭಾಷೆ ಬಲ್ಲವರಾಗಿದ್ದ ಇವರು ಬಹು ದೊಡ್ಡ ಸಂಶೋಧಕರಾಗಿದ್ದರು. ಶಿಲಾ ಶಾಸನವನ್ನು ಓದಿದವರು.

ವಚನಗುಮ್ಮಟ, ವಚನ ಪಿತಾಮಹ, ಆಧುನಿಕ ಶರಣ, ಬ್ರಿಟೀಷರ ಕಾಲಕ್ಕೆ ಎರಡು ಪ್ರಶಸ್ತಿಗಳು 'ರಾವ್ ಸಾಹೇಬ್' ಮತ್ತೊಂದು 'ರಾವ್ ಬಹಾದ್ದೂರ' ಪುರಸ್ಕಾರ ಪಡೆದಿದ್ದರು. 20ನೇ ಶತಮಾನದ ಈ ಶರಣ 84 ವರ್ಷಗಳ ಸಾರ್ಥಕ ತುಂಬು ಜೀವನ ನಡೆಸಿದರು ಎಂದು ಮದಬಾವಿ ಅವರು ಹೇಳಿದರು.

ಈ ಸಂವಾದದಲ್ಲಿ ಡಾ. ಮದಬಾವಿ ಅವರು ಮೊದಲ ಭಾಗ ಎರಡುವರೆ ಗಂಟೆ, ಎರಡನೇ ಭಾಗ ಎರಡು ಗಂಟೆಗಳ ಕಾಲ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿಯವರ ಕುರಿತು ಉಪನ್ಯಾಸ ನೀಡಿದರು.

ನವದೆಹಲಿಯ 'ದಿನಕರ' ಫೌಂಡೇಶನ್ ಹಾಗೂ ಪದಾಧಿಕಾರಿಗಳಿಗೂ ಅಭಿನಂದನೆ ತಿಳಿಸಿದರು. ಹಳಕಟ್ಟಿ ಅವರ ಬದುಕಿನಲ್ಲಿ ಅನುಭವಿಸಿದ ಕಷ್ಟ-ಸುಖ, ನೋವು-ನಲಿವು, ದುಃಖ-ದುಮ್ಮಾನ ಇವುಗಳನ್ನು ಸಂದರ್ಭಕ್ಕನುಸಾರವಾಗಿ, ಸಂವಾದಿಯಾಗಿ 12ನೇ ಶತಮಾನದ ವಚನಕಾರರ ಹಾಗೂ ಸಾಹಿತಿಗಳ ಒಂದೊಂದು ವಚನಗಳನ್ನು ಸಂಗೀತಕ್ಕೆ ಅಳವಡಿಸಿಕೊಂಡಿದ್ದು ಬಹಳ ವಿಶೇಷವಾಗಿತ್ತು. ಭಾಗವಹಿಸಿದ ಎಲ್ಲ ಸಹೃದಯ ಬಂಧುಗಳಿಗೆ ವಂದನೆಗಳನ್ನು ಡಾ. ಎಂ.ಎಸ್. ಮದಬಾವಿ ಅವರು ಹೇಳಿದರು.

ಸಂವಾದದಲ್ಲಿ ವಿಜಯಪುರದ ಎಸ್.ಬಿ. ಕಲಾ ಮತ್ತು ಕೆಸಿಪಿ ವಿಜ್ಞಾನ ಕಾಲೇಜಿನ ಕನ್ನಡ ವಿಭಾಗದ ಪ್ರಾಧ್ಯಾಪಕರೂ ಆದ ಡಾ. ಉಷಾದೇವಿ ಹಿರೇಮಠ ಅವರು ಸಾಂದರ್ಭಿಕವಾಗಿ ವಚನಗಳನ್ನು ಆಯ್ಕೆ ಮಾಡಿಕೊಂಡು ವಚನದ ಸಾರ ತಿಳಿಸಿಕೊಟ್ಟರು. ನವದೆಹಲಿಯ ಡಾ. ಬಸವರಾಜ ಹಿರೇಮಠ ಕಾರ್ಯಕ್ರಮ ನಿರ್ವಹಿಸಿದರು. ಬಸವನ ಬಾಗೇವಾಡಿಯ ಶ್ರೀಮಂತ ಅವಟಿ, ಉಜ್ಜಯಿನಿಯ ಕುಮಾರಿ ಸೌಮ್ಯ ಜೆ.ಎಚ್.ಎಂ., ವಿಜಯಪುರದ ಕುಮಾರಿ ಸಾಕ್ಷಿ ಹಿರೇಮಠ ಅವರು ತಮ್ಮ ಸುಮಧುರ ಕಂಠದಿಂದ ವಚನ ಗಾಯನ ಪ್ರಸ್ತುತಪಡಿಸಿದರು. ಉಜ್ಜಯಿನಿಯ ವಾಗೀಶ್ ಎಚ್.ಎಂ. ಅವರು ವಾದ್ಯ ಸಹಕಾರ ನೀಡಿದರು.

ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಎಲ್ಲರನ್ನೂ ಸ್ವಾಗತಿಸಿದರು. ತಂತ್ರಜ್ಞಾನದ ಮುಖೇನ ಎಲ್ಲರನ್ನೂ ಒಟ್ಟುಗೂಡಿಸಿದವರು ಟಿ.ಎಸ್. ರಮೇಶ್. ಸಂತೋಷ ಕುಮಾರ ಉಪಾಧ್ಯಾಯ ಅವರು 'ಶರಣರ ಬರುವೆಮೆಗೆ ಜೀವಾಳವಯ್ಯ' ಎಂದು ವಚನ ಸಾಹಿತ್ಯ, ಸಂಗೀತ ಕ್ಷೇತ್ರ ಮುಂತಾದ ವಿಷಯವಾಗಿ ತಮ್ಮ ಅನಿಸಿಕೆ ವ್ಯಕ್ತಪಡಿಸಿ, ವಂದಿಸಿದರು.

**ಅಮರೇಶ**

# ರಂಗಕರ್ಮಿ ಬಸವರಾಜ್ ಎಸ್. ಮಠ ಅವರೊಂದಿಗೆ ಸಂವಾದ

ಮನಸ್ಸಿನಲ್ಲಿ ಹುದುಗಿರುವ ಪ್ರತಿಭೆಯ ತುಡಿತ ಹಾಗೂ ಅದನ್ನ ನೀಗಿಸಲು ರಂಗ ಸಾಹಿತ್ಯದ ಸೇವೆಯನ್ನು ಅಪ್ಪಿಕೊಂಡೆ ಎಂದು 'ಜಲಜಮಿತ್ರ' ಎಂಬ ಕಾವ್ಯನಾಮದಿಂದ ಕರೆಯಲ್ಪಡುವ ನಟ, ನಾಟಕಕಾರ, ರಂಗಕರ್ಮಿ ಬಸವರಾಜ್ ಎಸ್. ಮಠ ಅವರು ದೆಹಲಿಯ 'ದಿನಕರ'ದ ಆನ್ ಲೈನ್ ಮೂಲಕ ದಿನಾಂಕ 16.05.2021 ರಂದು ನಡೆದ ಸಂವಾದದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ, ತಮ್ಮ ರಂಗಭೂಮಿಯ ಜೀವನ ಸಾಧನೆಯ ಕುರಿತ ನುಡಿ ಹಂಚಿಕೊಂಡರು.

ರಂಗಭೂಮಿ ಪ್ರವೇಶಕ್ಕೆ ಮನೆಯಲ್ಲಿ ಕುಟುಂಬದ ಸಹಾಯ ಸಹಕಾರವಿತ್ತು. ಬಾಲ್ಯವನ್ನು ಹಳ್ಳಿಯಲ್ಲಿಯೇ ಕಳೆದ ಹಿನ್ನೆಲೆ ಅಲ್ಲಿಯ ಸೊಗಡು ಹಾಗೂ ಹಳ್ಳಿಯ ಸೊಬಗು, ಅಲ್ಲಿನ ಕಷ್ಟ ಕಾರ್ಪಣ್ಯ, ನೋವು-ನಲಿವು, ಕಷ್ಟ-ಸುಖ, ದುಃಖ-ದುಮ್ಮಾನ, ಆಚಾರ-ವಿಚಾರ ಇತ್ಯಾದಿ, ಹಳ್ಳಿಗರ ಜೀವನ ವಿಧಾನ ನನ್ನಲ್ಲಿ ಬೇರೂರಿತು. ಚಿಕ್ಕವನಿದ್ದಾಗಲೇ ನನ್ನಲ್ಲಿ ಓರ್ವ ಬರಹಗಾರ ಬರಹ ರೂಪದಲ್ಲಿ ಹೊರಬರಲು ಹಳ್ಳಿಯ ಜೀವನದ ಸೊಗಡು ಒಂದು ರೀತಿಯಿಂದ ಭದ್ರ ಬುನಾದಿಯಾಯಿತು. ಹಳ್ಳಿಗಳಲ್ಲಿ ವೇಷಗಾರರು ಸಾಮಾಜಿಕ, ಪೌರಾಣಿಕ, ಐತಿಹಾಸಿಕ ವಿಷಯಗಳ ಕುರಿತ ಪಾತ್ರಗಳ ವಿವಿಧ ವೇಷಗಳನ್ನು ಧರಿಸುತ್ತಿದ್ದರು. ನಾಲ್ಕಾರು ಜನ ಹುಡುಗರು ಕೂಡಿ ಇದೇ ತರಹದ ವೇಷ ಹಾಕಿ ಜನರರನ್ನು ರಂಜಿಸುತ್ತಿದ್ದೇವು. ಇದು ಕೂಡ ತಮ್ಮ ಮೇಲೆ ಪ್ರಭಾವ ಬೀರಿತು. ಊರಿನ ಜಾತ್ರೆ ಬಂತೆಂದರೆ ಆಯೋಜನೆಗೊಳ್ಳುವ ಸಣ್ಣಾಟ, ದೊಡ್ಡಾಟ!, ದೇವಿ ಆಟ, ಶ್ರೀಕೃಷ್ಣ ಪಾರಿಜಾತ, ಸಂಗ್ಯಾ-ಬಾಳ್ಯಾ



ಬಸವರಾಜ್ ಎಸ್. ಮಠ

ಹಾಗೂ ಊರಿನ ಉತ್ಸಾಹಿ ತರುಣರು ನಾಟಕ ಕಲಿತು ಆಡುವ ನಾಟಕ. ಹೀಗೆ ಸಾಂಸ್ಕೃತಿಕ ಲೋಕವೇ ಅಲ್ಲಿ ಮೈದಾಳುತ್ತಿತ್ತು. ಇವೆಲ್ಲ ನನ್ನ ಉತ್ಸಾಹಕ್ಕೆ ಹಾಗೂ ಬತ್ತದ ಬರವಣಿಗೆಗೆ ಮತ್ತಷ್ಟು ನೀರೆರೆದು ಪೋಷಿಸಿತು.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ದಿನಗಳಲ್ಲಿಯೇ ನಾಟಕ ಬರೆಯುವುದು, ನಾಟಕ ನಿರ್ದೇಶಿಸುವುದು ಮತ್ತು ನಟಿಸುವುದು, ಕಥೆ, ಕವನ ಕವಿತೆ ರಚನೆ ಇವು ಹವ್ಯಾಸಗಳಾಗಿದ್ದವು.

'ಸಾಹುಕಾರನ ಸೊಕ್ಕು' ಎಂಬ ನಾಟಕ ಹೈಸ್ಕೂಲ್ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಯಶಸ್ವಿ ಪ್ರಯೋಗ ಕಂಡು, ವಿದ್ಯಾರ್ಥಿ, ಶಿಕ್ಷಕರ ಪ್ರೋತ್ಸಾಹದ ಜೊತೆಗೆ ಮೆಚ್ಚುಗೆಯೂ ದೊರೆಯಿತು ಎಂದು ಮಠ ಅವರು ಅಂದಿನ ದಿನಗಳನ್ನು ಮೆಲುಕು ಹಾಕಿದರು.

ನಾಟಕಗಳ ಮೂಲ ವಸ್ತು ಹಾಗೂ ರಚನೆಯ ಕುರಿತು ಮಾತನಾಡಿದರು. ಸಾಮಾಜಿಕ ಸಮಸ್ಯೆಗಳ ಹಿನ್ನೆಲೆಯಾಗಿ ಓರೆ-ಕೋರೆಗಳನ್ನು ತಿದ್ದುವ ದೃಷ್ಟಿಕೋನದಡಿ 'ಪಕ್ಕ ಬಲಿತರೂ ಹಾರದ ಗಿಳಿ' ನಾಟಕವು ಅಂಥ ಸಮಸ್ಯೆಗಳ ಜಾಡು ಹಿಡಿದು ರಚಿಸಿರುವ ನಾಟಕ ಬಹು ಜನಮನ್ನಣೆ ಪಡೆಯಿತು. 'ಕಂದೀಲ ಹಚ್ಚಿ ಈ ಜನರು ಬೆಳಕಿನ ಹಾದಿ ಹುಡುಕ್ಯಾರೋ' ಎಂಬುದರ ಕುರಿತು ತಿಳಿಸಿದರು. ಕಲ್ಪನೆ ಹಾಕಿ ಬರೆಯುವುದು ಅದೊಂದು ಅನುಭವ, ಅನುಭವದ ಮೂಲಕ ಕೃತಿ ರಚನೆ, ಸಾಹಿತ್ಯದಲ್ಲಿ ಮೌಲ್ಯಾಧಾರಿತ ವಿಷಯಗಳೆಡೆಗೆ ಗಮನಹರಿಸಿದ್ದೇನೆ ಎಂದರು.

ಭಕ್ತಿ, ಭಜನೆ, ಜಾನಪದ ಶೈಲಿಯ ರಚನೆಯ ಹಾಡುಗಳಿಗೆ ನಾಡಿನ ಹೆಸರಾಂತ ಗಣ್ಯ ಗಾಯಕರು ತಾವು ಬರೆದ ಹಾಡುಗಳಿಗೆ ಧ್ವನಿಯಾಗಿದ್ದಾರೆ ಹಾಗೂ ಧ್ವನಿ ಸುರುಳಿಗಳು ಹೊರಬಂದಿವೆ. ಪರಿಸರ ಘಟನೆಗಳ ಅವಲೋಕಿಸಿ ಬರೆದ ಕೃತಿ 'ಸಾಲುಮರದ ತಿಮ್ಮಕ್ಕ' ಇದು ಶಾಲಾ ವಿದ್ಯಾರ್ಥಿಗಳಿಗೆ ಜನಪ್ರಿಯ ನಾಟಕ.

ಶಾಲಾ-ಕಾಲೇಜು, ನಂತರದ ದಿನಗಳು ಹಾಗೂ ಇಂದಿನ ದಿನಗಳಲ್ಲಿ ಸಾಹಿತ್ಯ ರಚನೆ ಕುರಿತು ಹೇಳಿದರು. ಶಾಲಾ ದಿನಗಳಲ್ಲಿ ಏಕಾಂಕ ನಾಟಕಗಳ ರಚನೆ, ನಿರ್ದೇಶನ ಮಾಡಿ ರಂಗ ಪ್ರಯೋಗಗೊಳ್ಳುತ್ತಿದ್ದವು. 'ಕಾಣದ ಜ್ವಾಲೆ'

ಕಾದಂಬರಿ ಸಹ ಬಾಲ್ಯದಲ್ಲಿಯೇ ರಚಿಸಿದ ರಚನೆ. ಪತ್ರಿಕೆಯಲ್ಲಿ ಧಾರಾವಾಹಿ ರೂಪದಲ್ಲಿ ಪ್ರಕಟವಾಗುತ್ತಿತ್ತು. ಗೋಕಾಕ ಚಳುವಳಿಯಲ್ಲಿ ಭಾಗವಹಿಸಿ, ನಾಡು-ನುಡಿಯ ಕುರಿತ ಸ್ವ-ರಚಿತ ಕವನ ರಚಿಸಿ ಹಾಡಿರುವುದನ್ನು ನೆನಪಿಸಿಕೊಂಡು ಹೆಮ್ಮೆ ಪಟ್ಟರು. 'ಇವರೂ ನಮ್ಮವರೇ' ಕನ್ನಡದ ಕುರಿತಾಗಿ ರಚಿಸಿರುವ ನಾಟಕವಿದು.

1976ರ ಸುಮಾರಿಗೆ ಕಂಪನಿ ನಾಟಕಗಳಿಗೆ ನಾಟಕ ಕೃತಿಗಳನ್ನು ಬರೆದು ಪ್ರಯೋಗಿಸಲಾರಂಭಿಸಿದೆ. 'ಗಂಡಿನ ಸವಾಲು', 'ಮಗಳೊಂದು ಮರಳು ಇನ್ನೊಂದು ಕರಳು', 'ಹೆಸರಿಗೆ ಬಂದ ಹೆಂಡತಿ' ಹೀಗೆ ಸುಮಾರು 30ಕ್ಕೂ ಹೆಚ್ಚು ನಾಟಕಗಳು. 12 ನಾಟಕಗಳು ಒಳಗೊಂಡಂತೆ 3 ಕವನ ಸಂಕಲನಗಳು ಪ್ರಕಟಿತ ಕೃತಿಗಳಾಗಿದ್ದು, 'ಮುಟ್ಟಿದರೆ ಶಿವನಾಣೆ', 'ರಂಗಸುಂದರಿ', 'ಪಕ್ಕ ಬಲಿತರೂ ಹಾರದ ಹಕ್ಕಿ' ಎಂಬಿತ್ಯಾದಿ ಹಲವಾರು ನಾಟಕಗಳ ಪ್ರಯೋಗಗಳು ಬಾಗಲಕೋಟೆಯ 'ಜಲಜಮಿತ್ರ' ರಂಗವೇದಿಕೆ ಮೂಲಕ ಪ್ರದರ್ಶನ ಕಂಡಿವೆ. ಮಠ ಅವರು ನಾಟಕಕಾರಷ್ಟೆ ಅಲ್ಲದೇ ಕತೆ, ಕವಿತೆ, ಕವನಗಳನ್ನೂ ಸಹ ರಚಿಸಿ ಸಾಹಿತ್ಯಾಸಕ್ತರಿಗೆ ಹಾಗೂ ಸಾಹಿತ್ಯಾಭಿಮಾನಿಗಳಿಗೆ ಒದಗಿಸಿದ್ದಾರೆ. ಬಹಳಷ್ಟು ಜನಮನ್ನಣೆ ಪಡೆದ ನಾಟಕ 'ಹೆಸರಿಗೆ ಬಂದ ಹೆಂಡತಿ' ಹಲವು ಬಾರಿ ಮರು ಪ್ರಯೋಗಗೊಂಡಿತು

'ಅಷ್ಟಾವರಣ' ಪ್ರಬಂಧ ಗದ್ಯರೂಪವನ್ನು ನಾಟಕಕ್ಕೆ ರೂಪಾಂತರಿಸಿದೆ. ಇದು ಹೆಸರಾಂತ ನಿರ್ದೇಶಕ ಅಶೋಕ ಬಾದರದಿನ್ನಿ ಅವರು ನಿರ್ದೇಶನ ಮಾಡಿ, ಬಿಜಾಪೂರದ ಕಂದಗಲ್ ಹಣಮಂತ್ರಾಯ ರಂಗಮಂದಿರದಲ್ಲಿ ಅದ್ದೂರಿ ಪ್ರಯೋಗ ಕಂಡಿತು. ರಂಗ ಬಳಗ ಸಾಕಷ್ಟು ಕಲಾವಿದರು ಸಹಕಾರ, ಸಾಹಿತಿಗಳ ಒಡನಾಟ, ರಂಗ ಸಾಹಿತ್ಯ ಪಥಕ್ಕೆ ದಾರದೀಪವಾಯಿತು ಎಂದು ನೆನೆದರು.

ಬಾಗಲಕೋಟೆಗೆ ಆಗಮಿಸಿದ ತರುವಾಯ, ಜಲಜಮಿತ್ರ ರಂಗವೇದಿಕೆ ಪ್ರಾರಂಭವಾಯಿತು. ಭಕ್ತಿ ಪ್ರಧಾನ ಹೊಸ ಅಲೆಯ ನಾಟಕ ರಚನೆಯ ಕಡೆಗೆ ಗಮನ. ರಂಗ ಕಾಯಕದ ಯಶಸ್ಸಿಗೆ ಕಲಾವಿದರ ಪ್ರೋತ್ಸಾಹವೇ ಕಾರಣ ಎಂದೂ ಇತ್ತೀಚಿನ ದಿನಮಾನದ ರಂಗಸೇವೆಯ ಬಗ್ಗೆಯೂ ಮಾತನಾಡಿದರು.

ಮಠ ಅವರೇ ರಚಿಸಿ ನಿರ್ದೇಶಿಸಿರುವ 'ರಂಗಸುಂದರಿ' ನಾಟಕ ರಾಜ್ಯಮಟ್ಟದಲ್ಲಿ ಪಾಲ್ಗೊಂಡು ಕುವೆಂಪು ಕಲಾಕ್ಷೇತ್ರದಲ್ಲಿ ಪ್ರಯೋಗಗೊಂಡಿವೆ.

'ಸವಾಲ್ರೆಪೋ ಸವಾಲು', 'ಪಿಶಾಚಿಯ ಕಾಟ' ಒಳಗೊಂಡಂತೆ ಇನ್ನೂ ಅನೇಕ ಬಾನುಲಿ ನಾಟಕ ರಚಿಸಿದ್ದಾರೆ. ಸಾಂಸ್ಕೃತಿಕ ಲೋಕದ ಹೆಸರಾಂತ ಕಲಾವಿದರಾದ ಶ್ರೀಮತಿ ಯಮುನಾ ಮೂರ್ತಿ, ಪ್ರಭಾ ಶಿರೂರ ಮುಂತಾದವರ ನಿರ್ದೇಶನದಲ್ಲಿ ಅನೇಕ ರೇಡಿಯೋ ನಾಟಕಗಳಲ್ಲಿ ಅಭಿನಯವಿದೆ.

ಉದಯ ಟಿವಿ, ಚಂದನ ವಾಹಿನಿಗಳಲ್ಲಿ ಹಾಸ್ಯ, ನೇರ ಸಂದರ್ಶನ ಇತ್ಯಾದಿ ಇವರ ಕಾರ್ಯಕ್ರಮ ಪ್ರಸಾರಗೊಂಡಿವೆ.ಕೇರಳದಲ್ಲಿ ನಡೆದ ಕನ್ನಡ ಸಮ್ಮೇಳನದ ಕವಿಗೋಷ್ಠಿ, ಮಹಾರಾಷ್ಟ್ರದ ಸೋಲಾಪೂರ ಮತ್ತು 'ಕುಂಬಾರಿ'ಯಲ್ಲಿ ನಡೆದ ನಾಟಕ ಪ್ರಯೋಗಗಳ ಮೂಲಕ ಹೊರನಾಡಿನಲ್ಲಿಯೂ ಒಳನಾಡ ಕಂಪನ್ನು ಪಸರಿಸಲಾಗಿದೆ ಎಂದರು.

ಬಾಗಲಕೋಟೆ ತಾಲ್ಲೂಕಿನ ಕನ್ನಡ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷರ ಆಯ್ಕೆಯ ಗೌರವ ಸಾಹಿತ್ಯಾಭಿರುಚಿಗೆ ಸಂದಿದೆ. ತಮ್ಮ ಹಲವು ನಾಟಕಗಳ ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ 'ದತ್ತಿ ನಿಧಿ' ಪ್ರಶಸ್ತಿ, ರಾಜ್ಯ ಮಾನವ ಹಕ್ಕುಗಳ ಮಂಡಳಿಯಿಂದ 'ರಾಜ್ಯ ಮಟ್ಟದ ಭಾವ್ಯಕ್ಯತಾ ಪ್ರಶಸ್ತಿ', ಪುಟ್ಟಣ್ಣ ಕಣಗಾಲ್ ಶೀಲ್ಡ್ ಪ್ರಶಸ್ತಿ, ನಾಟಕ ರಚನಾ ಚತುರ ಪ್ರಶಸ್ತಿ, ಸರ್ವಶ್ರೇಷ್ಠ ಕಲಾಭೂಷಣ ಪ್ರಶಸ್ತಿ, ರಂಗ ಸಾಹಿತ್ಯ ತಾರಾ ಗಣರಾಜ್ಯ ಪ್ರಶಸ್ತಿ ಸೇರಿದಂತೆ, ಹತ್ತು ಹಲವಾರು ಪ್ರಶಸ್ತಿಗಳು ಮತ್ತಷ್ಟು ರಂಗ ಸೇವೆ ಮಾಡುವಲ್ಲಿ ಜವಾಬ್ದಾರಿ ಹೆಚ್ಚಿಸಿವೆ ಎಂದರು.

ತಿರುಗುವ ಕಾಲಚಕ್ರದಲ್ಲಿ ಕಾಲಕ್ಕೆ ತಕ್ಕಂತೆ ನಮ್ಮ ಪಯಣ ಸಾಗಬೇಕು.ಸಮಾಜಕ್ಕೆ ಹೊಸ ಬೆಳಕು ನೀಡುವ, ನ್ಯೂನ್ಯತೆ ತಿದ್ದುವ ಸಾಹಿತ್ಯ ಇರಬೇಕು. ನಾಟಕಗಳಲ್ಲಿ ರಾಜ ಹಾಸ್ಯ ಸಂಭಾಷಣೆ ಒಳಗೊಂಡಿರಬೇಕು.ಜೀವನಕ್ಕೆ ಹೊಸ ಆಯಾಮ ದೊರಕುವ ನಿಟ್ಟಿನಲ್ಲಿ ಭವಿಷ್ಯತ್ತಿಗೊಂದು ದಾರದೀಪವಾಗಬೇಕು. ಇತಿಹಾಸ ಒಳಗೊಂಡು ಸಮಕಾಲೀನ ಸಂದರ್ಭಕ್ಕೆ ಮಾರ್ಗದರ್ಶನ ನೀಡುವಂತಿರಬೇಕು ಈ ತರಹದ ಕೃತಿ ಹೊರಬರಬೇಕು ಎಂಬ ಕಿವಿ ಮಾತು ಹೇಳಿದರು.

ವೈಶಿಷ್ಟ್ಯದಿಂದ ಕೂಡಿದ ಅಪರೂಪದ ಕಾರ್ಯಕ್ರಮ ದಿನಕರದ ವಿಶಿಷ್ಟತೆಯಲ್ಲೊಂದು, ಸಾಹಿತ್ಯಿಕ ಹಾಗೂ ರಂಗಭೂಮಿಯ ಕುರಿತು ಹಮ್ಮಿಕೊಳ್ಳುವ ತುರ್ತು ಕಾರ್ಯಗಳಿದ್ದರೂ, ಕೊನೆಯವರೆಗೂ ಇದ್ದು ಆಸ್ವಾದಿಸುತ್ತೇನೆ ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರೂ, ಸಾಹಿತಿಗಳೂ ಆದ ಡಾ. ವೆಂಕಟಾಚಲ ಹೆಗಡೆ ಅವರು ಸಂವಾದದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಬಸವರಾಜ ಮಠ ಅವರ ಮಾತು ಕೇಳಿ ಸಂತೋಷವಾಯಿತು ಎಂದ ಅವರು, ಇಂತಹ ಕಾರ್ಯಕ್ರಮಗಳಿಂದ ಮನ-ಮನಸ್ಸುಗಳಿಗೆ ಸ್ಫೂರ್ತಿ ಎಂದರು.

ಸಕಾಲಿಕ ಹಾಗೂ ಮೌಲಿಕವಾದ ಪ್ರಶ್ನೆಗಳ ಮೂಲಕ ಸಂವಾದಕ್ಕೆ ಮೆರಗು ನೀಡಿದವರು ನಾರಾಯಣ ಬಿ. ಸಂತೋಷ ಉಪಾಧ್ಯಾಯ ಅವರು ಕಾರ್ಯಕ್ರಮಕ್ಕೆ ಯಶಸ್ವಿ ಮುನ್ನುಡಿ ಬರೆದರು. ಅವರು ಕಾರ್ಯಕ್ರಮದ ಹಾಗೂ ದಿನಕರದ ಕುರಿತಾಗಿ ತಿಳಿಸಿಕೊಟ್ಟರು.

ತಾಂತ್ರಿಕ ನಿರ್ವಹಣೆ ಹಾಗೂ ಸೂಕ್ತ ಸಲಹೆ ಸೂಚನೆಗಳನ್ನು ನೀಡುವ ಮೂಲಕ ಬೇರೆ-ಬೇರೆ ರಾಜ್ಯದಲ್ಲಿದ್ದ ಎಲ್ಲರನ್ನು ಒಟ್ಟುಗೂಡಿಸಿ ಸಂವಾದ ಯಶಸ್ವಿಯಾಗಲು ಸಹಕರಿಸಿದವರು ಶ್ರೀ ರಮೇಶ ಟಿ.ಎಸ್. ನವದೆಹಲಿ ದಿನಕರದ ಸದಸ್ಯ ಅಮರೇಶ ಅವರು ರಂಗಗೀತೆಯನ್ನಾಡಿ, ಸಂಪನ್ಮೂಲ ಅತಿಥಿಗಳನ್ನು ಸಭೆಗೆ ಪರಿಚಯಿಸಿದರು.

ದೆಹಲಿ ದಿನಕರದ ಸಂಚಾಲಕ ಹಾಗೂ ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರು ಕಾರ್ಯಕ್ರಮದ ರೂಪು-ರೇಷೆ ಸಿದ್ಧಪಡಿಸಿ ವಂದಿಸಿದರು.

**ಅಮರೇಶ**

# ಕಣ್ಮನ ತುಂಬುವ ಕಕ್ಕೆ ಮರ


ಕಣ್ಣುಗಳಿಗೆ ತಂಪು ನೀಡುವ, ಮನಸ್ಸಿಗೆ ಮುದ ನೀಡುವ, ಮೈತುಂಬಾ ಹಳದಿ ಬಣ್ಣದ ಹೂವುಗಳ ಗೊಂಚಲುಗಳನ್ನು ಧರಿಸಿರುವ ಈ ವೃಕ್ಷವನ್ನು ಮನೆಯ ಹತ್ತಿರದ ಉದ್ಯಾನದಲ್ಲಿ ನೋಡಿದಾಗ, ನೋಡುತ್ತಲೇ ಇರಬೇಕು ಎಂದೆನಿಸಿತು. ಕ್ಯಾಮೆರಾ ಫೋಟೊ ಕ್ಲಿಕ್ಕಿಸಿತು. ಸಾಮಾನ್ಯವಾಗಿ ಏಪ್ರಿಲ್ ನಿಂದ ಜೂನ್ ತಿಂಗಳ ಅವಧಿಯಲ್ಲಿ ಹೂ ಬಿಡುವಾಗ ಎಲೆಗಳು ಕಡಿಮೆಯಾಗಿರುತ್ತವೆ. ಇದನ್ನು ಕನ್ನಡದಲ್ಲಿ ಕಕ್ಕೆಮರ, ಇಂಗ್ಲಿಷ್‌ನಲ್ಲಿ ಗೋಲ್ಡನ್ ಶವರಿಂಗ್ ಟ್ರೀ, ಹಿಂದಿಯಲ್ಲಿ ಅಮಲತಾಸ್ ಎಂದೆಲ್ಲಾ ಕರೆಯುತ್ತಾರೆ. ಇದರ ವೈಜ್ಞಾನಿಕ ಹೆಸರು ಕ್ಯಾಸಿಯಾ ಫಿಸ್ಟುಲಾ. ಹೆಚ್ಚಾಗಿ ಅಲಂಕಾರಿಕ ವೃಕ್ಷವಾಗಿ ಇದನ್ನು ಬಳಸಿದರೂ ಇದರ ಪ್ರತಿಯೊಂದು ಭಾಗವೂ ಔಷಧೀಯ ಗುಣಗಳಿಂದ ಕೂಡಿದೆ. ಇದು ಥೈಲೆಂಡ್ ದೇಶದ ರಾಷ್ಟ್ರ ವೃಕ್ಷ ವಾಗಿದ್ದು ಕೇರಳದ ರಾಜ್ಯವೃಕ್ಷವಾಗಿದೆ. ಸೌರಮಾನ ಯುಗಾದಿ ಅಥವಾ ವಿಷು ಆಚರಣೆ ಮಾಡುವಾಗ ಇದರ ಹೂವುಗಳನ್ನು ದೇವರ ಮುಂದೆ ವಿಶೇಷವಾಗಿ ಅಲಂಕಾರಕ್ಕಾಗಿ ಬಳಸುತ್ತಾರೆ. ಇಂತಹ ವೃಕ್ಷಗಳನ್ನು ಹೆಚ್ಚು ಹೆಚ್ಚು ಸಂರಕ್ಷಣೆ ಮಾಡಿ ಬೆಳೆಸುವ ಅವಶ್ಯಕತೆ ಇದೆ.

**ಪ್ರೇಮಲತಾ ಬಿ.**



# ಭಾವಪೂರ್ಣ ಶ್ರದ್ಧಾಂಜಲಿ


## ಮೋಹನ್ ಮಲ್ಲಿಕಾರ್ಜುನ ಗೌಡರ್



ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿ ಗೌರವಾನ್ವಿತ ಮೋಹನ್ ಮಲ್ಲಿಕಾರ್ಜುನ ಗೌಡ ಶಾಂತನ ಗೌಡರ್ ಅವರು ದಿನಾಂಕ 24.04.2021 ರಂದು ನವದೆಹಲಿಯಲ್ಲಿ ನಿಧನರಾಗಿದ್ದಾರೆ.

ಇವರು ಮೂಲತಃ ಹಾವೇರಿ ಜಿಲ್ಲೆಯವರಾಗಿದ್ದಾರೆ. ಧಾರವಾಡದಲ್ಲಿ ವಕೀಲರಾಗಿ ಹೆಸರು ಮಾಡಿದ್ದ ಮಲ್ಲಿಕಾರ್ಜುನ ಗೌಡ ಅವರ ಪುತ್ರ ಮೋಹನ್ ಶಾಂತನ ಗೌಡರ್ 1980ರಲ್ಲಿ ವಕೀಲ ವೃತ್ತಿ ಆರಂಭಿಸಿದ್ದರು. 2003ರಲ್ಲಿ ರಾಜ್ಯ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರಲ್ಲದೆ, 2004ರಲ್ಲಿ ನ್ಯಾಯಮೂರ್ತಿಯಾಗಿ ಸೇವೆ ಆರಂಭಿಸಿದ್ದ ಇವರು 2017ರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು.

## ಕೃಷ್ಣಮೂರ್ತಿ ಕಲುಮಂಗಿ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಕೃಷ್ಣಮೂರ್ತಿ ಕಲುಮಂಗಿ ಅವರು ದಿನಾಂಕ 14.04.2021 ರಂದು ಬಳ್ಳಾರಿಯಲ್ಲಿ ಕೋವಿಡ್‌ನಿಂದ ನಿಧನರಾಗಿದ್ದಾರೆ.

ದೆಹಲಿ ವಲಯ ಕಂಡ ಅತ್ಯುತ್ತಮ ಬರಹಗಾರ ಸಜ್ಜನ ಕಲುಮಂಗಿಯವರ ಅಗಲುವಿಕೆ ನಿಜಕ್ಕೂ ಆಘಾತಕರ. ಸದಾ ಹಸನ್ಮುಖಿಯಾಗಿರುತ್ತಿದ್ದ ಅವರು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವ ರೀತಿ ಇವೆಲ್ಲ ಇನ್ನು ನೆನಪುಗಳು ಮಾತ್ರ. ಕಲುಮಂಗಿಯವರು ಹಲವಾರು ಹಾಸ್ಯ ಕೃತಿಗಳನ್ನು ಬರೆದಿದ್ದಾರೆ.


## ಸಾವಿತ್ರಿ ಶಾಸ್ತ್ರಿ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯೆ ಸಾವಿತ್ರಿ ಶಾಸ್ತ್ರಿ ಅವರು ದಿನಾಂಕ 28.04.2021 ರಂದು ನಿಧನರಾಗಿದ್ದಾರೆ.

ಅವರು ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಎಸ್. ಗೋಪಾಲ ಶಾಸ್ತ್ರಿ ಅವರ ಧರ್ಮಪತ್ನಿ. ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಾಲೆ ಹಾಗೂ ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಮುಖ್ಯವಾಗಿ ದೆಹಲಿ ಕನ್ನಡ ಶಾಲೆಯ ಪ್ರಾರಂಭದ ದಿನಗಳಲ್ಲಿ ಅವರ ಕೊಡುಗೆ ಅಪಾರ ಮತ್ತು ನೆನಪಿನಲ್ಲಿ ಇಟ್ಟುಕೊಳ್ಳುವಂತಹದ್ದು.


## ದೇವದಾಸ್ ರಾವ್



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ದೇದಾಸ ರಾವ್ ಅವರು ದಿನಾಂಕ 13.05.2021 ರಂದು ಕೋವಿಡ್‌ನಿಂದ ನಿಧನರಾಗಿದ್ದಾರೆ.

ದೀರ್ಘಕಾಲದಿಂದ ದೆಹಲಿಯ ನಿವಾಸಿಯಾಗಿದ್ದ ರಾವ್ ಅವರು ಸರಳ ಮತ್ತು ಸಜ್ಜನಿಕೆಗೆ ಹೆಸರಾಗಿದ್ದರು. ದೆಹಲಿಯ ಕನ್ನಡಿಗರೊಂದಿಗೆ ಅವರ ಸ್ನೇಹ ಸಂಬಂಧವೂ ಅಪರೂಪದ್ದಾಗಿತ್ತು. ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸುತ್ತಿದ್ದರು. ಅವರ ಅಗಲುವಿಕೆಯಿಂದ ದೆಹಲಿಯ ಹಿರಿಯ ಮತ್ತು ಉದಾತ್ತ ಕನ್ನಡಿಗರೊಬ್ಬರನ್ನು ನಾವು ಕಳೆದುಕೊಂಡಿದ್ದೇವೆ.

## ಅಶೋಕ ಕುಂಬಾರ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಅಶೋಕ ಕುಂಬಾರ ಅವರು ದಿನಾಂಕ 29.04.2021 ರಂದು ಕೋವಿಡ್‌ನಿಂದ ನಿಧನರಾಗಿದ್ದಾರೆ.

ದೆಹಲಿಯ ಕರ್ನಾಟಕ ಭವನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇವರು ದೆಹಲಿ ಸಾಂಸ್ಕೃತಿಕ ವಲಯದಲ್ಲಿ ಗಾಯಕರಾಗಿ ಹೆಸರುವಾಸಿಯಾಗಿದ್ದರು. ಕನ್ನಡ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಒಳ್ಳೆಯ ಆಡಳಿತಗಾರ ಹಾಗೂ ಸ್ನೇಹಜೀವಿಯಾಗಿದ್ದರು.

## ಎನ್. ರಾಮು ರೆಡ್ಡಿ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಎನ್. ರಾಮು ರೆಡ್ಡಿ ಅವರು ದಿನಾಂಕ 22.05.2021 ರಂದು ಕೋವಿಡ್‌ನಿಂದ ನಿಧನರಾಗಿದ್ದಾರೆ.

ಅವರು ಮಾಲೂರು ಭುವನೇಶ್ವರಿ ಕಲಾ ಸಂಘದ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದರು. ಅನೇಕ ಕಲಾ ಸಂಘಗಳಿಗೆ ಸಹಕಾರ ನೀಡುತ್ತಿದ್ದ ಇವರು ಕಲಾಪೋಷಕರಾಗಿ ಬಹಳಷ್ಟು ಕಲಾವಿದರಿಗೆ ಆಸರೆಯಾಗಿ ಸ್ನೇಹಜೀವಿಯಾಗಿದ್ದರು. ಇವರ ಅಗಲುವಿಕೆ ಅನೇಕ ಕಲಾವಿದರಿಗೆ ತುಂಬಲಾರದ ನಷ್ಟವಾಗಿದೆ.

# ಭಾವಪೂರ್ಣ ಶ್ರದ್ಧಾಂಜಲಿ

## ಕೆ.ಪಿ. ಮೋಹನ್ ಕುಮಾರ್



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಕೆ.ಪಿ. ಮೋಹನ್ ಕುಮಾರ್ ಅವರು ದಿನಾಂಕ 28.04.2021 ರಂದು ಕೊರೊನಾದಿಂದ ನಿಧನರಾಗಿದ್ದಾರೆ.

ದೆಹಲಿಯ ರೇಸ್‌ಕೋರ್ಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇವರು ದೆಹಲಿಯ ಕನ್ನಡ ಸಂಘ ಸಂಸ್ಥೆಗಳಲ್ಲಿ ಅತಿ ಜವಾಬ್ದಾರಿಯುತವಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಸದಾ ಹಸನ್ಮುಖ ಹಾಗೂ ಮೃದು ಭಾಷಿಯಾಗಿದ್ದರು.

## ಪ್ರದೀಪ್ ಕುಮಾರ್ ಎ.ಜೆ.




ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಪ್ರದೀಪ್ ಕುಮಾರ್ ಅವರು ದಿನಾಂಕ 26.04.2021 ರಂದು ಬೀದರ್‌ನಲ್ಲಿ ಕೋವಿಡ್‌ನಿಂದ ನಿಧನರಾಗಿದ್ದಾರೆ.

ಅವರು ದೆಹಲಿಯಲ್ಲಿ ಟಿವಿ9 ಚಾನೆಲ್‌ನಲ್ಲಿ ಕ್ಯಾಮಾರಾ ಮ್ಯಾನ್ ಆಗಿ ಕೆಲಸ ನಿರ್ವಹಿಸುತ್ತಿದ್ದರು.

ಕಳೆದ ಒಂದು ವರ್ಷದ ಹಿಂದೆ ದೆಹಲಿಯಿಂದ ಊರಿಗೆ ಮರಳಿದ್ದರು. ಸದಾ ಹಸನ್ಮುಖಿಯಾಗಿರುತ್ತಿದ್ದ ಇವರು ಸಂಘದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

## ಅಪ್ಪಾಸಾಹೇಬ್ ಆಲೂರ್



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಅಪ್ಪಸಾಹೇಬ್ ಆಲೂರ್ ಅವರು ದಿನಾಂಕ 05.05.2021 ರಂದು ನಿಧನರಾಗಿದ್ದಾರೆ.

ಅವರು ಗಡಿ ಭದ್ರತಾ ಪಡೆ (ಬಾರ್ಡರ್ ಸೆಕ್ಯುರಿಟಿ ಫೋರ್ಸ್) ಯಲ್ಲಿ ಐಜಿಯಾಗಿ ಸೇವೆ ಸಲ್ಲಿಸಿದ್ದಾರೆ.

## ಪಾರ್ವತಿ ಆಲೂರ್



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯೆ ಪಾರ್ವತಿ ಅಲೂರ್ ಅವರು ದಿನಾಂಕ 11.05.2021 ರಂದು ನಿಧನರಾಗಿದ್ದಾರೆ.

## ನಂಜುಂಡ ಸ್ವಾಮಿ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ನಂಜುಂಡ ಸ್ವಾಮಿ ಅವರು ದಿನಾಂಕ 28.04.2021ರಂದು ಕೋವಿಡ್‌ನಿಂದ ನಿಧನರಾಗಿದ್ದಾರೆ. ಅವರು ಕೇಂದ್ರ ಸರಕಾರದ ವಯರ್‌ಲೆಸ್ ವಿಭಾಗದಲ್ಲಿ ಹೆಚ್ಚುವರಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

## ಅಶೋಕ ಹಜೇರಿ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಅಶೋಕ ಹಜೇರಿ ಅವರು ದಿನಾಂಕ 09.05.2021 ರಂದು ಕೋವಿಡ್‌ನಿಂದ ನಿಧನರಾಗಿದ್ದಾರೆ. ಅವರು ದೆಹಲಿಯ ಆರ್ಮಿ ಪೋಸ್ಟಲ್ ಸರ್ವೀಸಸ್‌ನಲ್ಲಿ ಸೇವೆ ಸಲ್ಲಿಸಿದ ನಂತರ ವಿಜಯಪುರದ ಅಂಚೆ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದರು.

## ಪಿ.ಆರ್. ಅರುಣ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯೆ ಪಿ.ಆರ್. ಅರುಣ ಅವರು ದಿನಾಂಕ 01.05.2021 ರಂದು ನಿಧನರಾಗಿದ್ದಾರೆ.

ಅವರು ದೆಹಲಿಯ ಲೈಬ್ರರಿ ಆಫ್ ಕಾಂಗ್ರೆಸ್‌ನಿಂದ ನಿವೃತ್ತಿ ಹೊಂದಿ ಬೆಂಗಳೂರಿನಲ್ಲಿ ನೆಲೆಸಿದ್ದರು. ದೆಹಲಿ ಕರ್ನಾಟಕ ಸಂಘದಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ದೆಹಲಿಯ ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಕ್ಲಬ್‌ನಲ್ಲೂ ಮಹಿಳಾಪರ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು.

## ಸುದೇಶ್ ವಾಸುದೇವ್



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಸುದೇಶ್ ವಾಸುದೇವ್ ಅವರು ದಿನಾಂಕ 16.05.2021 ರಂದು ಕೋವಿಡ್‌ನಿಂದ ನಿಧನರಾಗಿದ್ದಾರೆ.

ಇವರು ದೆಹಲಿಯ ಪ್ರಖ್ಯಾತ ಸುದ್ದಿ ಸಂಸ್ಥೆಗಳಾದ NDTV, CNBC, CNN-IBN ನಂತಹ ಸಂಸ್ಥೆಗಳ ತಾಂತ್ರಿಕ ವಿಭಾಗದಲ್ಲಿ ಕಾರ್ಯ ನಿರ್ವಹಿಸಿದ್ದಾರೆ.

# ಮಾಜಿ ಸಚಿವ ಬಾಬಾಗೌಡ ಪಾಟೀಲರ ನೆನಪು

ಸಾದಾ ಧೋತುರ ಒಂದು ಅಂಗಿ ಹೆಗಲ ಮೇಲೆ ಹಸಿರು ಶಾಲು, ಹೊದ್ದು ಕೊಂಡು ಕಾಲಲ್ಲಿ ಚಪ್ಪಲ ಉಟ್ಟು ಸದಾ ಕಾಲ ರೈತನ ಚಿಂತನಗ್ಯೆಯುವ ಕೇಂದ್ರದ ಮಾಜಿ ಸಚಿವ, ಬಾಬಾಗೌಡ ಪಾಟೀಲ (78) ದಿನಾಂಕ 21-5-2021 ರಂದು ನಿಧನರಾದರೆಂಬ ಸುದ್ದಿ ತಿಳದು ದುಃಖವಾಯಿತು.

ಬೈಲಹೊಂಗಲ ತಾಲ್ಲೂಕಿನ ರೈತ ಕುಟುಂಬದಲ್ಲಿ 1945 ರಲ್ಲಿ ಜನಿಸಿದರು. ಇವರು ರೈತರ ಏಳಗೆಗೆ ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಒದಗಿಸಲು ರೈತ ಸಂಘದ ಮೂಲಕ ತಮ್ಮ ಹೋರಾಟ ಆರಂಭಿಸಿದ್ದರು. ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಸತತ 5 ವರುಷಗಳ ಕಾಲಾವಧಿಯಲ್ಲಿ ಅನೇಕ ಸಾಮಾಜಿಕ ಪ್ರಮುಖ ಕಾರ್ಯಗಳು ಹಾಗು ರೈತರಿಗೆ ಕೂಲಿಕಾರರಿಗೆ ಬಡವರಿಗೆ ಸಹಾಯ ಮಾಡಿದ ಸೇವೆ ಶ್ಲಾಘನೀಯವಾಗಿದೆ. ಮತ್ತೊಮ್ಮೆ ರಾಜ್ಯ ರೈತಸಂಘದಿಂದ ಜನರು ವಿಧಾನ ಸಭೆಯ ಚುನಾವಣೆಯಲ್ಲಿ ಶಾಸಕನಾಗಿ ಆರಿಸಿ ತಂದರು. ಈ ಅವಧಿಯಲ್ಲಿ ರೈತರ ಹಿತವನ್ನು ಕಾಪಾಡಲು ಭಗೀರಥ ಪ್ರಯತ್ನಪಟ್ಟರು.

1998ರಲ್ಲಿ ಬೆಳಗಾವಿ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾದರು. ನಂತರ ಅಟಲ್ ಬಿಹಾರಿ ವಾಜಪೇಯಿಯವರ ಸಂಪುಟದಲ್ಲಿ ಗ್ರಾಮೀಣ ಅಭಿವೃದ್ಧಿ ಸಚಿವರಾದರು. ಅವರು ದೇಶದ ಎಲ್ಲ ಗ್ರಾಮಗಳ ಹೊಲಕ್ಕೆ ಹೋಗಲು ರಸ್ತೆ ಸಾರಿಗೆ ಸವಲತ್ತುಗಳನ್ನು ನೀಡಿ ಆರ್ಥಿಕ ಮಟ್ಟದ ಸುಧಾರಣೆ ತಂದರು. ಸರ್ಕಾರದಿಂದ ಪಂಚಾಯಿತಿಗೆ ಸಿಗುವ ಅನುದಾನ ನೇರವಾಗಿ ಪಂಚಾಯತಕ್ಕೆ ದೊರಕಬೇಕೆಂದು ಮತ್ತೊಂದು ಅನುಕೂಲತೆಯನ್ನು ಮಾಡಿಕೊಟ್ಟರು.

ಅವರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹಳ್ಳಗಳಲ್ಲಿ ಗಿಡಗಳು ಕಡಿಮೆಯಾಗಿ ಪರಿಸರಕ್ಕೆ ತೊಂದರೆಯಾಗಿದೆ ಎಂದು ದುಃಖ ವ್ಯಕ್ತಪಡಿಸಿದ್ದರು. ಅಷ್ಟೇ ಅಲ್ಲ ಪಾಶ್ಚಿಮಾತ್ಯ ಸಂಸ್ಕೃತಿಯಿಂದ ನಮ್ಮ ಬಟ್ಟೆಗಳು ಸಹ ಬದಲಾಗಿ ಮಾನಸಿಕ ಶಾಂತಿ ಸಮತೋಲನ ಕಳೆದುಕೊಳ್ಳುತ್ತಿದ್ದೇವೆ ಎಂಬ ಕಿವಿಮಾತು ಹೇಳುತ್ತಿದ್ದರು.

ಇಂಥ ನಿಸ್ವಾರ್ಥದಿಂದ ಸೇವೆ ಮಾಡುವ ರಾಜಕಾರಣಿಗಳು ಸಿಗುವುದು ಕಡಿಮೆ. ಇವರ ಜೊತೆ ಆಪ್ತ ಸಹಾಯಕ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದು ಕೊನೆಯ ಉಸಿರಿನ ವರೆಗೆ ಸಂಬಂಧ ಇಟ್ಟುಕೊಂಡ ನನ್ನ ಪೂರ್ವದ ಪುಣ್ಯ ವೆಂದು ಹೇಳಬಹುದು. ಮದನಗೋಪಾಲ ಖಂಖ ಜಂಬುನಾಥ ಗುತ್ತಿ, ಅಶೋಕ್ ಜೇವರ್ಗಿ, ವಿ.ವಿ. ಬಿರಾದಾರ ಹೀಗೆ ಎಲ್ಲರು ಒಂದು ಮನೆಯ ಸದಸ್ಯರಂತೆ ಇದ್ದ ನೆನಪು ಇನ್ನು ಹಚ್ಚ ಹಸಿರಾಗಿಯೇ ಉಳಿದಿದೆ. ಇನ್ನು ಅವರು ಕೆಲಸಮಾಡುವ ಹುಮ್ಮಸ್ಸು ಬಲವಾಗಿತ್ತು. ಅವರ ನಿಧನದಿಂದ ರೈತ ಕುಟುಂಬಗಳಿಗೆ ತುಂಬಲಾರದ ನಷ್ಟವಾಗಿದೆ. ಇವರು ತಮ್ಮ ಪತ್ನಿ ಇಬ್ಬರು ಪುತ್ರರು ಇಬ್ಬರು ಪುತ್ರಿಯರು ಹಾಗು ಅಪಾರ ಬಂಧು ಬಳಗವನ್ನು ಬಿಟ್ಟು ಅಗಲಿದ್ದಾರೆ ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಕುಟುಂಬದ ಎಲ್ಲ ಸದಸ್ಯರಿಗೆ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲೆಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸುತ್ತೇನೆ.



**ವಿ.ವಿ. ಬಿರಾದಾರ**

## ಅಗಲಿದ ಆತ್ಮೀಯ ಮಿತ್ರ ಪ್ರದೀಪ

ಸರಳ, ಸಜ್ಜನ, ಸದಾ ಹಸನ್ಮುಖಿ ಯಾದ, ನನ್ನ ಆತ್ಮೀಯ ಮಿತ್ರ ಪ್ರದೀಪ ಇವರು ಟಿವಿ9 ದಲ್ಲಿ ಛಾಯಾಗ್ರಾಹಕರಾಗಿ ಸೇವೆ ಸಲ್ಲಿಸುತ್ತಿದ್ದರು. ಎದೆ ನೋವಿನಿಂದ ಇವರು ಹೈದ್ರಾಬಾದ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ 26-04-2021 ರಂದು ಸಾಯಂಕಾಲ ಮೃತಪಟ್ಟಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇನೆ.

ಇವರು ಚಲನಚಿತ್ರ ಸಂಸ್ಥೆ ಬೆಂಗಳೂರಿನಲ್ಲಿ ತರಬೇತಿ ತೆಗೆದುಕೊಂಡು 2006 ರಲ್ಲಿ ಟಿವಿ 9 ಚಾಲನದಲ್ಲಿ ಛಾಯಾಗ್ರಾಹಕರಾಗಿ ಸೇವೆ ಸಲ್ಲಿಸುತ್ತಿದ್ದರು. ಅವರ ಅಪಾರ ಸೇವೆಗೆ ಸಂಸ್ಥೆಯಯವರು 2010 ರಲ್ಲಿ ಪದನ್ನೋತಿ ಮಾಡಿ ದೆಹಲಿಗೆ ವರ್ಗಾವಣೆ ಮಾಡಿದ್ದರು. ದೆಹಲಿಯಲ್ಲಿಯು ಸಹ ಬಹಳ ಮುತುವರ್ಜಿ ಯಿಂದ ಸೇವೆ ಸಲ್ಲಿಸುತ್ತಿದ್ದರು. ತಮ್ಮ ಸೇವೆಯ ಬಿಡುವಿನಲ್ಲಿ ಅನೇಕ ಸಾಮಾಜಿಕ ಕಾರ್ಯಗಳಲ್ಲಿ ಆಸಕ್ತಿ ವಹಿಸಿ ಕೆಲಸ ಮಾಡುತಿದ್ದರು. ಮಾಜಿ ಕೇಂದ್ರ ಮಂತ್ರಿಗಳಾದ ಸರ್ವಶ್ರೀ ಕೆ. ರಹಮಾನ ಖಾನ್, ಜಿ.ಎಂ ಸಿದ್ದೇಶ್ವರ, ರಮೇಶ ಸಿ. ಜಿಗಜಿಣಗಿ ಯವರ ಆಯಾ ಖಾತೆಗೆ ಸಂಬಂಧ ಪಟ್ಟ ಕೆಲಸಗಳ ಬಗ್ಗೆ ತಿಳಿದುಕೊಂಡು ಜನ ಸಾಮಾನ್ಯರ ಉದ್ಧಾರಕ್ಕಾಗಿ ನಿಸ್ವಾರ್ಥವಾಗಿ ಸೇವೆ ಸಲ್ಲಿಸುತ್ತಿದ್ದರು.

ಇವರು ತಮ್ಮ ಜೀವನ ಸಂಗಾತಿಯನ್ನು ನೋಡಲು ನನ್ನ ಊರು ಮುಚಳಂಬಕ್ಕೆ ಬಂದಿದ್ದರು. ನಾನು ಅವರ ಜೊತೆಯಲ್ಲಿ ಮಾತಾಡಿದ ಮಾತುಗಳು ಇನ್ನು ಹಚ್ಚಹಸಿರಾಗಿಯೆ ಉಳಿದಿವೆ. ಕೊನೆಗೆ ಬಸವಕಲ್ಯಾಣ ತಾಲೂಕಿನ ನಾರಾಯಣಪುರ ಗ್ರಾಮದ ಕನ್ಯೆಯನ್ನು ನೋಡಿ ಅವರ ಜೊತೆಗೆ ಲಗ್ನದ ವಿಧಿ ವಿಧಾನದ ಪ್ರಕಾರ ಅವರು ಸ್ವಗ್ರಾಮ ಹುಡುಗಿಯಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು. ಮಾಜಿ ಮುಖ್ಯಮಂತ್ರಿಗಳು, ಲೋಕಸಭೆಯ ಸದಸ್ಯರು ಆದ ಧರಮ್‌ಸಿಂಗ್ ಹಾಗು ಅನೇಕ ಗಣ್ಯರು ಹಿರಿಯರು ಪಾಲ್ಗೊಂಡಿದ್ದರು.

ಮದುವೆಯಾದ ಕೆಲವೇ ದಿನಗಳಲ್ಲಿ ಮತ್ತೆ ತಾಯಿ ನಾಡಿಗೆ ಬಂದು ಅದೇ ಸಂಸ್ಥೆಯಲ್ಲಿ ಹಿರಿಯ ಛಾಯಾಗ್ರಾಹಕರಾಗಿ ಕೆಲಸ ಮಾಡುತ್ತ ಎಲ್ಲರ ಪ್ರೀತಿಗೆ ಪಾತ್ರರಾಗಿ ಸೇವೆ ಮಾಡಹತ್ತಿದ್ದರು. ಹೀಗೆ ಇವರ ಜೀವನದಲ್ಲಿ ಒಂದಿಲ್ಲೊಂದು ಯಶಸ್ಸು ಬೆನ್ನಟ್ಟಿ ಬರುತ್ತಲೇ ಇದ್ದವು. ಇವರು ಟಿವಿ 9 ಚಾನೆಲಗೆ ರಾಜಿನಾಮೆ ನೀಡಿ "ಕನ್ನಡ ದೀಪ" ನ್ಯೂಜ ಚಾನಲ್ ತಮ್ಮ ಗೆಳೆಯ ಶ್ರೀ ನವಿನ ಸಾಗರ ಜೊತೆ ಸೇರಿ ಪ್ರಾರಂಭ ಮಾಡಿ 4 ತಿಂಗಳಲ್ಲಿ ಬಹು ಸಾಧನೆ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇತ್ತಕಡೆ ಹೆರಿಗೆಗೆ ಬಂದ ಹೆಂಡತಿಗೆ ಯಾವ ತೊಂದರೆಯೂ ಇಲ್ಲದೆ ಗುರು ಹಿರಿಯರ ಆಶೀರ್ವಾದ ದಿಂದ ಗಂಡು ಮಗುವಿನ ಜನ್ಮವಾಯಿತು. ಇದೆ ಒಂದು ಸಂತೋಷದ ಸಂದರ್ಭದಲ್ಲಿ ಅವಳ ತಾಲುಕು ಹುಮನಾಬಾದದಲ್ಲಿ ವರ್ಗಾವಣೆಯಾಯಿತು. ಪ್ರದೀಪ ಅವರಿಗೆ ಸಂತೋಷವೆ ಸಂತೋಷ. ಮನೆಯಲ್ಲಿ ಸಂತಸದ ಹೊಳೆ. ಮಗುವಿನ ತೊಟ್ಟಿಲು ಕಾರ್ಯಕ್ರಮ ಸಂತಸ ಸಡಗರದಿಂದ ಸಾಮೂಹಿಕವಾಗಿ ಆಚರಿಸಲಾಯಿತು.

"ಬಾರದು ಬಪ್ಪದು ಬಪ್ಪದು ತಪ್ಪದು" ಎಂಬಂತೆ ಮಹಾ ಮಾರಿ ಕೊರೊನಾದ ಸೋಂಕಿನ ನೆಪದಿಂದ ತಮ್ಮ ಮನೆಯ ಹೊಲದ ರೂಮಿನಲ್ಲಿ ಅಣ್ಣ ತಮ್ಮಂದಿರಿಬ್ಬರು ವಾಸಮಾಡುತಿದ್ದರು. "ತಾ ಒಂದು ಬಗೆದರೆ ದೈವ ಒಂದು ಬಗೆದಂತೆ" ಅವರು ಎದೆಯ ನೋವಿನ ನೆಪದಿಂದ ಹೈದ್ರಾಬಾದ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಒಂದು ಕಡೆ ಸಂತೋಷವಾದರೆ ಮತ್ತೊಂದು ಕಡೆ ದುಃಖ. ನಿನ್ನೆ ಮಗನ ತೊಟ್ಟಿಲು ಕಟ್ಟಿ ಸಂತೋಷ ಪಟ್ಟಿದ ತಂದೆಗೆ ಈ ನಿರ್ಜೀವ ತೊಟ್ಟಿಲು ತೂಗಬೇಕೆಂಬ ಮನಸ್ಸು ಯಾರಿಗೂ ಬರಬಾರದು. ಆದರೆ ವಿಧಿಯ ಮುಂದೆ ಯಾರೂ ಏನನ್ನೂ ನಿರೀಕ್ಷಿಸದೆ ನಿಜವೇ ನರಿದು ನಿಶ್ಚಿತನಾಗಿರಬೇಕಲ್ಲವೆ.? ಹೀಗೆ ಮನುಷ್ಯನ ಜೀವನ ನೀರಿನ ಗುಳ್ಳೆ ಇದ್ದ ಹಾಗೆ. ಹುಟ್ಟು ಆಕಸ್ಮಿಕವಾದರೆ ಸಾವು ಖಚಿತ. ಇವರ ಅಪಾರ ಪ್ರೀತಿ ಸೇವೆ ನನಗು ನಷ್ಟವಲ್ಲದೆ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ.

ಅಗಲಿದ ಆತ್ಮಕ್ಕೆ ದೇವರು ಶಾಂತಿ ನೆಮ್ಮದಿ ನೀಡಲಿ ಅವರ ಕುಟುಂಬದ ಎಲ್ಲ ಸದಸ್ಯರಿಗೂ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲೆಂದು ನನ್ನ ಪರವಾಗಿ ಹಾಗು ಸಮಸ್ತ ಕನ್ನಡಿಗರ ಪರವಾಗಿ ದೇವರಲ್ಲಿ ಪ್ರಾರ್ಥನೆ ಸಲ್ಲಿಸುತೇನೆ.

**ವಿ. ವಿ. ಬಿರಾದಾರ**




ಉತ್ತಮ ಗಾಯಕರಾಗಿ ಮೆಚ್ಚುಗೆ ಗಳಿಸಿದ್ದ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಅಶೋಕ ಸಿ. ಕುಂಬಾರ್ ಅವರು ಈಚೆಗೆ ನಮ್ಮನ್ನಗಲಿದ್ದಾರೆ. ಸಂಘ ಆಯೋಜಿಸಿದ್ದ, ಖ್ಯಾತ ಗಾಯಕ ಹಂಸಲೇಖ ಭಾಗವಹಿಸಿದ 'ಹಂಸ ಲೋಕ' ಕಾರ್ಯಕ್ರಮದಲ್ಲಿ ಅಶೋಕ ಕುಂಬಾರ್ ಅವರು ಹಾಡುತ್ತಿರುವ ಭಾವಚಿತ್ರ ಇಲ್ಲಿದೆ.

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

Ph : 40520770
M : 9811104398, 9811604398

Delhi Karnataka Sangha Abhimata
May-June-2021, Vol. No.31, Issue No. 8-9, Price Rs.1/-
RNI Regn. No. 53405/91, DL-SW-1/4016/19-21
Date of Publication : June 8th / 9th, Posting Date : 10th / 11th, Total Pages-24, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

